ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗ್ಗೆ ಸದನ ಆರಂಭಕ್ಕೆ ಮುನ್ನ ಈ ನವೀಕೃತ ಪ್ರವೇಶದ್ವಾರವನ್ನು ಉದ್ಘಾಟಿಸಲಿದ್ದಾರೆ. ಈ ಮೊದಲಿದ್ದ ಮರದ ದ್ವಾರವನ್ನು ತೆರವುಗೊಳಿಸಿ ಬೀಟೆ ಮರದಲ್ಲಿ ಸುಂದರ ಕೆತ್ತನೆಗಳಿಂದ ಕೂಡಿದ ದ್ವಾರಗಳು ಹಾಗೂ ಮೇಲ್ಭಾಗದಲ್ಲಿ ಲಾಂಛನ ಗಂಡುಭೇರುಂಡ ಅಳವಡಿಕೆ ಸೇರಿದಂತೆ ಆಕರ್ಷಣೀಯವಾಗಿ ದ್ವಾರವನ್ನು ನವೀಕರಿಸಲಾಗಿದೆ. ಜೊತೆಗೆ ಇದೇ ಭಾಗದಲ್ಲಿ ವಿಧಾನಸೌಧದ ತಳಮಹಡಿಯ ಮುಖ್ಯ ದ್ವಾರದಿಂದ ವಿಧಾನಸಭೆಯ ಮುಖ್ಯ ದ್ವಾರವಿರುವ ಮೊದಲ ಮಹಡಿಗೆ ಇರುವ ಮೆಟ್ಟಿಲುಗಳನ್ನು ರೆಡ್ ಕಾರ್ಪೆಟ್ ಹಾಕಿ ಶಾಸಕರ ಸ್ವಾಗತಕ್ಕೆ ಅಲಂಕರಿಸಲಾಗಿದೆ.

**ಆಧಾರ**: ಕನ್ನಡ ಪ್ರಭ, ದಿನಾಂಕ: 15.07.2024

## 7. ಪರಿಷತ್ ಸಾಕ್ಷಿಪ್ರಜ್ಞೆಗೆ ಮಸೂರ ಹಿಡಿಯಲಿರುವ ಹೊರಟ್ಟಿ

ಬರೋಬ್ಬರಿ ನಾಲ್ಕೂವರೆ ದಶಕದಿಂದ ರಾಜ್ಯ ವಿಧಾನಪರಿಷತ್‌ನ ಸಾಕ್ಷಿಪ್ರಜ್ಞೆಯಂತಿದ್ದಾರೆ ಶ್ರೀ ಬಸವರಾಜ್ ಎಸ್. ಹೊರಟ್ಟಿ. ಪ್ರಸ್ತುತ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಭೂತ ಹಾಗೂ ವರ್ತಮಾನದ ಆಗು–ಹೋಗುಗಳನ್ನು ತುಲನೆ ಮಾಡಿ ಪ್ರಸ್ತುತ ವಿಧಾನಮಂಡಲ ವ್ಯವಸ್ಥೆಯಲ್ಲಿ ಆಗಬೇಕಾದ ಬದಲಾವಣೆ ಬಗ್ಗೆ ಸಾಕಷ್ಟು ತುಡಿತ ಇಟ್ಟುಕೊಂಡಿದ್ದಾರೆ. ವಿಧಾನಪರಿಷತ್‌ನ 153ನೇ ಅಧಿವೇಶನ ಆರಂಭವಾಗಲಿದ್ದು, ಈ ಸಂದರ್ಭದಲ್ಲಿ ಹೊರಟ್ಟಿಯವರು ಲಘುವಾಗಿ ಪರಿಗಣಿಸಿರುವ ಅಧಿಕಾರಿಗಳಲ್ಲಿ ಶಿಸ್ತು ತರಲು, ಪರಿಷತ್ ಸದಸ್ಯರಿಗೆ ತಮ್ಮ ಸ್ಥಾನಮಾನದ ಅರಿವು ಮೂಡಿಸಲು ಬಯಸಿರುವ ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ.

**ಸಭಾಪತಿಗಳ 4 ಪ್ರಮುಖ ತೀರ್ಮಾನ**

- ಕಲಾಪದಲ್ಲಿ ಯಾವ ಅಧಿಕಾರಿ ಕಡ್ಡಾಯ ಹಾಜರಿರಬೇಕೆಂದು ತಿಳಿಸಲಾಗಿರುತ್ತದೆ. ಒಂದು ವೇಳೆ ಹಾಜರಾಗದಿದ್ದಲ್ಲಿ ಕ್ರಮಕೈಗೊಳ್ಳಲು ಮುಖ್ಯ ಕಾರ್ಯದರ್ಶಿಗೆ ಸೂಚನೆ ಕೊಡುತ್ತೇವೆ. ಈ ಮೂಲಕ ಪರಿಷತ್ ಬಗ್ಗೆ ಉದಾಸೀನ ತೋರುವ ಅಧಿಕಾರಿಗಳಿಗೆ ಪಾಠ ಕಲಿಸುತ್ತೇವೆ.
- ಆಯ್ಕೆಯಾದ ಜನಪ್ರತಿನಿಧಿ ಶಾಸನಸಭೆಗೆ ಬಂದ ಮೇಲೆ ಸದನದ ಘನತೆ, ಗೌರವ ಹೆಚ್ಚಿಸಬೇಕು. ಸದನದಲ್ಲಿ ನಡತೆ ಹೇಗಿರಬೇಕೆಂದು ತಿಳುವಳಿಕೆ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಇದಕ್ಕಾಗಿ ನಡವಳಿಕೆ ತಿಳಿಸುವ ಸಣ್ಣ ಪುಸ್ತಕ ನೀಡುತ್ತೇವೆ.
- ಅಧಿವೇಶನದ ಮೊದಲ ದಿನ ಆಡಳಿತ–ಪ್ರತಿಪಕ್ಷದ ಮುಖ್ಯ ಸಚೇತಕರ ಸಭೆ ಕರೆದು ಕಲಾಪದ ಚೌಕಟ್ಟು ತಿಳಿಸಲಾಗುತ್ತದೆ. ಒಂದು ವೇಳೆ ಸದಸ್ಯರು ಅಡಚಣೆ ಉಂಟು ಮಾಡಿದರೆ ಅಂತಹವರನ್ನು ಮುಲಾಜಿಲ್ಲದೆ ಹೊರಕಳಿಸಲಾಗುತ್ತದೆ.
- ವಿಧಾನಸಭೆ, ವಿಧಾನಪರಿಷತ್ ನಡುವೆ ಸಂಪರ್ಕಕೊಂಡಿಯಾಗಿ ಮಹಾ ಕಾರ್ಯದರ್ಶಿ (ಸೆಕ್ರೆಟರಿ ಜನರಲ್) ನೇಮಕದ ಚಿಂತನೆಯಿದೆ. ಉಭಯ ಸದನಗಳ ಮಧ್ಯೆ ಪರಿಣಾಮಕಾರಿ ಸಂಪರ್ಕ–ಸಂವಹನದ ದೃಷ್ಟಿಯಿಂದ ಈ ಹುದ್ದೆ ಸೃಷ್ಟಿಯ ಅಗತ್ಯವಿದೆ.

**ಆಧಾರ**: ವಿಜಯವಾಣಿ, ದಿನಾಂಕ: 15.07.2024

## 8. ಸದನದಲ್ಲಿ ಶಾಸಕರ ಹಾಜರಿ ಕಡ್ಡಾಯ

ದಿನಾಂಕ: 15.07.2024ರಿಂದ ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನ ಪೂರ್ವಭಾವಿಯಾಗಿ ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಸಭೆ ನಡೆಸಿ, ಸದನದಲ್ಲಿ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು ಹಾಗೂ ಪ್ರತಿಪಕ್ಷಗಳ ಪ್ರಶ್ನೆಗೆ ಸಮರ್ಪಕ ಉತ್ತರ ಸಿದ್ಧಪಡಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಗೃಹ ಕಛೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು, ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ನಡೆಸಿದರು. ಈ ವೇಳೆ ಸದನದಲ್ಲಿ ಎದುರಾಗುಬಹುದಾದ ಪ್ರಶ್ನೆಗಳು, ಇಲಾಖೆವಾರು ದತ್ತಾಂಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು.

ವಿಧಾನಮಂಡಲ ಅಧಿವೇಶನದಲ್ಲಿ ಚರ್ಚೆಯಾಗುವ ವಿಷಯಗಳಿಗೆ ಸಮರ್ಪಕ ಉತ್ತರ ನೀಡಲು ಸಿದ್ಧರಾಗಿರಬೇಕು ಅಧಿವೇಶನದಲ್ಲಿ ಕಾರ್ಯದರ್ಶಿಗಳು ಖುದ್ದು ಹಾಜರಿದ್ದು, ಸಚಿವರಿಗೆ ತಮ್ಮ ಇಲಾಖೆಗಳ ವಿಷಯಗಳ ಕುರಿತು ಮಾಹಿತಿ ಒದಗಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಈ ಬಾರಿ ಸಂಪೂರ್ಣ ಬಜೆಟ್‌ಗೆ ಮಾರ್ಚ್‌ನಲ್ಲಿಯೇ ಅನುಮೋದನೆ ದೊರೆತಿರುವ ಕಾರಣ ಇದು ಬಜೆಟ್ ಬಗ್ಗೆ ಚರ್ಚಿಸುವ ಅಧಿವೇಶನವಲ್ಲ. ಸಾಮಾನ್ಯವಾಗಿ ಮಾರ್ಚ್‌ನಲ್ಲಿ ಲೇಖಾನುದಾನ ಪಡೆದು, ಮಳೆಗಾಲದ ಅಧಿವೇಶನದಲ್ಲಿ ಪೂರ್ಣ ಬಜೆಟ್ ಅನುಮೋದನೆಯಾಗಿರುವ ಹಿನ್ನೆಲೆಯಲ್ಲಿ ಪ್ರತಿಪಕ್ಷದವರು ಈ ಬಾರಿಯ ಸಂಪೂರ್ಣ ಅಧಿವೇಶನವನ್ನು ವಿವಿಧ ಆರೋಪ ಮಾಡುವ ಕುರಿತು ಬಳಸಿಕೊಳ್ಳುವ ಸಾಧ್ಯತೆಯಿದೆ. ಇದಕ್ಕೆ ಸೂಕ್ತ ಉತ್ತರ ನೀಡಲು ಅಧಿಕಾರಿಗಳು ಸಿದ್ಧರಾಗಿರಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹಾಗೂ ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

**ಆಧಾರ**: ವಿಶ್ವವಾಣಿ, ದಿನಾಂಕ: 15.07.2024

## 9. ಸುರೇಶ್‌ಬಾಬು, ಭೋಜೇಗೌಡ ಜೆಡಿಎಸ್ ಶಾಸಕಾಂಗ ನಾಯಕರು

ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರನ್ನು ಘೋಷಿಸಲಾಗಿದೆ. ವಿಧಾನಸಭೆಯಲ್ಲಿ ಚಿಕ್ಕನಾಯಕಹಳ್ಳಿ ಶಾಸಕ ಸುರೇಶ್ ಬಾಬು ಹಾಗೂ ಪರಿಷತ್ತಿನಲ್ಲಿ ನೈಋತ್ಯ ಶಿಕ್ಷಕರ ಕ್ಷೇತ್ರದ ಸದಸ್ಯ ಎಸ್.ಎಲ್ ಭೋಜೇಗೌಡ ಶಾಸಕಾಂಗ ಪಕ್ಷದ ನಾಯಕರಾಗಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷರ ಶಿಫಾರಸ್ಸಿನ ಮೇರೆಗೆ ನೇಮಿಸಲಾಗಿದೆ ಎಂದು ಸ್ಪೀಕರ್ ಯು.ಟಿ.ಖಾದರ್‌ರವರು, ಸಭಾಪತಿ ಬಸವರಾಜ ಎಸ್. ಹೊರಟ್ಟಿರವರು ಪ್ರಕಟಿಸಿದರು.

**ಆಧಾರ**: ವಿಜಯವಾಣಿ, ದಿನಾಂಕ: 16.07.2024

## 10. ವಿಧಾನಸಭೆಯಲ್ಲಿ ಶಾಸಕರ ಮೇಲೆ ಎಐ ಕ್ಯಾಮೆರಾ ಕಣ್ಣು

ವಿಧಾನಸಭೆಗೆ ಪ್ರವೇಶಿಸುವ ಹಾಗೂ ಹೊರ ನಡೆಯುವ ಶಾಸಕರನ್ನು ಸಮಯ, ಭಾವಚಿತ್ರ ಸಹಿತ ಸೆರೆ ಹಿಡಿಯಲು ಮೂರೂ ದ್ವಾರಗಳಲ್ಲೂ ತಲಾ ಎರಡು ಎಐ ಕೆಮೆರಾ (ಆರ್ಟಿಫಿಷಿಯಲ್ ಇಂಟಿಲಿಜೆನ್ಸ್) ಅಳವಡಿಸಲಾಗಿದೆ.

ಈ ಬಗ್ಗೆ ವಿಧಾನಸಭೆಯಲ್ಲಿ ಮಾಹಿತಿ ನೀಡಿದ ವಿಧಾನಸಭೆ ಸಭಾಧ್ಯಕ್ಷ ಶ್ರೀ ಯು.ಟಿ.ಖಾದರ್, ಸದನಕ್ಕೆ ಎಲ್ಲರಿಗಿಂತಲೂ ಮೊದಲು ಬರುವ ಶಾಸಕರಿಗೆ ಅಭಿನಂದನೆ ಸಲ್ಲಿಸುವ ಸಂಪ್ರದಾಯ ಶುರು ಮಾಡಿದ್ದೇವೆ. ಸದನಕ್ಕೆ ತಡವಾಗಿ ಬಂದರೂ ಸದನ ಮುಗಿಯುವವರೆಗೂ ಇರುವ ಸದಸ್ಯರನ್ನು ಗುರುತಿಸುತ್ತಿಲ್ಲ ಎಂಬುದು ಕೆಲ ಸದಸ್ಯರ ಆಕ್ಷೇಪವಾಗಿತ್ತು. ಇದನ್ನು ತಪ್ಪಿಸಲು ಬರುವ ಸಮಯ ಹಾಗೂ ಹೋಗುವ ಸಮಯವನ್ನು ಖಚಿತವಾಗಿ ದಾಖಲಿಸಲು ಎಐ ಕೆಮೆರಾ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಕೆಮೆರಾ ಸದನಕ್ಕೆ ಪ್ರವೇಶಿಸುವಾಗ ಮತ್ತು ಹೊರಹೋಗುವಾಗ ಸಮಯ ಹಾಗೂ ಫೋಟೋ ಕ್ಲಿಕ್ಕಿಸಿಕೊಂಡು ಸಭಾಧ್ಯಕ್ಷರ ಕಛೇರಿಗೆ ಮಾಹಿತಿ ರವಾನಿಸುತ್ತದೆ ಎಂದರು.

ಇದೇ ವೇಳೆ ಕೆಜಿಎಫ್ ಶಾಸಕಿ ರೂಪಾ ಶಶಿಧರ್ 9.51ಕ್ಕೆ ಕಲಾಪಕ್ಕೆ ಆಗಮಿಸುವ ಮೂಲಕ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕೆಮರಾ ಉದ್ಘಾಟಿಸಿದ್ದಾರೆ. ಇನ್ನು 10.20ಕ್ಕೆ ಹೊರಗೆ ಹೋಗುವ ಮೂಲಕ ಹೊರಕ್ಕೆ ಹೋಗುವ ಕೆಮೆರಾಗಳನ್ನು ಶಾಸಕ ಕೆ.ಷಡಕ್ಷರಿ ಉದ್ಘಾಟಿಸಿದ್ದಾರೆ ಎಂದು ಖಾದರ್ ಹಾಸ್ಯ ಮಾಡಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ: 16.07.2024

## 11. ಕಲಾಪ ವೀಕ್ಷಿಸಿದ ಛತ್ತೀಸ್‌ಗಢ ಮಾಜಿ ಸಿಎಂ ಭೂಪೇಶ್ ಬಾಘೇಲ್

ರಾಜ್ಯ ವಿಧಾನಸಭೆಯ ಅಧಿವೇಶನವನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಛತ್ತೀಸ್‌ಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಹಾಗೂ ಕೇಂದ್ರದ ಮಾಜಿ ಸಚಿವ ಪ್ರದೀಪ್ ಜೈನ್ ವೀಕ್ಷಿಸಿದರು. ದಿನಾಂಕ: 15.07.2024ರಂದು ಸದನಕ್ಕೆ ಆಗಮಿಸಿದ ಮುಖಂಡರು ಸುಮಾರು ಒಂದು ತಾಸಿಗೂ ಹೆಚ್ಚು ಕಾಲ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ವೀಕ್ಷಿಸಿದರು. ಈ ವೇಳೆ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಬ್ಬರನ್ನು ಸ್ವಾಗತಿಸಿದರು. ರಾಜ್ಯ ವಿಧಾನಸಭೆ ಕಲಾಪ ವೀಕ್ಷಿಸಲು ಸದನಕ್ಕೆ ಆಗಮಿಸಿದ್ದಕ್ಕೆ ಅಭಿನಂದಿಸಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ: 16.07.2024

## 12. ಮುಂದಿನ ವರ್ಷದಿಂದ ಮಾರ್ಚ್‌ನಲ್ಲಿ ಬಜೆಟ್ ಮಂಡನೆಗೆ ನಿರ್ಧಾರ: ಸ್ಪೀಕರ್

ಮುಂದಿನ ವರ್ಷದಿಂದ ಪ್ರತಿ ಮಾರ್ಚ್‌ನಲ್ಲಿ ಬಜೆಟ್ ಮಂಡಿಸಿ ಲೇಖಾನುದಾನ ಪಡೆಯಲು ನಿರ್ಧರಿಸಿದ್ದು, ಮುಂಗಾರು ಅಧಿವೇಶನದ ವೇಳೆ ಇಲಾಖಾವಾರು ಬೇಡಿಕೆಗಳ ಮೇಲೆ ಚರ್ಚೆ ನಡೆಸಿ ಅಂಗೀಕಾರ ಪಡೆಯಲು ನಿರ್ಣಯಿಸಿದೆ. ದಿನಾಂಕ: 15.07.2024ರಂದು ನಡೆದ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡಿದ್ದು, ಮಧ್ಯಾಹ್ನದ ನಂತರ ನಡೆದ ಕಲಾಪದಲ್ಲಿ ಸ್ಪೀಕರ್ ಶ್ರೀ ಯು.ಟಿ.ಖಾದರ್ ಈ ವಿಷಯ ಪ್ರಕಟಿಸಿದರು.

ಪ್ರತಿ ವರ್ಷ ಶಾಸಕರ ದಿನಚರಣೆ ಸಂಭ್ರಮದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲೂ ಬಿಎಸಿ ಸಭೆಯಲ್ಲಿ ನಿರ್ಧಾರ ಮಾಡಿದ್ದು, ಈಗಾಗಲೇ ಶಾಸಕರಿಗೆ ಅರ್ಜಿ ನಮೂನೆಯನ್ನು ಕೊಡಲಾಗಿದೆ. ಅದರಲ್ಲಿ ಅವರವರ ಇಷ್ಟದ ಕ್ರೀಡೆ, ಭಾಗವಹಿಸಲು ಇಚ್ಛಿಸುವ ಸಾಂಸ್ಕೃತಿಕ ಕಾರ್ಯಕ್ರಮದ ಬಗ್ಗೆ ನಮೂದಿಸಬೇಕು. ಇದರಿಂದ ಶಾಸಕರಿಗೆ ಮನರಂಜನೆ ಜತೆಗೆ ಪ್ರತಿಭೆಗೆ ವೇದಿಕೆ ಸಿಕ್ಕಂತೆಯೂ ಆಗಲಿದೆ ಎಂದರು.

**ಆಧಾರ:** ಉದಯವಾಣಿ, ದಿನಾಂಕ: 16.07.2024

## 13. ಅಗಲಿದ ಗಣ್ಯರಿಗೆ ಸದನ ಶ್ರದ್ಧಾಂಜಲಿ

ಮಾಜಿ ಸಚಿವೆ, ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ನಾಗಮ್ಮ ಕೇಶವಮೂರ್ತಿ, ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರಾಗಿದ್ದ ವಿ. ಶ್ರೀನಿವಾಸ ಪ್ರಸಾದ್, ಹಿರಿಯ ನಟ, ನಿರ್ದೇಶಕ ನಿರ್ಮಾಪಕ ದ್ವಾರಕೀಶ್, ನಟಿ, ನಿರೂಪಕಿ ಅಪರ್ಣಾ ಸೇರಿದಂತೆ ಇತ್ತೀಚೆಗೆ ನಿಧನರಾದ ಗಣ್ಯರಿಗೆ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಭಾವಪೂರ್ಣ ಸಂತಾಪ ಸಲ್ಲಿಸಲಾಯಿತು.

ವಿಧಾನಸಭೆ ಕಲಾಪ ಬೆಳಗ್ಗೆ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನ ಪರಿಷತ್ತಿನಲ್ಲಿ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ನಾಗಮ್ಮ ಕೇಶವಮೂರ್ತಿ ದಾವಣಗೆರೆಯ ಇಂದಿರಾಗಾಂಧಿ ಸ್ಪೀಕರ್ ಮಂಡಿಸಿದ ಸಂತಾಪ ಸೂಚನೆಯನ್ನು ಬೆಂಬಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಗಮ್ಮ ಕೇಶವಮೂರ್ತಿಯವರು ಸಾಮಾಜಿಕ ಸೇವೆಯಲ್ಲಿ ಮದರ್ ಥೆರೇಸಾ, ರಾಜಕಾರಣದಲ್ಲಿ ದಾವಣಗೆರೆಯ ಇಂದಿರಾಗಾಂಧಿ ಎಂದೇ ಖ್ಯಾತಿ ಪಡೆದಿದ್ದರು. ಶ್ರೀನಿವಾಸ ಪ್ರಸಾದ್ ಅವರು, ಆರು ಬಾರಿ ಚಾಮರಾಜನಗರ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿ ಶೋಷಿತರ ದೀನದಲಿತರ ಹಿಂದುಳಿದವರ ಧ್ವನಿಯಾಗಿದ್ದರು ಎಂದು ಗುಣಗಾನ ಮಾಡಿದರು.

ದ್ವಾರಕೀಶ್, ಕಮಲಾ ಹಂಪನಾ ಸಾಧನೆ ಸ್ಮರಣೀಯ ನಟ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಸಿಂಗಾಪುರದಲ್ಲಿ ರಾಜಾಕುಳ್ಳ ಸಿನಿಮಾ ವಿದೇಶದಲ್ಲೇ ಚಿತ್ರೀಕರಣಗೊಂಡ ಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ಎಂದು ಸ್ಮರಿಸಿದರು. ಸಾಹಿತಿ ಕಮಲಾ ಹಂಪನಾ ಅವರು ಜೈನ ಧರ್ಮ ಹಳಗನ್ನಡ ಗ್ರಂಥ ಸಂಪಾದನೆ ಮಾಡಿದ್ದರು. ದಾನ ಚಿಂತಾಮಣಿ, ಅತ್ತಿಮಬ್ಬೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದು, ನಾಡೋಜ ಗೌರವವೂ ಅವರಿಗೆ ಸಂದಿತ್ತು ಎಂದು ಹೇಳಿದರು.

ಪ್ರತಿಪಕ್ಷದ ನಾಯಕ ಶ್ರೀ ಆರ್. ಆಶೋಕ್ ಮಾತನಾಡಿ ನಾನು ಶಾಸಕನಾಗಿದ್ದಾಗ ಮತ್ತು ಶಾಸಕನಾಗುವ ಮೊದಲು ಸದಸ್ಯರಾಗಿದ್ದವರು ನಿಧನರಾಗಿದ್ದಾರೆ. ಅವರು ಈ ಸದನಕ್ಕೆ ಗೌರವ ತರುವ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಸಾಹಿತ್ಯ ಚಿತ್ರರಂಗಕ್ಕೂ ಗೌರವ ತರುವ ರೀತಿಯಲ್ಲಿ ಕೆಲಸ ಮಾಡಿದ ಗಣ್ಯರೂ ಅಗಲಿದ್ದಾರೆ. ಇವರೆಲ್ಲರಿಗೂ ಸಂತಾಪವನ್ನು ಸೂಚಿಸುವುದಾಗಿ ತಿಳಿಸಿದರು. ನಾಗಮ್ಮ ಕೇಶವಮೂರ್ತಿಯವರು ಮಹಿಳೆಯರಿಗೆ ದಾರಿದೀಪವಾಗಿದ್ದವರು ಎಂದು ಸ್ಮರಿಸಿದರು. ಶ್ರೀನಿವಾಸ್ ಪ್ರಸಾದ್ ಅವರು ಯಾವುದೇ ಪಕ್ಷದಲ್ಲಿದ್ದರೂ ತಮ್ಮ ತನವನ್ನು ಬಿಟ್ಟುಕೊಟ್ಟಿರಲಿಲ್ಲ. ತುಳಿತಕ್ಕೆ ಒಳಗಾದವರ ಧ್ವನಿಯಾಗಿ ಕೆಲಸ ಮಾಡಿದ್ದರು. ಅಪರ್ಣಾ ಅವರ ಧ್ವನಿ ಮೆಟ್ರೋದಲ್ಲಿ ಉಳಿದಿದೆ. ದ್ವಾರಕೀಶ್ ಅವರು ಹಾಸ್ಯ ನಟರಾಗಿ ಹೆಚ್ಚು ಚಿರಪರಿಚಿತರಾದವರು ಎಂದು ಮೃತರ ಗುಣಗಾನ ಮಾಡಿದರು.

**ಆಧಾರ**: ವಿಶ್ವವಾಣಿ, ದಿನಾಂಕ: 16.07.2024

## 14. ಕಲಾಪದಲ್ಲಿ ಅಧಿಕಾರಿ, ಸಚಿವರ ಹಾಜರಿ ಕಡ್ಡಾಯ: ಹೊರಟ್ಟಿ

ವಿಧಾನಪರಿಷತ್‌ನಲ್ಲಿ ಕಲಾಪ ನಡೆಯುವಾಗ ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು ಎಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಸೂಚಿಸಿದ್ದಾರೆ. ಕಲಾಪ ನಡೆಯುವಾಗ ಸಚಿವರು, ಅಧಿಕಾರಿಗಳ ಗೈರು ನನ್ನ ಗಮನಕ್ಕೆ ಹಲವು ಬಾರಿ ಬಂದಿದೆ. ಈ ಬಾರಿ ಇಂಥದ್ದನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಸದನ ನಡೆಯುವಾಗ ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು, ಈ ನಿಟ್ಟಿನಲ್ಲಿ ಗಮನ ಹರಿಸಿ ಎಂದು ಸಭಾನಾಯಕ, ಸಚಿವ ಶ್ರೀ ಎಸ್.ಎನ್.ಬೋಸರಾಜುರವರಿಗೆ ಖಡಕ್ ಸೂಚನೆ ನೀಡಿದ್ದಾರೆ. ಅಧಿಕಾರಿಗಳು ಗೈರಾದರೆ ಠರಾವು ಪಾಸ್ ಮಾಡಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

**ಆಧಾರ**: ವಿಜಯವಾಣಿ, ದಿನಾಂಕ: 16.07.2024

## 15. ಸಚಿವರಿಗೆ ಅಸೆಂಬ್ಲಿ ಫ್ರಂ ಹೋಂ ಮಾಡಿ

ಕರೋನಾ ಸಮಯದಲ್ಲಿ ವರ್ಕ್ ಫ್ರಂ ಹೋಂ ಇತ್ತು. ಇನ್ಮುಂದೆ ಎಲ್ಲ ಸಚಿವರಿಗೆ ಅಸೆಂಬ್ಲಿ ಫ್ರಂ ಹೋಂ ಮಾಡಿಬಿಡಿ. ನಾವು ಮನೆಯಲ್ಲಿ ಕೂತೇ ಪ್ರಶ್ನೆ ಕೇಳುತ್ತೇವೆ. ಅವರೂ ಮನೆಯಿಂದಲೇ ಉತ್ತರಿಸಲಿ. ಹೀಗೆಂದು ಸದನಕ್ಕೆ ಬಾರದ ಸಚಿವರನ್ನು ಮಾತಿನ ಮೂಲಕವೇ ಚುಚ್ಚಿದ್ದು ಬಿಜೆಪಿಯ ಹಿರಿಯ ಶಾಸಕ ಸುರೇಶ್ ಕುಮಾರ್.

ದಿನಾಂಕ: 18.07.2024ರಂದು ಬೆಳಿಗ್ಗೆ 10 ಗಂಟೆಗೆ ಸದನದ ಆರಂಭಗೊಂಡಾಗ ಸಚಿವ ಸಾಲಿನ ಬಹುತೇಕ ಖುರ್ಚಿಗಳು ಖಾಲಿಯಿದ್ದವು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಶಾಸಕರು, ಸದನದಲ್ಲಿರಬೇಕಾದ ಸಚಿವರನ್ನು ಕರೆಸಿ ಎಂದು ಸ್ಪೀಕರ್ ಶ್ರೀ ಯು.ಟಿ.ಖಾದರ್ ಮೇಲೆ ಒತ್ತಡ ಹೇರಿದರು. ಸಚಿವರಿಲ್ಲ ಎನ್ನುವ ಕಾರಣಕ್ಕೆ ಬಿಜೆಪಿ ಶಾಸಕರು ಸಭಾತ್ಯಾಗವನ್ನು ಮಾಡಿದರು.

ಬಳಿಕ ಸದನಕ್ಕೆ ಬಂದಾಗಲೂ ಹಲವು ಸಚಿವರು ಗೈರಾಗಿರುವುದನ್ನು ಗಮನಿಸಿದ ಬಿಜೆಪಿ ಹಿರಿಯ ಶಾಸಕ ಸುರೇಶ್‌ಕುಮಾರ್, ಕೋವಿಡ್ ಸಂದರ್ಭದಲ್ಲಿ ವರ್ಕ್ ಫ್ರಂ ಹೋಂ ಜಾರಿಯಲ್ಲಿತ್ತು. ಈಗ ಸಚಿವರು ಸದನಕ್ಕೆ ಬಾರದಿದ್ದರೆ ಅಸೆಂಬ್ಲಿ ಫ್ರಂ ಹೋಂ ಮಾಡಿಬಿಡಿ ಎಂದು ಟೀಕಿಸಿದರು. ಸದನ ಆರಂಭಗೊಂಡು ಗಂಟೆ ಕಳೆದರೂ ಸಚಿವರು ಸದನಕ್ಕೆ ಬಂದಿಲ್ಲ ಹೀಗಾಗಿ ಅಸೆಂಬ್ಲಿ ಫ್ರಂ ಹೋಂ ಮಾಡಿದರೆ, ನಾವು ಅಲ್ಲಿಂದಲೇ ಕೇಳುತ್ತೇವೆ. ಅವರು ಉತ್ತರವನ್ನು ನೀಡಲಿ ಎಂದು ಟೀಕಿಸಿದರು.

ಇದಕ್ಕೂ ಮೊದಲು ಬಿಜೆಪಿ ಶಾಸಕರು ಸದನವನ್ನು 10 ನಿಮಿಷ ಮುಂದೂಡಿ, ಸಚಿವರನ್ನು ಬರುವಂತೆ ಸೂಚನೆ ನೀಡಿ ಎಂದು ಆಗ್ರಹಿಸಿದರು. ಆದರೆ ಇದಕ್ಕೆ ಸ್ಪೀಕರ್ ಒಪ್ಪದಿದ್ದಾಗ ಬಿಜೆಪಿಗರು ಸಭಾತ್ಯಾಗ ಮಾಡಿದರು. ಇದಕ್ಕೂ ಮೊದಲು ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅಧಿವೇಶನ ಸುಗಮವಾಗಿ ನಡೆಯಬೇಕು ಎಂದು ಹೊಸ ನಿಯಮ ತಂದಿದ್ದೀರಿ. ಆಡಳಿತ ಪಕ್ಷ ಮಾದರಿಯಾಗಬೇಕು ಇದು ಯಾವ ರೀತಿ ಮಾಡೆಲ್ ಆಗಿದ್ದಾರೆ ನೋಡಿ ಸಚಿವರಿಲ್ಲ. ಹೀಗಾಗಿ ಸದನದ ಕಲಾಪವನ್ನು 10 ನಿಮಿಷ ಮುಂದೂಡಿ ಎಂದು ಆಗ್ರಹಿಸಿದರು.

ಆಡಳಿತ ಪಕ್ಷದ ಮುಖ್ಯ ಸಚೇತಕ ಶ್ರೀ ಅಶೋಕ್ ಪಟ್ಟಣ್ಣ ಮಾತನಾಡಿ, ಶಾಸಕರಿಗೆ ವಿಪ್ ನೀಡಲಾಗಿದೆ. ದೂರವಾಣಿ ಮೂಲಕ ಮಾತನಾಡಿದ್ದೇನೆ ಎಂದು ಹೇಳಲು ಮುಂದಾದರು. ಇದಕ್ಕೆ ಶ್ರೀ ಅಶೋಕ್ ರಾಜೀನಾಮೆ ಕೊಟ್ಟು ನೀವು ಮಂತ್ರಿಯಾಗಿ ಎಂದು ಛೇಡಿಸಿದರು. ಈ ವೇಳೆ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಗಂಭೀರವಾದ ಭ್ರಷ್ಟಚಾರಕ್ಕೆ ಸಂಬಂಧಿಸಿದ ವಿಚಾರವನ್ನು ಪ್ರಸ್ತಾಪಿಸುತ್ತೇವೆ. ಮುಖ್ಯಮಂತ್ರಿಗಳಿಲ್ಲ ಸಚಿವರಿಲ್ಲ ಅವರಿಗೆ ನೈತಿಕ ಹೊಣೆಯಿಲ್ಲ ಎಂದು ಟೀಕಿಸಿದರು.

ಈ ವೇಳೆ ಸಭಾಧ್ಯಕ್ಷ ಶ್ರೀ ಯು.ಟಿ.ಖಾದರ್ ಮಾತನಾಡಿ, ವಿಪ್ ಅವರೇ ಎಲ್ಲಿದ್ದೀರಾ? ಮನೆಯಲ್ಲಿದ್ದೀರಾ ಅಥವಾ ಅಸೆಂಬ್ಲಿಯಲ್ಲಿದ್ದೀರಾ ಸರ್ಕಾರ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಸಚಿವರಿಲ್ಲದೇ ಇರುವುದು ತಪ್ಪು, ಅರ್ಥ ಮಾಡಿಕೊಳ್ಳಬೇಕು. ಪ್ರತಿಪಕ್ಷದವರ ಆಗ್ರಹದಲ್ಲಿ ತಪ್ಪು ಇಲ್ಲ ಎಂದು ಅಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಆಡಳಿತ ಪಕ್ಷದ ಶಾಸಕ ಶ್ರೀ ರಾಜು ಕಾಗೆ, ನಮ್ಮ ಕ್ಷೇತ್ರದವರು ಭೇಟಿಯಾಗಲು ಬಂದಿರುತ್ತಾರೆ. ಅವರನ್ನು ಮಾತನಾಡಿಸಿ ಬರಲು ತಡವಾಗುತ್ತದೆ. ನೀವು ಅಧಿವೇಶನವನ್ನು 9.30ಕ್ಕೆ ಕರೆದರೆ ತೊಂದರೆಯಾಗುತ್ತದೆ. 11 ಗಂಟೆಗೆ ಆರಂಭಿಸಿದರೆ ಅನುಕೂಲ ಎಂದರು. ಮಾತು

ಮುಂದುವರಿಸಿದ ಶ್ರೀ ಖಾದರ್, ವಿಧೇಯಕಗಳಿವೆ ಚರ್ಚೆಯಾಗಬೇಕು. ಕಾರ್ಯಕಲಾಪಗಳ ಪಟ್ಟಿ ಮುಗಿಸಬೇಕು ಸಚಿವರಿಗೂ ಜವಾಬ್ದಾರಿ ಇರಬೇಕು. ಅಧಿವೇಶನ ನಡೆಸುವ ವೇಳೆ ಸಭೆಗಳನ್ನು ನಡೆಸಬಾರದು ಎಂದರು.

**ಆಧಾರ**: ವಿಶ್ವವಾಣಿ, ದಿನಾಂಕ: 19.07.2024

## 16. ಸ್ಪೀಕರ್ ಖಾದರ್ ಖದರ್ ಜೋರು

ಅಧಿವೇಶನ ನಡೆಯುವಷ್ಟು ದಿನ ಸದನದಲ್ಲಿ ಸಭಾಧ್ಯಕ್ಷರೇ ಸುಪ್ರೀಂ. ಈ ಸ್ಥಾನಕ್ಕೆ ಕರಾವಳಿಯ ಹಿರಿಯ ಶಾಸಕರು ಆಯ್ಕೆಯಾದಾಗ ಘಟಾನುಘಟಿಗಳು ನಿಭಾಯಿಸಿದ ಹುದ್ದೆಗೆ ಇವರು ಸಮರ್ಥರೇ ಎಂದು ಅನುಮಾನಿಸಿದವರೇ ಹೆಚ್ಚು. ಆದರೆ ಎಲ್ಲರ ಸಂಶಯವನ್ನು ಸುಳ್ಳು ಮಾಡುವಂತೆ ಸ್ಪೀಕರ್ ಸ್ಥಾನಕ್ಕೊಂದು ಖದರ್ ತಂದುಕೊಟ್ಟವರು, ಹಾಲಿ ಸಭಾಧ್ಯಕ್ಷ ಶ್ರೀ ಯು.ಟಿ.ಖಾದರ್.

ಕರಾವಳಿ ಭಾಗದ ಶಾಸಕರು ವಿಷಯ ಪ್ರಸ್ತಾಪಿಸಿ ಮಾತನಾಡುವಾಗ ತಾವು ಪ್ರತಿನಿಧಿಸುವ ಉಳ್ಳಾಲವನ್ನು ಸೇರಿಸಿಕೊಂಡೇ ಮಾತನಾಡಿ ಎಂಬ ಸೂಕ್ಷ್ಮ ಮಾತಿನ ಮೂಲಕವೇ ತಮ್ಮ ಊರಿನ ಪ್ರೀತಿ ವ್ಯಕ್ತಪಡಿಸುವ ಖಾದರ್ ಅವರು, ದಕ್ಷಿಣ ಕನ್ನಡ ಜಿಲ್ಲೆಯ ಸಹಜ ಕನ್ನಡದಲ್ಲೇ ಶಾಸಕರಿಗೆ ಕ್ಲಾಸ್ ತೆಗೆದುಕೊಳ್ಳುವುದೂ ಇದೆ. ಕೆಲವರಿಗೆ ಅವರ ಭಾಷೆ ಅರ್ಥೈಸಿಕೊಳ್ಳುವುದು ತೊಡಕಾದರೂ ನಗುತ್ತಲೇ ಎಲ್ಲವನ್ನೂ ಸ್ವೀಕರಿಸುವ ಮನೋಭಾವ ಅವರದ್ದು.

ಸರ್ಕಾರದಲ್ಲಿ ಎರಡು ಬಾರಿ ಪ್ರಬಲ ಖಾತೆಗಳ ಸಚಿವರಾಗಿ ಸಮರ್ಥ ಕಾರ್ಯನಿರ್ವಹಣೆ ಮಾಡಿದ್ದ ಆಪ್ತರಿಂದ 'ಯುಟಿ' ಎಂದೇ ಕರೆಸಿಕೊಳ್ಳುವ ಶ್ರೀ ಯು.ಟಿ.ಖಾದರ್, ಶುಕ್ರವಾರ ಕಲಾಪ ನಿರ್ವಹಿಸಿದ್ದು ಒಂದು ರೀತಿಯಲ್ಲಿ ಮೆಚ್ಚುಗೆಗೆ ಪಾತ್ರವಾದರೂ ಎಲ್ಲೋ ಒಂದು ಸಂಸದೀಯ ವ್ಯವಸ್ಥೆಯಲ್ಲಿ ವಿಪಕ್ಷಗಳನ್ನು ಕಡೆಗಣಿಸಿದರಾ? ಎನ್ನುವ ಅನುಮಾನ ಬರುವಂತೆ ಮಾಡಿದ್ದು ಹೌದು. ಸರ್ಕಾರದ ವಿರುದ್ಧ ವಿಪಕ್ಷಗಳು ಸ್ಪೀಕರ್ ಪೀಠದ ಎದುರಿನ ಬಾವಿಗಿಳಿದು ದಿನವಿಡೀ ಪ್ರತಿಭಟನೆ ನಡೆಸುತ್ತಿದ್ದರೂ ಪ್ರವಾಹದಂತಹ ಗಂಭೀರ ವಿಷಯದ ಬಗ್ಗೆ ಆಡಳಿತಪಕ್ಷದ ಸದಸ್ಯರಿಂದ ಅಭಿಪ್ರಾಯ ಪಡೆದು ಸರ್ಕಾರದಿಂದ ಉತ್ತರ ಕೊಡಿಸಿದ್ದು ಏಕಪಕ್ಷೀಯ ಕಾರ್ಯನಿರ್ವಹಣೆ ಎನಿಸದಿರದು.

ಸಭಾಧ್ಯಕ್ಷರ ಪೀಠದಲ್ಲಿ ಕುಳಿತು ಸಿಎಂ, ಡಿಸಿಎಂ, ವಿಪಕ್ಷ ನಾಯಕರು, ಸಚಿವರು ಹಿರಿಯ ಮತ್ತು ಕಿರಿಯ ಸದಸ್ಯರನ್ನು ತಮ್ಮ ಚಾಕಚಕ್ಯತೆಯಿಂದಲೇ ಸಂಭಾಳಿಸಿಕೊಂಡು ಹೋಗುವ ಕಲೆ ಅವರಿಗೆ ಕರಗತವಾಗಿದೆ. ಸಾಕಷ್ಟು ಹಾಸ್ಯ ಚಟಾಕಿ ಹಾರಿಸುತ್ತಲೇ ಶಾಸಕರ ಕಿವಿ ಹಿಂಡುವ ಖಾದರ್, ವಿಧಾನಸಭೆ ಮತ್ತು ವಿಧಾನಸೌಧವನ್ನು ಅಂದಗಾಣಿಸುವತ್ತ ಗಂಭೀರ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಇದಕ್ಕೆ ಪಕ್ಷಾತೀತವಾಗಿ ಮನ್ನಣೆ ಸಿಕ್ಕಿರುವುದೇ ಅವರ ಸಮರ್ಥ ಕಾರ್ಯವೈಖರಿಗೆ ಹಿಡಿದ ಕನ್ನಡಿ.

ಸಭಾಧ್ಯಕ್ಷರಾದ ಬಳಿಕ ಬೆಳಗಾವಿಯಲ್ಲಿಯೂ ಅಧಿವೇಶನ ನಡೆಸಿರುವ ಅವರು, ಕಲಾಪಕ್ಕೆ ನಿಗಿದಿತ ಸಮಯಕ್ಕೆ ಬರುವ ಶಾಸಕರಿಗೆ ಬಹುಮಾನ ಕೊಡುವುದೂ ಸೇರಿದಂತೆ ಹಲವು ವಿನೂತನ ಪ್ರಯೋಗ ಮಾಡಿ ಯಶಸ್ಸು ಕಂಡಿದ್ದಾರೆ ಆ ಸ್ಥಾನದಲ್ಲಿ ಕುಳಿತು ಸಹಜವಾಗಿಯೇ ಆಡಳಿತ ಪಕ್ಷಕ್ಕೆ ಹೆಚ್ಚು ಆದ್ಯತೆ ಕೊಡಲಾಗುತ್ತದೆ ಎನ್ನುವುದಕ್ಕೆ ಅಪವಾದ ಎಂಬಂತೆ ವಿಪಕ್ಷಗಳತ್ತವೂ ಸಮಾನ ದೃಷ್ಟಿ ಹೊಂದಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 20.07.2024

## 17. ವಿಧಾನಸೌಧದಲ್ಲಿ ಚದುರಂಗ ಹಬ್ಬ





ಅಂತಾರಾಷ್ಟ್ರೀಯ ಚದುರಂಗ ದಿನಾಚರಣೆ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಕರ್ನಾಟಕ ವಿಧಾನಮಂಡಲ ಮತ್ತು ಅಖಿಲ ಭಾರತೀಯ ಚೆಸ್ ಫೆಡರೇಷನ್ ಸಹಯೋಗದೊಂದಿಗೆ ಶನಿವಾರ ಲೆಜಿಸ್ಲೇಚರ್ ಕಪ್–2024 ಪಂದ್ಯಾವಳಿ ಅಯೋಜಿಸಲಾಗಿತ್ತು.

ಪಂದ್ಯಾವಳಿಗೆ ವಿಧಾನಸಭೆ ಸ್ಪೀಕರ್ ಶ್ರೀ ಯು.ಟಿ.ಖಾದರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಚದುರಂಗ ಆಟವನ್ನು ಇನ್ನಷ್ಟು ಪ್ರಚುರಪಡಿಸುವ ನಿಟ್ಟಿನಲ್ಲಿ ಈ ಟೂರ್ನಿ ಅಯೋಜಿಸಲಾಗಿದೆ. ಬುದ್ಧಿವಂತರ ಆಟ ಎಂದೇ ಪರಿಗಣಿಸಲಾಗುವ ಈ ಕ್ರೀಡೆಗೆ ದೇಶ–ವಿದೇಶಗಳಲ್ಲೂ ಮನ್ನಣೆ ಇದೆ. ಈ ಆಟ ಆಡುವುದರಿಂದ ಬುದ್ಧಿವಂತಿಕೆ, ತಾಳ್ಮೆಯ ಗುಣಗಳು ಬೆಳೆಯುತ್ತವೆ ಎಂದರು.

ಚದುರಂಗ ಆಟಗಾರ ವಿಶ್ವನಾಥನ್ ಆನಂದ್ ಅವರು ಈ ಕ್ರೀಡೆಯಲ್ಲಿ ಭಾರತದ ಕೀರ್ತಿಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಿದವರು. ಅವರ ಪ್ರೇರಣೆಯಿಂದ ಈಗ ಬಹಳಷ್ಟು ಆಟಗಾರರು ಚೆಸ್‌ನಲ್ಲಿ ತಮ್ಮ ಮುದ್ರೆ ಒತ್ತುತ್ತಿದ್ದಾರೆ. ಇವರಿಂದ ಮತ್ತಷ್ಟು ಜನರಿಗೆ ಸ್ಫೂರ್ತಿ ಪಡೆಯಬೇಕಿದೆ. ಈ ಕಾರಣದಿಂದಲೇ ರಾಜ್ಯದ ಸರ್ಕಾರಿ ಶಾಲೆಗಳಲ್ಲೂ ಚೆಸ್‌ನ್ನು ಕಲಿಸಿ ಕೊಡುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದರು. ಚೆಸ್ ಗ್ರ್ಯಾಂಡ್ ಮಾಸ್ಟರ್ ತೇಜ್‌ಕುಮಾರ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

**ಆಧಾರ**: ವಿಜಯವಾಣಿ, ದಿನಾಂಕ: 21.07.2024

## 18. ಮಾಲ್‌ನಿಂದ ಅಪಮಾನಕ್ಕೀಡಾಗಿದ್ದ ರೈತನಿಗೆ ವಿಧಾನಸೌಧದಲ್ಲಿ ಸನ್ಮಾನ

ಕಳೆದ ಕೆಲವು ದಿನಗಳ ಹಿಂದಷ್ಟೇ ರಾಜಧಾನಿಯ ಜಿ.ಟಿ.ಮಾಲ್‌ನಲ್ಲಿ ಅವಮಾನಕ್ಕೊಳಗಾಗಿದ್ದ ರೈತ ಫಕೀರಪ್ಪ ಅವರನ್ನು ಸ್ಪೀಕರ್ ಯು.ಟಿ.ಖಾದರ್ ಅವರು ವಿಧಾನಸೌಧಕ್ಕೆ ಆಹ್ವಾನಿಸಿ, ರೈತ ದಂಪತಿಯನ್ನು ಸನ್ಮಾನಿಸಿದರು.

ರೈತನಿಗೆ ಮಾಲ್‌ನಲ್ಲಿ ಆದ ಅವಮಾನ ಸಂಗತಿಯನ್ನು ಸದನದಲ್ಲಿ ಪ್ರಸ್ತಾಪಿಸಿದ್ದ ಸ್ಪೀಕರ್, ಮಾಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚಿಸಿದ್ದರು. ಆ ನಂತರ ಎಚ್ಚೆತ್ತ ಬಿಬಿಎಂಪಿ ನೋಟಿಸ್

ಜಾರಿಗೊಳಿಸಿ ವಾರ ಕಾಲ ಬಂದ್‌ಗೆ ಸೂಚಿಸಿತ್ತು. ಬಳಿಕ ಮಾಲ್ ಮಾಲೀಕರು ಕೂಡ ರೈತನ ಕ್ಷಮೆಯಾಚಿಸಿ ಸನ್ಮಾನಿಸಿದರು.

ಇದೀಗ ರೈತ ಫಕೀರಪ್ಪ ದಂಪತಿಯನ್ನು ಸ್ಪೀಕರ್ ಖಾದರ್ ತಮ್ಮ ಕೊಠಡಿಗೆ ಆಹ್ವಾನಿಸಿ ಸನ್ಮಾನಿಸಿದರು. ಸಭಾಧ್ಯಕ್ಷರ ಸನ್ಮಾನಕ್ಕೆ ಸಂತಸ ವ್ಯಕ್ತಪಡಿಸಿದ ರೈತ ದಂಪತಿ, ನಾವು ಈವರೆಗೂ ವಿಧಾನಸೌಧಕ್ಕೆ ಬಂದಿರಲಿಲ್ಲ. ಸಭಾಧ್ಯಕ್ಷರ ಮೂಲಕ ಈಗ ವಿಧಾನಸೌಧವನ್ನು ನೋಡುವಂತಾಗಿದೆ. ಈ ಹಿನ್ನಲೆಯಲ್ಲಿ ಯು.ಟಿ.ಖಾದರ್ ಅವರಿಗೆ ಧನ್ಯವಾದ ಹೇಳುತ್ತೇನೆ. ಅವರ ಸನ್ಮಾನಕ್ಕೆ ಚಿರಋಣಿ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಮಾಗಡಿ ರಸ್ತೆ ಜಿ.ಟಿ.ಮಾಲ್ ಒಳಗೆ ಪ್ರವೇಶ ಮಾಡಲು ರೈತ ಫಕೀರಪ್ಪ ಅವರಿಗೆ ಭದ್ರತಾ ಸಿಬ್ಬಂದಿ ನಿರಾಕರಿಸಿದ್ದರು. ಪಂಚೆ ಧರಿಸಿ ಬಂದಿದ್ದರು ಎಂಬ ಕಾರಣಕ್ಕೆ ಫಕೀರಪ್ಪ ಅವರಿಗೆ ಒಳ ಪ್ರವೇಶ ನಿರಾಕರಿಸಲಾಗಿತ್ತು. ಈ ವಿಚಾರ ವಿಧಾನಸಭೆಯಲ್ಲಿ ಪ್ರತಿಧ್ವನಿಸಿ ಜಿ.ಟಿ.ಮಾಲ್ ಅನ್ನು 7 ದಿನ್ ಬಂದ್ ಮಾಡಲಾಗಿತ್ತು.

**ಆಧಾರ**: ಉದಯವಾಣಿ, ದಿನಾಂಕ: 23.07.2024

## 19. ಛಲವಾದಿ ಮೇಲ್ಮನೆ ಪ್ರತಿಪಕ್ಷ ನಾಯಕ

ವಿಧಾನಪರಿಷತ್ ಪ್ರತಿಪಕ್ಷ ನಾಯಕರಾಗಿ ಛಲವಾದಿ ನಾರಾಯಣಸ್ವಾಮಿ ನೇಮಕವಾಗಿದ್ದಾರೆ. ಬಿಜೆಪಿ ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್‌ದಾಸ್ ಅಗರ್ವಾಲ್ ಪ್ರಕಟಿಸಿದ್ದಾರೆ.

ಒಕ್ಕಲಿಗ, ಹಿಂದುಳಿದ ವರ್ಗ, ಲಿಂಗಾಯತ ಎಂಬ ಮೇಲ್ನೋಟದ ಜಾತಿ ಸಮೀಕರಣ ಚರ್ಚೆಯ ನಡುವೆ ಪರಿಶಿಷ್ಟ ಜಾತಿಯ ಬಲಗೈ ನಾಯಕನಿಗೆ ಪಕ್ಷದ ವರಿಷ್ಠರು ಮಣಿ ಹಾಕಿ ಮತ್ತೆ ಅಚ್ಚರಿಯ ದಾಳ ಉರುಳಿಸಿದ್ದಾರೆ.

ವಿಧಾನ ಪರಿಷತ್‌ಗೆ ಪುನರಾಯ್ಕೆಯಾದ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಮೊದಲ ಬಾರಿಗೆ ಮೇಲ್ಮನೆ ಪ್ರವೇಶಿಸಿದ ಮಾಜಿ ಸಚಿವ ಸಿ.ಟಿ.ರವಿ ಹೆಸರು ಚರ್ಚೆಯ ಮುಂಚೂಣಿಯಲ್ಲಿದ್ದವು. ಆದರೆ ಮೊದಲ ಬಾರಿಗೆ ಪರಿಷತ್ ಪ್ರವೇಶಿಸಿದ ಛಲವಾದಿ ಅವಕಾಶ ಗಿಟ್ಟಿಸಿಕೊಂಡಿದ್ದಾರೆ. ಜತೆಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಸ್ಥಾನ ಭದ್ರಪಡಿಸಿದಂತಾಗಿದೆ. ರಾಜ್ಯ ನಾಯಕರ ಅಭಿಪ್ರಾಯ ಹಾಗೂ ಒಲವು ಇಲ್ಲದೇ ಛಲವಾದಿಗೆ ದೆಹಲಿ ನಾಯಕರು ಆದ್ಯತೆ ನೀಡಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು ಎಂದು ಮೂಲಗಳು ಹೇಳಿವೆ. ಛಲವಾದಿ ನಾರಾಯಣಸ್ವಾಮಿಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಶುಭ ಹಾರೈಸಿದ್ದಾರೆ. ಛಲವಾದಿ ನೇತೃತ್ವದಲ್ಲಿ ಮೇಲ್ಮನೆಯಲ್ಲಿ ಪಕ್ಷವು ಅತ್ಯಂತ ಸಕ್ರಿಯವಾಗಿ ಕೆಲಸ ಮಾಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ರಾಜಕೀಯ ಆರಂಭಿಸಿದ ಛಲವಾದಿ 2018ರಲ್ಲಿ ಬಿಜೆಪಿಗೆ ಸೇರ್ಪಡೆಯಾದರು ಪಕ್ಷದ ರಾಜ್ಯ ಪರಿಶಿಷ್ಟ ಜಾತಿ ಮೋರ್ಚಾ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ರಾಜ್ಯ ಸರ್ಕಾರ ದಮನಿತ ಸಮುದಾಯಗಳ ವಿರೋಧಿ ನೀತಿ ಅನುಸರಿಸಿದ ಸಂದರ್ಭಗಳಲ್ಲಿ ಪಕ್ಷದ ಹೋರಾಟದಲ್ಲಿ ತೊಡಗಿಸಿಕೊಂಡವರು. ಪಕ್ಷದ ರಾಜ್ಯ ವಕ್ತಾರರಾಗಿಯೂ ಕೆಲಸ ನಿರ್ವಹಿಸಿದ್ದು, ಪಕ್ಷದ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿ ಭಾಗಿಯಾಗಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ: 23.07.2024

## 20. ಸದನದಲ್ಲಿ ಸಂವಿಧಾನದ ಪೀಠಿಕೆ

ವಿಧಾನಸಭೆಯೊಳಗೆ ಎರಡು ಕಡೆ ಸಂವಿಧಾನದ ಪೀಠಿಕೆಯುಳ್ಳ ಬೃಹತ್ ಫಲಕಗಳನ್ನು ಅಳವಡಿಸಿರುವುದು ಗಮನ ಸೆಳೆದಿದೆ. ವಿಧಾನಸಭೆಯೊಳಗೆ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ಸದಸ್ಯರು ಆಸನಗಳ ಹಿಂಭಾಗದಲ್ಲಿ ಸ್ಪೀಕರ್ ಅಭಿಮುಖವಾಗಿ ಎರಡೂ ಕಡೆ ಚಿನ್ನದ ಬಣ್ಣ ಲೇಪಿತ ಫಲಕ ಅಳವಡಿಸಲಾಗಿದೆ.

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 23.07.2024

## 21. Assembly clears Bill to levy welfare cess on movie tickets

The Assembly passed a Bill to levy cess on movie tickets to fund welfare programmes for cine and cultural activists. Piloting the Karnataka cine and cultural Activists (Welfare) Bill, Labour Minister Santosh Lad said the proposed legislation coincides with the centenary celebration of Sati Sulochana, the first Kannada talkie film released in 1934.

There are many unorganized workers engaged in the cinema industry. Camera persons, side dancers, workers they have no economic viability. Lad said, India's film industry has 2.2 billion ticket buyers. In 2018, the kannada film industry came out with 224 movies he said. The Bill intends to help the growth of the Kannada film industry and those coming under the unorganized sector. On every ticket buyer, we are charging a minimum of one percent and maximum of two percent. It won't be a big burden On top of this, the government will provide funds to provide welfare, Lad said.

The minister estimated that people in the state buy movie tickets worth Rs.4 crore per annum. About 50,000 people are working in the cinema industry. If allied sectors are counted then there are about 70,000 people, he said.

**Courtesy:** The Hindu, Dated:24.07.2024

## 22. Supplementray estimates of Rs. 8,573 cr get Assembly nod

AMID the din the Assembly on 24.07.2024, Chief Minister Sri Siddaramaiah got approval for the first instalment of the supplementary estimate of Rs. 8,573 crore, which is 2,25% of the state's budget of Rs 3.71 lakh crore. It includes Rs.9.91 crore of charged expenditure and Rs.8,563.81 crore of voted expenditure.

Of that, Rs 3,704.22 crore is from the reserve funds, which needs to be voted. Net out go from the consolidated fund is Rs.4,869.50 crore. Rs 3,526.71 crore is covered by central assistance and with that, the net cash outgo is Rs. 1,342.79 crore. It will be met from revenue receipts of the state and if necessary, through re-prioritisation of expenditure and probable savings in expenditure. The Assembly approved the supplementary estimate amid protests from Opposition JDS and BJP legislators for not allowing them to discuss alleged irregularities in allotment of MUDA sites.

The Karnataka Appropriation (No.4) Bill, 224, to authorize the payment and appropriation of certain further sums and out of the consolidated fund for 2024-25 was also approved in the Assembly.

This bill is introduced in pursuance of the provisions of Article 205(1)(A) of the Constitution to provide for the appropriation out of the consolidated fund of Rs. 8,573.716 crore towards defraying the several charges which will come in the course of payment during the part of the financial year 2024-25.

**Courtesy:** Indian Express, Dated:25.07.2024

## 23. ಗದ್ದಲ ನಡುವೆಯೇ 3 ಮಸೂದೆಗಳು ಪಾಸ್

ಮುಡಾ ಗದ್ದಲದ ನಡುವೆಯೇ ವಿಧಾನಸಭೆಯಲ್ಲಿ ಒಟ್ಟು ಒಂಬತ್ತು ವಿಧೇಯಕಗಳನ್ನು ಮಂಡಿಸಲಾಗಿದ್ದು, ಈ ಪೈಕಿ 8,573 ಕೋಟಿ ರೂ.ಗಳ ಪೂರಕ ಅಂದಾಜುಗಳ ಧನ ವಿನಿಯೋಗ ವಿಧೇಯಕ ಸೇರಿ ಮೂರು ವಿಧೇಯಕಗಳಿಗೆ ಅಂಗೀಕಾರ ಪಡೆಯಲಾಗಿದೆ.

ಒಟ್ಟು ಒಂಬತ್ತು ವಿಧೇಯಕ ಮಂಡಿಸಿದ್ದು, ಈ ಪೈಕಿ 3 ಪರ್ಯಾಲೋಚನಗೆ ಪರಿಗಣಿಸಲಾಯಿತು. ಮುಡಾ ಗದ್ದಲದ ನಡುವೆ ನೀರಾವರಿ ಕಾಲುವೆಗಳಿಂದ ಅಕ್ರಮವಾಗಿ ನೀರು ಎತ್ತುವುದನ್ನು ತಡೆಯಲು ಹಾಗೂ ಕಾಲುವೆಗಳ ಕೊನೆ ಭಾಗದ ರೈತರಿಗೂ ನೀರು ತಲುಪಿಸಲು ಅನುವಾಗುವಂತೆ ರೂಪಿಸಿರುವ ಕರ್ನಾಟಕ ನೀರಾವರಿ ತಿದ್ದುಪಡಿ ವಿಧೇಯಕ–2024 ಹಾಗೂ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕ–2024ಕ್ಕೂ ಅನುಮೋದನೆ ನೀಡಲಾಯಿತು.

ಸರ್ಕಾರಿ ಇಲಾಖೆಗಳು, ನಿಗಮ–ಮಂಡಳಿ, ವಿಶ್ವವಿದ್ಯಾಲಯ ಮುಂತಾದವುಗಳಲ್ಲಿ ಗುತ್ತಿಗೆ ಆಧಾರದ ಮೇಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂದಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ–2024 ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ತಿದ್ದುಪಡಿ ವಿಧೇಯಕ–2024, ಕರ್ನಾಟಕ ಸರ್ಕಾರಿ ಉದ್ಯಾನವನಗಳ ಸಂರಕ್ಷಣೆ ತಿದ್ದುಪಡಿ ವಿಧೇಯಕ, ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ, ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ವಿಧೇಯಕಗಳನ್ನು ಮಂಡಿಸಲಾಯಿತು.

ಜತೆಗೆ ವೈದ್ಯರು ಸೇರಿದಂತೆ ವೈದ್ಯಕೀಯ ಸಿಬ್ಬಂದಿಗಳಿಗೆ ರಕ್ಷಣೆ ಒದಗಿಸುವ ಹಾಗೂ ಹಲ್ಲೆ, ನಿಂದನೆ ಮಾಡುವವರಿಗೆ ಜಾಮೀನು ರಹಿತ ಪ್ರಕರಣ ದಾಖಲಿಸಲು ಅವಕಾಶ ನೀಡುವ ಕರ್ನಾಟಕ ವೈದ್ಯಕೀಯ ನೊಂದಣಿ ಮತ್ತು ಇತರ ಕೆಲವು ಕಾನೂನು ತಿದ್ದುಪಡಿ ವಿಧೇಯಕ–2024 ವಿಧೇಯಕವನ್ನು ಮಂಡನೆ ಮಾಡಲಾಯಿತು.

**ಆಧಾರ**: ಕನ್ನಡ ಪ್ರಭ, ದಿನಾಂಕ: 25.07.2024

## 24. ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ನಡವಳಿಕೆ ತಿದ್ದುಪಡಿ ಅಂಗೀಕಾರ

ಸದನಕ್ಕೆ ಶಾಸಕರ ಹಾಜರನ್ನು ಹೆಚ್ಚಿಸಬೇಕು ಎನ್ನುವ ಕಾರಣಕ್ಕೆ ಹತ್ತು ಹಲವು ಕ್ರಮವಹಿಸಲಾಗುತ್ತಿದೆ. ಆದರೆ ಸದನದ ಬಳಿಕದ ವಿವಿಧ ಸ್ಥಾಯಿ ಸಮಿತಿ ಹಾಗೂ ನಿಯಮಾವಳಿ ಸಮಿತಿ ಸಭೆಗೂ ಶಾಸಕರು ಬಾರದೇ, ಕೋರಂ ಸಮಸ್ಯೆ ಎದುರಾಗುತ್ತಿದೆ. ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ಮಾಡಲು ಸರಕಾರ ಮುಂದಾಗಿದೆ.

ವಿಧಾನಸಭೆಯಲ್ಲಿ ಈ ಸಂಬಂಧ ಬುಧವಾರ ತಿದ್ದುಪಡಿ ವಿಧೇಯಕವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಮಂಡಿಸಿದರು. ಈ ವೇಳೆ ಮಾತನಾಡಿದ ಅವರು, ನಿಯಮಾವಳಿ ಸಮಿತಿ ಸಭೆ ಸೇರಲು ಕೋರಂ ಸಮಸ್ಯೆಯಾಗುತ್ತಿದ್ದು, ಆ ಸಮಸ್ಯೆ ಪರಿಹಾರಕ್ಕಾಗಿ ತಿದ್ದುಪಡಿ ತರಲಾಗಿದೆ. ಎಲ್ಲಾ ಸ್ಥಾಯಿ ಸಮಿತಿಗಳಿಗೂ ಅನ್ವಯವಾಗಲಿದ್ದು, ಸಭೆ ನಡೆಸಲು ಅನುಕೂಲವಾಗಲಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಶಾಸಕ ಶ್ರೀ ಎಸ್.ಸುರೇಶ್ ಕುಮಾರ್ ಮಾತನಾಡಿ, ಸ್ಥಾಯಿ ಸಮಿತಿಗಳ ಸಭೆಗೆ ಅಧಿಕಾರಿಗಳು ಬರುತ್ತಾರೆ. ಸದಸ್ಯರು ಸರಿಯಾಗಿ ಬರುವುದಿಲ್ಲ ಬರುವಂತೆ ಮಾಡಬೇಕು ಎಂದು ಹೇಳಿದರು. ಅದಕ್ಕೆ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ನೀವು ನೀಡಿದ ಸಲಹೆ ಉತ್ತಮವಾಗಿದ್ದು, ಆಲೋಚನೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

ಬಿಜೆಪಿ ಹಿರಿಯ ಸದಸ್ಯ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಹಕ್ಕುಬಾಧ್ಯತಾ ಸಮಿತಿಯಲ್ಲಿ ಹಿರಿಯ ಶಾಸಕರು ಸದಸ್ಯರಾಗಿದ್ದು, ಶ್ರೀಮಂತ ಶಾಸಕರು ಸರಿಯಾಗಿ ಸಭೆಗೆ ಬರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಗ ಕಾನೂನು ಸಚಿವರು ಈ ಸಮಸ್ಯೆ ಪರಿಹಾರಕ್ಕಾಗಿಯೇ ತಿದ್ದುಪಡಿ ತರಲಾಗಿದ್ದು, ಇದನ್ನು ಅಂಗೀಕರಿಸುವಂತೆ ತಿದ್ದುಪಡಿ ಅಂಗೀಕರಿಸಲಾಯಿತು.

**ಆಧಾರ**: ವಿಶ್ವವಾಣಿ, ದಿನಾಂಕ: 25.07.2024

## 25. ಪರಿಷತ್ ಸದಸ್ಯರ 887 ಪ್ರಶ್ನೆಗಳ ಪೈಕಿ 280ಕ್ಕೆ ಸರ್ಕಾರದ ಉತ್ತರ

ಸದನಕ್ಕೆ ಕೇಳಲಾದ ಪ್ರಶ್ನೆಗಳು ಶೂನ್ಯ ವೇಳೆ ಪ್ರಸ್ತಾಪಗಳಿಗೆ ಅಧಿಕಾರಿಗಳು ಎಷ್ಟು ಉತ್ತರಗಳನ್ನು ಕೊಡಬೇಕಿತ್ತು. ಎಷ್ಟು ಕೊಡಲಾಗಿದೆ. ಉಳಿದದ್ದು ಯಾಕೆ ಕೊಟ್ಟಿಲ್ಲ, ಉತ್ತರ ಕೊಡದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಗುರುವಾರ ಸದನಕ್ಕೆ ಮಾಹಿತಿ ಕೊಡಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಸರ್ಕಾರಕ್ಕೆ ತಾಕೀತು ಮಾಡಿದರು.

ಈ ವಿಷಯ ಪ್ರಸ್ತಾಪಿಸಿದ ಜೆಡಿಎಸ್ ನಾಯಕ ಎಸ್.ಎಲ್.ಭೋಜೇಗೌಡ, ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಪ್ರಶ್ನೆ ಹಾಗೂ ಶೂನ್ಯ ವೇಳೆಯ ಪ್ರಸ್ತಾಪಗಳು ಸೇರಿ ಒಟ್ಟು 887 ಪ್ರಶ್ನೆಗಳನ್ನು ಕೇಳಿದ್ದಾರೆ. ಅದರಲ್ಲಿ 280 ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ. ಇನ್ನೂ 607 ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಗಳು ಬಂದಿಲ್ಲ ಎಂದರು. ಇದಕ್ಕೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ಸದಸ್ಯರು ಸಹ ಧ್ವನಿಗೂಡಿಸಿದರು. ಸದನಕ್ಕೆ ಮಾಹಿತಿ ಕೊಡುವಂತೆ ಸಭಾಧ್ಯಕ್ಷರು ಹೇಳಿದರು.

**ಆಧಾರ**: ಉದಯವಾಣಿ, ದಿನಾಂಕ: 25.07.2024

## 26. ನ್ಯಾಯಾಂಗ ತನಿಖೆ ನಡೆಯುತ್ತಿರುವ ಪ್ರಕರಣವನ್ನು ವಿಧಾನಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲ

ತೀರಾ ಇತ್ತೀಚಿನ ತುರ್ತು ವಿಚಾರವನ್ನಷ್ಟೇ ನಿಲುವಳಿ ಸೂಚನೆಯಡಿ ತರಲು ನಿಯಮದಲ್ಲಿ ಅವಕಾಶ ಇದೆ. ಇದು ತೀರಾ ಇತ್ತೀಚಿನ ತುರ್ತು ವಿಷಯವಲ್ಲ. ನ್ಯಾಯಾಂಗ ತನಿಖೆ ನಡೆಯುತ್ತಿರುವ ಹೊತ್ತಿನಲ್ಲಿ ಸದನದಲ್ಲಿ ಚರ್ಚಿಸುವುದು ಸಾಧುವಲ್ಲ. ಇದರಲ್ಲಿ ಒಂದು ನಿರ್ದಿಷ್ಟ ವಿಷಯವಿಲ್ಲ. ಹೀಗಾಗಿ ಇದು ನಿಲುವಳಿ ಸೂಚನೆಗೆ ಯೋಗ್ಯವಲ್ಲ. ಹೀಗಾಗಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದೇನೆ.– **ಯು.ಟಿ.ಖಾದರ್, ಸ್ಪೀಕರ್.**

**ಆಧಾರ**: ಉದಯವಾಣಿ ದಿನಾಂಕ: 25.07.2024

## 27. ಪರಿಷತ್‌ನಲ್ಲಿ 13 ವಿಧೇಯಕ ಅಂಗೀಕಾರ

2024ರ ಕರ್ನಾಟಕ ಧನವಿನಿಯೋಗ ವಿಧೇಯಕ, ವಿಧಾನ ಮಂಡಲ (ಅನರ್ಹತಾ ನಿವಾರಣಾ) ಎರಡನೇ ತಿದ್ದುಪಡಿ, ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ ಸೇರಿದಂತೆ ಸರಕು ಮತ್ತು ಸೇವಾ ತೆರಿಗೆ ಸೇರಿದಂತೆ 13 ವಿಧೇಯಕಗಳನ್ನು ವಿಧಾನ ಪರಿಷತ್‌ನಲ್ಲಿ ಅಂಗೀಕಾರಗೊಂಡವು.

ಕರ್ನಾಟಕ ನೀರಾವರಿ ಅಧಿನಿಯಮ, ಭೂ ಕಂದಾಯ ಅಧಿನಿಯಮ, ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ 2017ನ್ನು ಮತ್ತಷ್ಟು ತಿದ್ದುಪಡಿ ಅಧಿನಿಯಮ, 2024–ಕನಾಟಕ ಧನವಿನಿಯೋಗ, ಕರ್ನಾಟಕ ವಿಧಾನಮಂಡಲ(ಅನರ್ಹತಾ ನಿವಾರಣಾ), ಎರಡನೇ ತಿದ್ದುಪಡಿ ವಿಧೇಯಕ, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, ವೈದ್ಯಕೀಯ ನೋಂದಣಿ ಮತ್ತು ಇತರ ಕೆಲವು ಕಾನೂನು ವಿಧೇಯಕ, ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ), ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಶ್ರೀ ರೇಣುಕಾಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ), ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ(ತಿದ್ದುಪಡಿ) ವಿಧೇಯಕ ಅಂಗೀಕಾರಗೊಂಡವು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 26.07.2024

## 28. ಎಂಟು ದಿನದಲ್ಲಿ 37 ಗಂಟೆ ಕಲಾಪ

ಮುಡಾ  ಹಗರಣ ಸಂಬಂಧ ಒಂದು ದಿನ ಮೊದಲೇ ಮೊಟಕಾದ ಮುಂಗಾರು ಅಧಿವೇಶನವು ಎಂಟು ದಿನಗಳ ಕಾಲ 37 ಗಂಟೆ ನಡೆದಿದ್ದು, 12 ವಿಧೇಯಕಗಳು ಅಂಗೀಕಾರವಾಗಿವೆ.

ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ಧರಣಿ ನಡುವೆಯೇ ಎಂಟು ದಿನಗಳ ಕಾರ್ಯಕಲಾಪ ಕುರಿತು ಸಭಾಧ್ಯಕ್ಷ ಯು.ಟಿ.ಖಾದರ್ ಮಾಹಿತಿ ನೀಡಿದರು.

ಧನವಿನಿಯೋಗ ವಿಧೇಯಕ ಸೇರಿ ಒಟ್ಟು 13 ವಿಧೇಯಕಗಳನ್ನು ಮಂಡಿಸಲಾಗಿದ್ದು, 12 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಲಾಯಿತು ಎಂದು ಹೇಳಿದರು.

ನಿಯಮ 60ರಡಿಯಲ್ಲಿ ನೀಡಿದ್ದ 9 ಸೂಚನೆಗಳ ಪೈಕಿ 8ನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, 1 ಸೂಚನೆಯನ್ನು ತಿರಸ್ಕರಿಸಲಾಗಿದೆ. ಎರಡು ಸೂಚನೆಗಳನ್ನು ಚರ್ಚಿಸಲಾಗಿದೆ. ನಿಯಮ 69ರಡಿಯಲ್ಲಿ ಒಟ್ಟು 14 ಸೂಚನೆಗಳನ್ನು ಸ್ವೀಕರಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು 16 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಒಟ್ಟು 2370 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 117 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 1902 ಪ್ರಶ್ನೆಗಳ ಪೈಕಿ 1438 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗಮನ ಸೆಳೆಯುವ 323 ಸೂಚನೆಗಳ ಪೈಕಿ 170 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ಶೂನ್ಯ ವೇಳೆಯಲ್ಲಿ 3 ಸೂಚನೆಗಳನ್ನು ಚರ್ಚಿಸಲಾಗಿದೆ. ರಾಜ್ಯಕ್ಕೆ ಹಂಚಿಕೆ ಮಾಡಬೇಕಾದ ಲೋಕಸಭೆ ಸ್ಥಾನಗಳು ಮತ್ತು ಪ್ರತಿ ರಾಜ್ಯದ ವಿಧಾನಸಭೆಗೆ ನಿಗದಿಪಡಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು 1971ರ ಜನಗಣತಿಯನ್ನಾಧರಿಸಿ ನಿರ್ಧರಿಸಬೇಕೆಂದು ಒತ್ತಾಯಿಸಿ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರ ಮಾಡಲಾಯಿತು ಎಂದರು.

ಅಲ್ಲದೇ, ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವ ಭಾರತದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಗೆ ಅಪಾಯವನ್ನುಂಟು ಮಾಡುವುದರಿಂದ ಈ ಪ್ರಸ್ತಾವವನ್ನು ಅನುಷ್ಠಾನಗೊಳಿಸಬಾರದೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ನೀಟ್ ಪರೀಕ್ಷಾ ವ್ಯವಸ್ಥೆಯಲ್ಲಿ ಆಗುತ್ತಿರುವ ಅಕ್ರಮಗಳನ್ನು ಪರಿಗಣಿಸಿ ರಾಷ್ಟ್ರೀಯ ಮಟ್ಟದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು ಎಂದು ಹೇಳಿದರು.

ಇತ್ತೀಚಿಗೆ ನಿಧನರಾದ ಗಣ್ಯರಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ ಅಂಗೀಕರಿಸಲಾಗಿದೆ. 2024–25ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸಿ ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ. ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಸದನವು ಸಭಾಧ್ಯಕ್ಷರಿಗೆ ಅಧಿಕಾರ ನೀಡಿದೆ ಎಂದು ಖಾದರ್ ತಿಳಿಸಿದರು.

**ಆಧಾರ**: ಕನ್ನಡ ಪ್ರಭ, ದಿನಾಂಕ: 26.07.2024

## 29. ಏಕ ವಿನ್ಯಾಸ ನಕ್ಷೆ ಇನ್ನು ಮುಂದೆ ಸ್ಥಳೀಯ ಪ್ರಾಧಿಕಾರದಲ್ಲೇ ಲಭ್ಯ

ಕರಾವಳಿ ಭಾಗದ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಮನೆ ನಿರ್ಮಾಣಕ್ಕೆ ಅಗತ್ಯವಿರುವ ಏಕವಿನ್ಯಾಸ ನಕ್ಷೆ (9 ಮತ್ತು 11ಎ)ಗಳಿಗೆ ಮಂಜೂರಾತಿ ಪಡೆಯುವ ಪ್ರಕ್ರಿಯೆಗೆ ಇರುವ ತಾಂತ್ರಿಕ ತೊಂದರೆ ನಿವಾರಣೆಗೆ ಸರ್ಕಾರ ಉದ್ದೇಶಿಸಿದ್ದು, ನಗರ ಯೋಜನೆ ಸೌಲಭ್ಯವಿರುವ ಸ್ಥಳೀಯ ಪ್ರಾಧಿಕಾರಗಳಲ್ಲೇ ಈ ಸಂಬಂಧದ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಲು ನಿರ್ಧರಿಸಿದೆ.

ವಿಧಾನಸೌಧದಲ್ಲಿ ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್‌ರವರ ಅಧ್ಯಕ್ಷತೆಯಲ್ಲಿ ಕಂದಾಯ, ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಉಸ್ತುವಾರಿ ಸಚಿವರು, ದಕ್ಷಿಣ ಕನ್ನಡ ಜಿಲ್ಲೆ

ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಉನ್ನತ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಯಾವುದೇ ಮನೆ ನಿರ್ಮಿಸುವಾಗ ಏಕ ವಿನ್ಯಾಸ ನಕ್ಷೆ ಪಡೆಯುವುದು ಅತ್ಯವಶ್ಯಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಕ್ಷೆ ಮಂಜೂರಾತಿ ಪಡೆಯಲು ನೂರಾರು ಕಿ.ಮೀ. ದೂರದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ಕ್ಕೆ ಅಲೆದಾಡಬೇಕಿದೆ. ಈಗ ಅದನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದಲೇ ಅಂದರೆ ಪುತ್ತೂರು ನಗರಾಭಿವೃದ್ಧಿ ಪ್ರಾಧಿಕಾರ (ಪುಡಾ), ಬಂಟ್ವಾಳ ನಗರಾಬಿವೃದ್ಧಿ ಪ್ರಾಧಿಕಾರ, ಉಲ್ಲಾಳ ನಗರಾಭಿವೃದ್ಧಿ ಪ್ರಾಧಿಕಾರದಿಂದಲೇ ಪಡೆಯಲು ಅವಕಾಶ ಕಲ್ಪಿಸಲು ನಿರ್ಣಯ ಕೈಗೊಳ್ಳಲಾಯಿತು. ಆದರೆ, ಇದು ಲೇಔಟ್‌ಗಳಿಗೆ ಅನ್ವಯ ಆಗುವುದಿಲ್ಲ.

**ಆಧಾರ**: ಉದಯವಾಣಿ, ದಿನಾಂಕ: 26.07.2024

## 30. ಅರಣ್ಯ ಹಕ್ಕು ಕಾಯ್ದೆ ತಿದ್ದುಪಡಿಗೆ ನಿರ್ಣಯ

ಅನುಸೂಚಿತ ಬುಡಕಟ್ಟು ಜನರಗೆ ಸಿಗುವ ಸವಲತ್ತುಗಳನ್ನು ಇತರೆ ಅರಣ್ಯವಾಸಿಗಳಿಗೂ ಕಲ್ಪಿಸುವ ಉದ್ದೇಶದಿಂದ ಅರಣ್ಯ ಹಕ್ಕು ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಕೇಂದ್ರ ಸರ್ಕಾರವನ್ನು ಕೋರುವ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಮಂಡಿಸಿದ ನಿರ್ಣಯವನ್ನು ವಿಧಾನಮಂಡಲದ ಉಭಯ ಸದನಗಳಲ್ಲೂ ಅಂಗೀಕಾರ ನೀಡಲಾಯಿತು.

ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ 2006ಕ್ಕೆ ತಿದ್ದುಪಡಿ ತರುವ ಮೂಲಕ ಸವಲತ್ತುಗಳನ್ನು ಇತರೆ ಅರಣ್ಯವಾಸಿಗಳಿಗೂ ದೊರಕಿಸಲು ಸಹಕರಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲು ನಿರ್ಣಯ ಕೈಗೊಳ್ಳಲಾಗುತ್ತಿದೆ ಎಂದು ಖಂಡ್ರೆ ಹೇಳಿದರು.

2006ರಲ್ಲಿ ಜಾರಿಗೆ ತಂದ 2008ರಲ್ಲಿ ರೂಪಿಸಿದ ನಿಯಮಗಳ ಫಲವಾಗಿ 2005 ಡಿಸೆಂಬರ್ 13ಕ್ಕೂ ಮೊದಲು ಜೀವನೋಪಾಯಕ್ಕಾಗಿ ಅರಣ್ಯದಲ್ಲಿ ವಾಸಿಸುತ್ತಿದ್ದ ಅನುಸೂಚಿತ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಲಭಿಸುತ್ತಿದೆ. ಆದರೆ, ಅರಣ್ಯದ ಉತ್ಪನ್ನಗಳನ್ನೇ ನಂಬಿಕೊಂಡು ಹಲವು ತಲೆಮಾರುಗಳಿಂದ ಅರಣ್ಯಗಳಲ್ಲಿ ಬದುಕು ಸಾಗಿಸುತ್ತಿರುವ ಅನುಸೂಚಿತ ಬುಡಕಟ್ಟು ಹೊರತಾದ ಸಮುದಾಯದ ಜನರಿಗೆ ಅರಣ್ಯ ಹಕ್ಕು ಕಾಯ್ದೆಯ ಫಲ ದೊರೆತಿಲ್ಲ, ಅದಕ್ಕೆ ಕಾಯ್ದೆಯಲ್ಲಿನ ಕೆಲ ನಿಯಮಗಳು ಅಡ್ಡಿಯಾಗಿವೆ. ಅರಣ್ಯವಾಸಿಗಳೆಂದು ಸಾಬೀತು ಮಾಡಲು ಮೂರು ತಲೆಮಾರು ಅಥವಾ 75 ವರ್ಷಗಳ ಕಾಲ ಅವರ ಪೂರ್ವಜರು ಅರಣ್ಯದಲ್ಲೇ ಇದ್ದರು ಎಂಬುದನ್ನು ಸಾಬೀತುಪಡಿಸಲು ಸಾಕ್ಷ್ಯಗಳನ್ನು ಸಲ್ಲಿಸಬೇಕಾಗುತ್ತದೆ. ಇದು ಕಾರ್ಯಸಾಧುವಲ್ಲದ ನಿಯಮ ಎಂದು ವಿವರಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದ ಅರಣ್ಯ ಹಕ್ಕು ಕಾಯ್ದೆಯಿಂದಾಗಿ ಕೆಲವು ಪ್ರಕರಣಗಳು ಹಲವು ದಶಕಗಳಿಂದ ಇತ್ಯರ್ಥವಾಗದೇ ಹಾಗೇ ಉಳಿದಿವೆ. ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಯ ವ್ಯಾಪ್ತಿ ಒಳಗೊಂಡ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ವೇಳೆ ಭೂಮಿ ಕಳೆದುಕೊಂಡ ಶರಾವತಿ ಮುಳುಗಡೆ ಸಂತ್ರಸ್ತರಿಗೆ ಅನ್ಯಾಯವಾಗಿದೆ ಎಂದರು.

**ಆಧಾರ**: ಪ್ರಜಾವಾಣಿ, ದಿನಾಂಕ: 26.07.2024

## 31. ಕನ್ನಡ – ಮಲೆಯಾಳಿ ಸಾಹಿತ್ಯ ಸಮ್ಮೇಳನ ನಡೆಸಿ

ಕನ್ನಡ ಕಲಿಕಾ ತರಗತಿಗಳಲ್ಲಿ ಕನ್ನಡ ಕಲಿತ ಮಲೆಯಾಳಿ ಭಾಷಿಕರಿಗಾಗಿ ಹಾಗೂ ಕೇರಳದಲ್ಲಿ ನೆಲೆಸಿರುವ ಕನ್ನಡಿಗರಿಗಾಗಿ ಕನ್ನಡ ಮತ್ತು ಮಲೆಯಾಳಿ ಭಾಷಿಕರ ಸಾಹಿತ್ಯ ಸಮ್ಮೇಳನ ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಬೇಕು ಎಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿದ್ದ ಮಲೆಯಾಳಿ ಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ದೇಶದ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಹೆಚ್ಚು ಭಾಷೆಯನ್ನು ಕಲಿಯುವವರು ಹೆಚ್ಚು ಸಾಧನೆ. ಯಶಸ್ಸು ಪಡೆಯತ್ತಾರೆ ನಾವು ಇತರ ರಾಜ್ಯಕ್ಕೆ ಹೋದಾಗ ಅಲ್ಲಿನ ಭಾಷೆಗೆ ಗೌರವ ಕೊಟ್ಟು ಭಾಷೆ ಕಲಿಯಲು ಮುಂದಾಗಬೇಕು. ಕರ್ನಾಟಕದಲ್ಲಿರುವ ಮಲೆಯಾಳಿ ಭಾಷಿಕರು ಕನ್ನಡ ಭಾಷೆ ಕಲಿಯುತ್ತಿರುವುದು ನಿಮ್ಮ ವ್ಯಕ್ತಿತ್ವ, ಆತ್ಮವಿಶ್ವಾಸ ಹೆಚ್ಚಿಸುವ ಜತೆಗೆ ರಾಜ್ಯಕ್ಕೆ ಕೊಡುಗೆ ನೀಡಲು ಮುಂದಾಗಿರುವುದು ಸಂತೋಷದ ವಿಷಯ ಎಂದು ಖಾದರ್ ಮೆಚ್ಚುಗೆ ಸೂಚಿಸಿದರು.

**ಆಧಾರ**: ವಿಶ್ವವಾಣಿ, ದಿನಾಂಕ: 27.07.2024

## 32. ನಿಯಮಾವಳಿಯಂತೆ ಕೆಲಸ ಮಾಡಬೇಕು: ಸ್ಪೀಕರ್

ವಿಧಾನಸಭೆಯಲ್ಲಿ ಕೆಟ್ಟ ಸಂಪ್ರದಾಯ ಪ್ರಾರಂಭಕ್ಕೆ ನಾನು ತಯಾರಿಲ್ಲ ಒಂದು ವೇಳೆ ಹಾಗೇ ಮಾಡಿದರೆ ಮುಂದೆ ಬರುವ ಸ್ಪೀಕರ್‌ಗಳಿಗೆ ಸಮಸ್ಯೆಯಾಗಬಹುದು ಎಂದು ಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸಭೆಯ ಅಧ್ಯಕ್ಷರು ಎಂಬ ಪೀಠ ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಲ್ಲಿ ಒಂದು. ಇಂತಹ ಪೀಠವು ಯಾವುದೇ ಗೊಂದಲಕ್ಕೆ ಒಳಗಾಗದೆ ಜನಪ್ರಿಯ ಮಾದರಿಯ ಗೋಜಲಿಗೆ ಸಿಲುಕದೆ ನಿಯಮಾವಳಿಗಳಂತೆ ಕೆಲಸ ಮಾಡಬೇಕಾಗುತ್ತದೆ. ಸತ್ಯ ಹೇಳಿದಾಗ, ಇರುವ ನಿಯಮಗಳ ಬಗ್ಗೆ ಹೇಳುವಾಗ ಕೆಲವರಿಗೆ ಅಸಮಾಧಾನ ಆಗುವುದು ಸ್ವಾಭಾವಿಕ. ಆದರೆ ಅವರಿಗೆ ಕೆಲವು ಸಮಯದ ನಂತರ ನಾನು ಯಾಕೆ ಚರ್ಚೆಗೆ ಅವಕಾಶ ಕೊಟ್ಟಿಲ್ಲ ಎಂಬ ವಿಚಾರ ಮನವರಿಕೆಯಾಗುತ್ತದೆ ಎಂದರು.

ವಾಲ್ಮೀಕಿ ಹಗರಣದ ಸಂಬಂಧಿಸಿ ನಾಲ್ಕು ದಿನ ಚರ್ಚೆ ನಡೆಯಿತು. ಐದನೇ ದಿನ ಮುಡಾ ಹಗರಣ ಬಂತು. ಮುಡಾ ಹಗರಣ ಸಂಬಂಧ ಸದಸ್ಯರು ಸದನದಲ್ಲಿ ಮಂಡಿಸಿದ ನಿಲುವಳಿ ಸೂಚನೆಯನ್ನು ನಿಯಮಗಳ ಪ್ರಕಾರ ಚರ್ಚೆಗೆ ಅವಕಾಶ ನೀಡಲಾಗಿಲ್ಲ. ವಿಧಾನಸಭೆಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ ಕಾರ್ಯ ನಿರ್ವಹಿಸಬೇಕಾಗುತ್ತದೆಯೇ ಹೊರತು, ವಿಮರ್ಶೆಗಳ ಮರ್ಜಿಗೆ ಅನುಗುಣವಾಗಿ ಇಲ್ಲ ಎಂದು ಸ್ಪಷ್ಟನೆ ನೀಡಿದರು.

**ಆಧಾರ**: ವಿಶ್ವವಾಣಿ, ದಿನಾಂಕ: 30.07.2024

## 33. Install plaque of preamble in MLAs' homes says Khader

Speaker U T Khader said plaques of the preamble of the Constitution like the one installed in the legislative assembly, should also be place in residences of ministers, MLAs, all govt. offices and offices on NGOs.

I have suggested to the govt to issue a direction in this regard. Everyone should know the preamble of the Constitution by heart, he said. On a proposal to digitize the legislative assembly

by developing a mobile application, Khader said that a high level committee has been constituted to create a detailed plan for the initiative.

Khader also defended his decision not to allow a debate on the alleged Mysuru Urban Development Authority (Muda) scam involving chief minister Siddaramaiah's wife, BM Parvathi, insisting no issue pending before a commission of inquiry can be raised through an adjournment motion.

In response to allegations from BJP and JD(S) MLAs that they were not permitted to discuss the MUDA issue to protect the chief minister Khader said. I merely followed the rules. Since a judicial inquiry into the Muda scam is in progress, the issue was not allowed for discussion. Violating the rules would set a bad precedent for the next generation.

BJP and JD(S) had protested the move, holding an all night dharna in the assembly and disrupting business. The monsoon session ended a day prematurely due to their protests.

**Courtesy:** Times of India, Dated: 30.07.2024

## 34. ವಾಹನ ಬಾಡಿಗೆ: ಶಾಸಕರ ವೇತನದಲ್ಲೇ ಕಡಿತ

ಶಾಸಕರು ಮತ್ತು ಮಾಜಿ ಶಾಸಕರ ಬಳಕೆಗೆ ಬಾಡಿಗೆ ಆಧಾರದಲ್ಲಿ ಒದಗಿಸಲಾಗುವ ಶಾಸಕರ ಭವನದ ವಾಹನಗಳ ಬಾಡಿಗೆಯನ್ನು ಶಾಸಕರ ವೇತನದಲ್ಲೇ ಕಡಿತ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಈವರೆಗೆ ಇದ್ದ ವ್ಯವಸ್ಥೆಯಲ್ಲಿ ವಾಹನ ಬಳಕೆಯ ನಂತರ ನಗದು ರೂಪದಲ್ಲಿ ಬಾಡಿಗೆ ಪಾವತಿ ಮಾಡಲಾಗುತ್ತಿತ್ತು. ನೂತನ ವ್ಯವಸ್ಥೆಯು ಆಗಸ್ಟ್ 1 ರಿಂದ ಜಾರಿಗೆ ಬರಲಿದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯ ತಿಳಿಸಿದೆ.

ನೂತನ ವ್ಯವಸ್ಥೆ ಅಡಿ ವಾಹನದ ಬಳಕೆಯ ನಂತರ ಶಾಸಕರು ಮತ್ತು ಮಾಜಿ ಶಾಸಕರು ಟ್ರಿಪ್ ಶೀಟ್‌ನಲ್ಲಿ ಸಹಿ ಮಾಡಬೇಕು. ಅದರ ಆಧಾರದಲ್ಲಿ ಬಾಡಿಗೆ ಮೊತ್ತ, ನಿರೀಕ್ಷಣಾ ಶುಲ್ಕ ಮತ್ತು ಶೇ. 18ರಷ್ಟು ಜಿಎಸ್‌ಟಿ ಒಳಗೊಂಡ ಬಿಲ್‌ಅನ್ನು ಸಿದ್ಧಪಡಿಸಲಾಗುತ್ತದೆ. ಶಾಸಕರ ವೇತನ ಮತ್ತು ಮಾಜಿ ಶಾಸಕರ ನಿವೃತ್ತಿ ವೇತನದಲ್ಲಿ ಹಾಗೂ ರೈಲು ಭತ್ಯೆಯಲ್ಲಿ ಬಿಲ್ ಮೊತ್ತವನ್ನು ಕಡಿತ ಮಾಡಿಕೊಳ್ಳಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 01.08.2024

## 35. ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸ್ಪೀಕರ್

ಅಮೆರಿಕ ಕೆಂಟಕಿಯ ಲೂಯಿಸ್ ವಿಲ್ಲೆಯಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಸ್ಪೀಕರ್ ಯು.ಟಿ.ಖಾದರ್ ಸೇರಿದಂತೆ ರಾಜ್ಯದ 10 ಶಾಸಕರು ಭಾಗವಹಿಸಿದ್ದಾರೆ.

ವಿಶ್ವದಾದ್ಯಂತ ಸುಮಾರು 5,600 ಜನಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. 3 ದಿನಗಳ ಈ ಮಹತ್ವದ ಸಮ್ಮೇಳನದಲ್ಲಿ ಉಪಸಭಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ, ವಿಧಾನ ಮಂಡಲದ

ಆಡಳಿತ ಪಕ್ಷದ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಸಲೀಂ ಅಹಮದ್, ವಿಧಾನ ಪರಿಷತ್ತಿನ ಸದಸ್ಯ ಮಂಜುನಾಥ ಭಂಡಾರಿ ಸೇರಿ 10 ಶಾಸಕರು ಭಾಗವಹಿಸಿದ್ದಾರೆ.

ಇದೇ ವೇಳೆ ರಾಷ್ಟ್ರೀಯ ಶಾಸಕರ ಸಮಾವೇಶ (ಎನ್‌ಎಲ್‌ಸಿ) ಮತ್ತು ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನದ ಸಹಯೋಗದಲ್ಲಿ ಶಾಸಕರ ದುಂಡುಮೇಜಿನ ಸಭೆ ನಡೆಯಲಿದೆ.

**ಆಧಾರ**: ಉದಯವಾಣಿ, ದಿನಾಂಕ: 07.08.2024

## 36. ಸಚಿವಾಲಯ ಸ್ವಚ್ಛತೆ ಹೊಣೆ ಖಾಸಗಿ ಸಂಸ್ಥೆಗೆ

ಶಾಸಕರ ಭವನ ಸ್ವಚ್ಛತೆಯನ್ನು ಪ್ರಥಮ ಹಂತದಲ್ಲಿ ಪ್ರಾಯೋಗಿಕವಾಗಿ ಖಾಸಗಿ ಸಂಸ್ಥೆಗೆ ನೀಡಲಾಗಿದೆ. ಶಾಸಕರ ಭವನದಲ್ಲಿ ಈ ಹಿಂದೆ ಹೊರಗುತ್ತಿಗೆ ಆಧಾರದ ಮೇರೆಗೆ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿತ್ತು. ಆದರೆ, ಪ್ರಸ್ತುತ ಹೊರಗುತ್ತಿಗೆ ಆಧಾರದ ವ್ಯವಸ್ಥೆ ಜಾರಿಯಲ್ಲಿ ಇಲ್ಲದಿರುವ ಪ್ರಯುಕ್ತ ವಿಧಾನಸಭೆ ಸಚಿವಾಲಯದ ಅಲ್ಪ ಪ್ರಮಾಣದ ಸಿಬ್ಬಂದಿಯನ್ನು ಉಪಯೋಗಿಸಿಕೊಂಡು ಸ್ವಚ್ಛತಾ ಕಾರ್ಯಗಳನ್ನು ನೆರವೇರಿಸುತ್ತಿತ್ತು. ಆದರೂ ಸಹ ಶಾಸಕರ ಭವನಕ್ಕೆ ಆಗಿಂದಾಗ್ಗೆ ಭೇಟಿ ನೀಡಿ, ಪರಿಸರವು ಮಲಿನಗೊಂಡಿರುವುದನ್ನು ಗಮನಿಸಿ, ಪ್ರಥಮ ಹಂತದಲ್ಲಿ ಪ್ರಾಯೋಗಿಕವಾಗಿ ಖಾಸಗಿ ಸಂಸ್ಥೆಗೆ ಡೀಪ್ ಕ್ಲೀನಿಂಗ್ ಕಾರ್ಯನೀಡಿದ್ದಾರೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 10.08.2024

## 37. ರಾಜಭವನ ಸಾರ್ವಜನಿಕ ವೀಕ್ಷಣೆ ಸ್ಥಳವಾಗಲಿ

ಮೈಸೂರು ಅರಮನೆಯಂತೆ ಬೆಂಗಳೂರಿನಲ್ಲಿ ರಾಜ್ಯಪಾಲರ ಅಧಿಕೃತ ನಿವಾಸವಾಗಿರುವ ರಾಜಭವನ ಕೂಡಾ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗುವಂತೆ ಮಾಡಲು ಸರ್ಕಾರಕ್ಕೆ ಅಗತ್ಯ ಶಿಫಾರಸ್ಸು ಮಾಡುವಂತೆ ವಿಧಾನಮಂಡಲದ ಅರ್ಜಿಗಳ ಸಮಿತಿ ಅಧ್ಯಕ್ಷರಿಗೆ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಮನವಿ ಮಾಡಿದೆ.

ಮೈಸೂರು ಅರಮನೆಗಿಂತಲೂ 6 ದಶಕಗಳ ಹಿಂದೆ ಮಾರ್ಕ್ ಕಬ್ಬನ್ ನಿರ್ಮಿಸಿದ ಪಾರಂಪರಿಕ ಶೈಲಿಯ ಈ ಕಟ್ಟಡವನ್ನು ಸಾರ್ವಜನಿಕರು ಮುಕ್ತವಾಗಿ ವೀಕ್ಷಿಸಬೇಕಿದೆ. ಅದ್ಭುತ ವಾಸ್ತುಶಿಲ್ಪ ಹೊಂದಿರುವ ಈ ಕಟ್ಟಡದ ಬಗ್ಗೆ ಸಂಶೋಧನಾ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ತಿಳುವಳಿಕೆ ಪಡೆಯಬಹುದಾಗಿದೆ. ಈ ಹಿಂದೆ ರಾಜ್ಯಪಾಲರಾಗಿದ್ದ ಶ್ರೀಮತಿ ವಿ.ಎಸ್.ರಮಾದೇವಿ ಅವರು ಜನಸಾಮಾನ್ಯ ಮತ್ತು ವಿದ್ಯಾರ್ಥಿಗಳಿಗೆ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿದ್ದರಲ್ಲದೆ, ತಾವೇ ಅನೇಕ ಬಾರಿ ಕಟ್ಟಡದ ವಾಸ್ತುಶಿಲ್ಪದ ಬಗ್ಗೆ ವಿವರಣೆ ಕೊಡುತ್ತಿದ್ದರು.

ಪ್ರಸ್ತುತ ಮತ್ತಷ್ಟು ಆಧುನೀಕರಣಗೊಂಡಿರುವ ರಾಜಭವನ ಕಟ್ಟಡವು ಕನಿಷ್ಠ ವಾರಾಂತ್ಯದಲ್ಲಾದರೂ ಸಾರ್ವಜನಿಕರ ವೀಕ್ಷಣೆಗೆ ನಿಯಮಾನುಸಾರ ಅವಕಾಶ ಮಾಡಿಕೊಡುವಂತೆ ಕ್ರಮಕೈಗೊಳ್ಳಲು ಸಮಿತಿಗೆ ಕೋರಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯಗಳ ಮಟ್ಟಿಗೆ ಸಾಂವಿಧಾನಿಕ ಸ್ಥಳಗಳಾಗಿರುವ ರಾಜಭವನಗಳು ಅಧ್ಯಯನ ಮತ್ತು ಪರಂಪರೆ ದೃಷ್ಟಿಯಿಂದ ಜನರ ವೀಕ್ಷಣೆ ಕೇಂದ್ರಗಳಾಗಬೇಕೆಂದು ವೇದಿಕೆ ಅಧ್ಯಕ್ಷ ಶಿವಕುಮಾರ್, ಶಾಸಕ ಎಸ್.ಟಿ.ಸೋಮಶೇಖರ್ ಮುಖೇನ ಸರ್ಕಾರವನ್ನು ಒತ್ತಾಯಿಸಿದ್ದಾರೆ.

**ಆಧಾರ**: ಉದಯವಾಣಿ, ದಿನಾಂಕ: 16.08.2024

## 38. ಹಕ್ಕುಚ್ಯುತಿ ಮಂಡನೆ: ಛಲವಾದಿ ಎಚ್ಚರಿಕೆ

ವಿಧಾನಪರಿಷತ್ ಪ್ರತಿಪಕ್ಷ ನಾಯಕನಾಗಿ ಅಧಿಕಾರ ಸ್ವೀಕರಿಸಿ 20 ದಿನಗಳು ಕಳೆದಿವೆ. ಡಿಜಿಗೆ ಪತ್ರ ಬರೆದರೂ ಶಿಷ್ಟಾಚಾರದ ಪ್ರಕಾರ ಬೆಂಗಾವಲು ವಾಹನ, ಮೂವರು ಗನ್‌ಮೆನ್, ಮನೆಗೆ ಭದ್ರತಾ ಸಿಬ್ಬಂದಿ

ಒದಗಿಸಿಲ್ಲ. ಮೌಖಿಕವಾಗಿ ವಿಚಾರಿಸಿದರೆ ಸಭೆಯಲ್ಲಿಟ್ಟು ತೀರ್ಮಾನಿಸಬೇಕಾಗಿದೆ ಎಂಬ ಹಾರಿಕೆ ಉತ್ತರ ಕೊಡುತ್ತಾರೆ ಎಂದು ಆರೋಪಿಸಿದ ಛಲವಾದಿ ನಾರಾಯಣಸ್ವಾಮಿ, ದಲಿತ ವ್ಯಕ್ತಿಯೊಬ್ಬ ಮೇಲ್ಮನೆ ವಿಪಕ್ಷ ನಾಯಕನಾಗಿದ್ದಕ್ಕೆ ಹೀಗೆ ತಾತ್ಸಾರ ಮಾಡುತ್ತಿರುವಂತಿದೆ. ಇದನ್ನು ಪ್ರತಿಭಟಿಸಿ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ಮಂಡಿಸುವುದಾಗಿ ತಿಳಿಸಿದರು. ವಿಧನಸೌಧದ ಪರಿಷತ್ ಪ್ರತಿಪಕ್ಷ ನಾಯಕರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ವಿಧಾನ ಪರಿಷತ್‌ನಾಗಿರುವ ಹಿನ್ನೆಲೆಯಲ್ಲಿ ನನಗೆ ಕೊಟ್ಟಿರುವ ಒಬ್ಬ ಗನ್‌ಮೆನ್, ಹಾಗೂ ಸರ್ಕಾರಿ ವಾಹನ ಹಿಂತಿರುಗಿಸಿ ಪತ್ರ ಬರೆದಿರುವೆ. ನನಗೇನಾದ್ರೂ ಹೆಚ್ಚುಕಡಿಮೆ ಆದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಸಾತ್ವಿಕ ಸಿಟ್ಟು ಹೊರಹಾಕಿದರು, ಶಿಷ್ಟಾಚಾರದ ಪ್ರಕಾರ ನನ್ನ ಹಕ್ಕು ಕೇಳುತ್ತಿರುವೆ. ನನಗೆ ಯಾವುದೇ  ಜೀವಭಯವಿಲ್ಲ, ಹೆದರುವ ಜಾಯಮಾನವೂ ನನ್ನದಲ್ಲ. ವಿಳಂಬ ಗಮನಿಸಿದರೆ ರಾಜಕೀಯ ಹಗೆತನ ಸಾಧಿಸುತ್ತಿರುವ ಅನುಮಾನ ಉಂಟಾಗುತ್ತಿದೆ ಎಂದು ನಾರಾಯಣಸ್ವಾಮಿ ಅಪಾದಿಸಿದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 13.08.2024

## 39. ವಿಧಾನಸೌಧದಲ್ಲಿ ಮಾಜಿ ಸಿಎಂಗಳ ಮ್ಯೂಸಿಯಂ: ಸಿಎಂಗೆ ಹೊರಟ್ಟಿ ಪತ್ರ

ಮಾಜಿ ಪ್ರಧಾನಿಗಳ ಜೀವನ–ಸಾಧನೆ–ಸೇವೆ ಸ್ಮರಿಸಲು ಸಂಸತ್‌ನಲ್ಲಿ ಸ್ಥಾಪಿಸಿರುವ ಮ್ಯೂಸಿಯಂ ಮಾದರಿಯಲ್ಲೇ ರಾಜ್ಯದ ಮಾಜಿ ಮುಖ್ಯಮಂತ್ರಿಗಳ ಭಾವಚಿತ್ರ, ಅವರ ಅವಧಿ–ಸೇವೆ ಮಾಹಿತಿ ನೀಡುವ ಮ್ಯೂಸಿಯಂ ಅನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸ್ಥಾಪಿಸಬೇಕು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಹೇಳಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ಸುಮಾರು 30 ಜನ ಮುಖ್ಯಮಂತ್ರಿಗಳು ರಾಜ್ಯ ಆಡಳಿತದ ಚುಕ್ಕಾಣಿ ಹಿಡಿದು, ನಾಡಿನ ಪ್ರಗತಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ವಿಧಾನಸೌಧ ಆವರಣದಲ್ಲಿ ಕೆಲ ಮಾಜಿ ಮುಖ್ಯಮಂತ್ರಿಗಳ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಜನ್ಮದಿನ ಹಾಗೂ ಪುಣ್ಯತಿಥಿ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ. ಇನ್ನು ಕೆಲವರ ಪ್ರತಿಮೆಗಳು ಇಲ್ಲವಾಗಿದ್ದು, ಇವರಿಗೆ ಗೌರವ ಸಲ್ಲಿಸುವ ಪ್ರಕ್ರಿಯೆ ಇಲ್ಲವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಕಡಿದಾಳ ಮಂಜಪ್ಪ ಎಸ್.ಆರ್.ಕಂಠಿ, ಬಿ.ಡಿ.ಜತ್ತಿ ಆರ್.ಗುಂಡೂರಾವ್, ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ಎಸ್.ಬಂಗಾರಪ್ಪ, ಎಸ್.ಆರ್.ಬೊಮ್ಮಾಯಿ, ಜೆ.ಹೆಚ್.ಪಟೇಲ್, ಧರಂಸಿಂಗ್‌ರಂತಹ ಗಣ್ಯರಿಗೆ ಗೌರವ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲ ಮಾಜಿ ಮುಖ್ಯಮಂತ್ರಿಗಳ ಪೂರ್ಣ ಪ್ರಮಾಣದ ಭಾವಚಿತ್ರ ಅವರ ಆಡಳಿತಾವಧಿ ನಮೂದಿಸಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಾಕಬೇಕು ಹಾಗೂ ಅವರಿಗೆ ಸರ್ಕಾರದಿಂದ ಗೌರವ ಸಲ್ಲಿಕೆಯಾಗುವಂತಾಗಬೇಕು ಎಂದು ಹೊರಟ್ಟಿ ತಿಳಿಸಿದ್ದಾರೆ.

**ಆಧಾರ**: ಉದಯವಾಣಿ, ದಿನಾಂಕ: 25.08.2024

## 40. ವಿಶ್ವ ಅಕ್ಕ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿರುವ ಹೊರಟ್ಟಿ

ಅಮೆರಿಕ ವರ್ಜೀನಿಯಾ ರಿಚ್ಮಂಡ್‌ನಲ್ಲಿ  ಆಯೋಜನೆಗೊಂಡಿರುವ 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕನ್ನಡ ನಾಡು, ನುಡಿ, ಭಾಷಾ ಬೆಳವಣಿಗೆ, ಕನ್ನಡದ ಅಸ್ಮಿತೆ, ಕನ್ನಡ ಭಾಷೆಯ ಪ್ರಚಾರಕ್ಕೆ ಕೈಗೊಳ್ಳಬೇಕಾದ ಇಂದಿನ ತುರ್ತು ಅವಶ್ಯಕತೆಗಳು ಸೇರಿದಂತೆ ಹಲವಾರು ಮಹತ್ವದ ವಿಷಯಗಳ ಕುರಿತು ಅವರು ತಮ್ಮ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲದ ಅನುಭವ, ವಿಚಾರಗಳನ್ನು ಅಲ್ಲಿನ ಕನ್ನಡಿಗರೊಂದಿಗೆ ಹಂಚಿಕೊಳ್ಳಲಿದ್ದಾರೆ.

ಅತಿದೊಡ್ಡ ಕನ್ನಡದ ಉತ್ಸವ ಎಂದೇ ಪರಿಗಣಿಸಲಾಗುವ ಸಮ್ಮೇಳನದಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ಕನ್ನಡಿಗರು ಭಾಗವಹಿಸಲಿದ್ದಾರೆ. ಕನ್ನಡ ನಾಡು, ನುಡಿ, ರಕ್ಷಣೆ ಕುರಿತು ವಿವಿಧ ಗೋಷ್ಠಿಗಳು, ಚಿಂತನ–ಮಂಥನ, ಸಂವಾದಗಳು ಜರುಗಲಿದ್ದು, ಅತ್ಯುತ್ತಮ, ಮನರಂಜನಾ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ.

ಕರ್ನಾಟಕ ವಿವಿಧ ಬಗೆಯ ರುಚಿಕರ ತಿಂಡಿ–ತಿನಿಸುಗಳು, ವಿವಿಧ ವಾಣಿಜ್ಯ ಮತ್ತು ವ್ಯಾಪಾರ ಮೇಳ ಹಾಗೂ ಮಳಿಗೆಗಳು, ಕಲೆ ಮತ್ತು ಸಾಹಿತ್ಯಿಕ ವೇದಿಕೆಗಳು, ಮಹಿಳಾ ವೇದಿಕೆ, ಯುವ ವೇದಿಕೆ, ವಿದ್ಯಾ ಸಂಸ್ಥೆಗಳ ಹಳೇ ವಿದ್ಯಾರ್ಥಿಗಳ ಮಹಾಸಂಗಮ, ವಿವಿಧ ಕ್ರೀಡಾಕೂಟಗಳು, ಆರೋಗ್ಯ ಮತ್ತು ಆಧ್ಯಾತ್ಮಿಕ ವೇದಿಕೆಗಳು ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳು ವಿಶೇಷ ಆಕರ್ಷಣೆಗಳಾಗಿವೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 28.08.2024

## 41. ಗ್ರೇಟರ್ ಬೆಂಗಳೂರು; ಜಂಟಿ ಪರಿಶೀಲನಾ ಸಮಿತಿ ರಚನೆ

ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ ಕುರಿತು ಜಂಟಿ ಪರಿಶೀಲನಾ ಸಮಿತಿ ರಚಿಸಲಾಗಿದೆ. ಸಮಿತಿಗೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ 13 ಸದಸ್ಯರನ್ನು ನೇಮಕ ಮಾಡಿದ್ದು, ಇಬ್ಬರು ಸಚಿವರನ್ನು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಿದ್ದಾರೆ.

ವಿಧಾನಸಭೆಯ 10 ಮತ್ತು ವಿಧಾನಪರಿಷತ್‌ನ ಮೂವರು ಸದಸ್ಯರನ್ನೊಳಗೊಂಡ ಜಂಟಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಇದರೊಂದಿಗೆ ವಿಧೇಯಕಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವ ಉಪಮುಖ್ಯಮಂತ್ರಿ ಶ್ರೀ ಡಿ.ಕೆ.ಶಿವಕುಮಾರ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲರನ್ನು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದೆ.

2024ನೇ ಸಾಲಿನ ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ ವರದಿ ನೀಡಲು ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿದೆ. ಆದರೆ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 260ರ ಪ್ರಕಾರ, ಜಂಟಿ ಪರಿಶೀಲನಾ ಸಮಿತಿಯು ತನ್ನ ಅಧ್ಯಕ್ಷನನ್ನು ತಾನೇ ಚುನಾಯಿಸಿಕೊಳ್ಳಬೇಕಿದೆ.

ಸಮಿತಿಯಲ್ಲಿ ವಿಧಾನಸಭಾ ಸದಸ್ಯರಾದ ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರಿಸ್, ಬಿ.ಶಿವಣ್ಣ, ಎಸ್.ಟಿ.ಸೋಮಶೇಖರ್, ಪ್ರಿಯಕೃಷ್ಣ, ಎ.ಸಿ.ಶ್ರೀನಿವಾಸ್, ಎಸ್.ಸುರೇಶ್‌ಕುಮಾರ್, ಎಸ್.ಆರ್.ವಿಶ್ವನಾಥ್, ಎಸ್.ರಘು, ಜಿ.ಟಿ.ದೇವೇಗೌಡರು, ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ ಯು.ಬಿ.ವೆಂಕಟೇಶ್, ಎಚ್.ಎಸ್.ಗೋಪಿನಾಥ್ ಅವರನ್ನು ಸಭಾಧ್ಯಕ್ಷರು ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ.

**ಆಧಾರ**: ವಿಶ್ವವಾಣಿ, ದಿನಾಂಕ: 28.08.2024

## 42. ಯುವಕರು ಜ್ಞಾನದಿಂದ ಬಲಾಢ್ಯರಾಗಬೇಕು

ರಾಜಕಾರಣಿಗಳು, ಉದ್ಯಮಿಗಳು ಬಲಶಾಲಿಗಳಾದರೆ ದೇಶ ಸದೃಢವಾಗುವುದಿಲ್ಲ. ಬದಲಾಗಿ, ಈ ದೇಶದ ಯುವಕರು ಜ್ಞಾನಿಗಳಾಗುವುದರಿಂದ ಈ ಆಶಯ ಈಡೇರುತ್ತದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ಭಾರತೀಯ ವಿದ್ಯಾಭವನದಲ್ಲಿ ಬಿ.ಪ್ಯಾಕ್ ಸಂಸ್ಥೆ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ಭಾರತ ವಿಶ್ವದಲ್ಲಿ ನಂ.1 ಸ್ಥಾನಕ್ಕೆ ಬರಬೇಕೆಂಬುದು ಎಲ್ಲರ ಅಪೇಕ್ಷೆ. ಆದರೆ ವಿಧಾನಸಭೆಯಲ್ಲಿ ಕುಳಿತ ರಾಜಕಾರಣಿಗಳು, ಲೋಕಸಭೆಯಲ್ಲಿ ಕುಳಿತ ಸಂಸದರು ಅಥವಾ ಕೆಲವೇ ಕೆಲವು ಉದ್ಯಮಿಗಳಿಂದ ಅದು ಸಾಧ್ಯವಿಲ್ಲ ಈ ನಿಟ್ಟಿನಲ್ಲಿ ಬಯೋಕಾನ್ ಸಂಸ್ಥೆಯ ಮುಖ್ಯಸ್ಥೆ ಕಿರಣ್ ಮಂಜೂಂದಾರ್ ಷಾ ಸ್ಥಾಪಿಸಿರುವ ಬಿ.ಪ್ಯಾಕ್ ಸಂಸ್ಥೆ ಶಿಕ್ಷಣ ಮತ್ತು ತರಬೇತಿ ನೀಡುವ ಮೂಲಕ ಸಮಾಜಕ್ಕೆ ಸತ್ಪ್ರಜೆಗಳನ್ನು ರೂಪಿಸುವ ಮಹತ್ವದ ಕಾರ್ಯ ಮಾಡುತ್ತಿದೆ. ಹಾಗೆ ತರಬೇತಿ ಪಡೆದ ವ್ಯಕ್ತಿಗಳು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇಶ ಕಟ್ಟುವ ಕೆಲಸಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ವಿದೇಶಗಳಿಗೂ ಭಾರತಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಅಲ್ಲಿ ಹಣ ಇಲ್ಲದವರು ಜೀವನ ನಡೆಸುವುದು ಕಷ್ಟಸಾಧ್ಯ. ಆದರೆ, ಇಲ್ಲಿ ಹಾಗಲ್ಲ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪ್ರತಿಯೊಬ್ಬರೂ ಧೈರ್ಯದಿಂದ ಬದುಕುತ್ತಿರುವುದಕ್ಕೆ ನಮ್ಮ ಸಂವಿಧಾನವೇ ಕಾರಣ. ಅಂತಹ ಸಂವಿಧಾನದ ಆಶಯಕ್ಕೆ ಪೂರಕವಾಗಿ ಚುನಾಯಿತ ಸರ್ಕಾರಗಳು ಕೆಲಸ ಮಾಡಿದ್ದೇ ಆದರೆ ದೇಶ ವೇಗವಾಗಿ ಪ್ರಗತಿ ಕಾಣುತ್ತದೆ. ವಿವಿಧ ಧರ್ಮದವರಿಗೆ ವಿವಿಧ ಧರ್ಮಗ್ರಂಥಗಳಿವೆ. ಆದರೆ ಮನೆಯಿಂದ ಹೊರಬಂದ ಮೇಲೆ ಸರ್ವಧರ್ಮದವರಿಗೆ ಸಂವಿಧಾನವೇ ಪರಮೋಚ್ಚ ಎಂದರು.

**ಆಧಾರ:** ಉದಯವಾಣಿ, ದಿನಾಂಕ: 01.09.2024

## 43. ರಾಜ್ಯ ವಿಧಾನಸಭೆ ಕಾರ್ಯವೈಖರಿಗೆ ಮೆಚ್ಚುಗೆ

ಕರ್ನಾಟಕ ವಿಧಾನಸಭೆಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಕೈಗೊಂಡಿರುವ ಸುಧಾರಣೆ ಕ್ರಮಗಳಿಗೆ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ದಿನಾಂಕ: 02.09.2024 ರಂದು ನವದೆಹಲಿಯಲ್ಲಿ ಲೋಕಸಭಾ ಅಧ್ಯಕ್ಷರಾದ ಓಂ ಬಿರ್ಲಾ ಅವರನ್ನು ಭೇಟಿಯಾಗಿ ಕಲಾಪದಲ್ಲಿ ತಾವು ತಂದಿರುವ ಸುಧಾರಣೆ ಕ್ರಮಗಳ ಬಗ್ಗೆ ವಿವರಿಸಿದರು. ಬೆಳಿಗ್ಗೆ 11ಕ್ಕೆ ಬದಲಾಗಿ 9 ಗಂಟೆಗೆ ಅಧಿವೇಶನ ಆರಂಭಿಸುವುದು. ಕಲಾಪಕ್ಕೆ ಬೇಗ ಬಂದು ಕೋರಂಗೆ ಸಹಕರಿಸುವ ಸದಸ್ಯರಿಗೆ ಬಹುಮಾನ ನೀಡುವುದು, ಸಭಾಂಗಣದಲ್ಲಿ ಸಂವಿಧಾನ ಪೀಠಿಕೆ ಅಳವಡಿಸಿರುವ ಕ್ರಮಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ಅಖಿಲ ಭಾರತ 85ನೇ ಪೀಠಾಸೀನಾಧಿಕಾರಿಗಳ ಸಮ್ಮೇಳನದ ಆಯೋಜನೆಗೆ ಕರ್ನಾಟಕದಲ್ಲಿ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಖಾದರ್ ಅವರು ಪ್ರಸ್ತಾಪಿಸಿದ್ದು, ಸೆಪ್ಟೆಂಬರ್ 23 ಮತ್ತು 24ರಂದು ದೆಹಲಿಯಲ್ಲಿ ನಡೆಯಲಿರುವ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಚರ್ಚೆ ನಡೆಸಿ ತೀರ್ಮಾನಿಸುವ ಭರವಸೆ ನೀಡಿದ್ದಾಗಿ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 03.09.2024

## 44. ಪೀಠಾಸೀನಾಧಿಕಾರಿಗಳ ಸಮ್ಮೇಳನ ರಾಜ್ಯದಲ್ಲಿ ಆಯೋಜಿಸಿ: ಸ್ಪೀಕರ್

ಪ್ರತಿ ವರ್ಷ ನಡೆಯುವಂತಹ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನವನ್ನು ಈ ಬಾರಿ ಕರ್ನಾಟಕದಲ್ಲಿ ನಡೆಸುವ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ರಾಜ್ಯ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮನವಿ ಮಾಡಿದರು.

ನವದೆಹಲಿಯಲ್ಲಿ ಲೋಕಸಭಾಧ್ಯಕ್ಷರನ್ನು ಭೇಟಿ ಮಾಡಿದ ಅವರು, ಕರ್ನಾಟಕದಲ್ಲಿ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ ನಡೆದು 22 ವರ್ಷಗಳಾಗಿದ್ದು, 85ನೇ ಸಮ್ಮೇಳನವನ್ನು ಕರ್ನಾಟಕದಲ್ಲಿ ನಡೆಸುವಂತೆ ಕೋರಿದರು.

ಈ ಕುರಿತು ಸೆಪ್ಟೆಂಬರ್ 23 ಹಾಗೂ 24 ರಂದು ದೆಹಲಿಯ ನೂತನ ಸಂಸತ್ ಭವನದಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳುವುದಾಗಿ ಸ್ಪೀಕರ್ ಓಂಬಿರ್ಲಾ ಭರವಸೆ ಕೊಟ್ಟಿದ್ದಾರೆ.

ಸದನವನ್ನು ಕ್ರಿಯಾತ್ಮಕವಾಗಿ ನಡೆಸಲು ಕರ್ನಾಟಕ ವಿಧಾನಸಭೆಯಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ವಿವರಿಸಿದ ಸ್ಪೀಕರ್ ಖಾದರ್, ಬೆಳಗ್ಗೆ 9 ಗಂಟೆಯಿಂದಲೇ ಕಲಾಪ ನಡೆಸುತ್ತಿರುವ ಕುರಿತು ಮಾಹಿತಿ ಒದಗಿಸಿದರು. ಬೆಳಗಿನ ಉಪಹಾರ, ಮಧ್ಯಾಹ್ನ ಭೋಜನದ ವ್ಯವಸ್ಥೆ ಕೋರಂ ಆಗಲು ಸಹಕರಿಸುವ ಶಾಸಕರ ಗುರುತಿಸುವಿಕೆ, ಅತ್ಯುತ್ತಮ ಶಾಸಕ ಪ್ರಶಸ್ತಿ, ಶಾಸಕರು ಕಲಾಪದಲ್ಲಿ ಇದ್ದಷ್ಟು ಸಮಯವನ್ನು ಕೃತಕ ಬುದ್ಧಿಮತ್ತೆ ಮೂಲಕ ದಾಖಲಿಸುವುದು ಸೇರಿದಂತೆ ಹಲವು ಕ್ರಮ ಕೈಗೊಂಡಿರುವುದು ವಿವರಿಸಿದರು.

**ಆಧಾರ:** ಉದಯವಾಣಿ, ದಿನಾಂಕ: 03.09.2024

## 45. ಅನ್ನದ ಭಾಷೆಯಾಗಿ ಕನ್ನಡ: ಗಂಭೀರ ಚಿಂತನೆಗೆ ಕರೆ

ಕನ್ನಡ ಭಾಷೆಯನ್ನು ಅನ್ನದ ಭಾಷೆಯನ್ನಾಗಿಸುವಲ್ಲಿನ ಸವಾಲುಗಳನ್ನು ಎದುರಿಸುವಲ್ಲಿ ಗಂಭೀರ ಚಿಂತನೆ ನಡೆಸಬೇಕೆಂದು ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಕರೆ ನೀಡಿದ್ದಾರೆ. ಅಮೆರಿಕಾದ ವರ್ಜೀನಿಯಾ ರಾಜ್ಯದ ರಾಜಧಾನಿ ರಿಚ್ಮಂಡ್ ನಗರದಲ್ಲಿ ನಡೆಯುತ್ತಿರುವ ಅಕ್ಕ 12ನೇ ವಿಶ್ವ ಕನ್ನಡ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕನ್ನಡವನ್ನು ವ್ಯವಹಾರಿಕವಾಗಿ ಬಳಸುವ ಪ್ರಮಾಣ ಕಡಿಮೆಯಾಗುತ್ತಿದ್ದು, ಉದ್ಯೋಗ ಮತ್ತಿತರೆ ಕಾರಣಗಳಿಗಾಗಿ ಬಹುತೇಕರು ಆಂಗ್ಲಭಾಷೆಯನ್ನೇ ಬಳಸುತ್ತಿದ್ದಾರೆ. ಕನ್ನಡ ಭಾಷೆಯಲ್ಲಿ ಕಲಿತವರಿಗೆ ಸೂಕ್ತ ಉದ್ಯೋಗ ದೊರೆಯುವಂತಹ ವ್ಯವಸ್ಥೆ ಜಾರಿಗೆ ತರುವ ಮೂಲಕ ಕನ್ನಡವನ್ನು ಅನ್ನದ ಭಾಷೆಯಾಗಿಸಬೇಕೆಂದು ಹೊರಟ್ಟಿ ಕಿವಿಮಾತು ಹೇಳಿದರು.

ಪ್ರಪಂಚದಲ್ಲಿ ಬಳಹಷ್ಟು ಭಾಷೆಗಳು ಅಸ್ತಿತ್ವ ಕಳೆದುಕೊಳ್ಳುತ್ತಿದ್ದು ಕನ್ನಡವೂ ಅಂತಹದೊಂದು ಆತಂಕವನ್ನು ಎದುರಿಸುತ್ತಿದೆ. ಜಾಗತಿಕ ಪೈಪೋಟಿ ಭರಾಟೆಯಲ್ಲಿ ಬದುಕಿಗಾಗಿ ಮಾತೃಭಾಷೆಯನ್ನು ತೊರೆದು ಅನ್ನದ ಭಾಷೆಗೆ ಜೋತು ಬೀಳುವ ಪರಿಸ್ಥಿತಿ ಸೃಷ್ಟಿಯಾಗಿರುವುದು ದುರ್ದೈವದ ಸಂಗತಿ ಎಂದು ಸಭಾಪತಿ ಹೊರಟ್ಟಿ ವಿಷಾದ ವ್ಯಕ್ತಪಡಿಸಿದರು.

ಕನ್ನಡ, ಕನ್ನಡಿಗ ಹಾಗೂ ಕರ್ನಾಟಕತ್ವ ಅಸ್ತಿತ್ವಕ್ಕಾಗಿ "ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್, ಡೆಪ್ಯೂಟಿ ಚನ್ನಬಸಪ್ಪ ಮತ್ತಿತರ ಮಹಾನ್ ಪುರುಷರು ಕನ್ನಡ ಪ್ರಜ್ಞೆಯನ್ನು ಉಳಿಸಿ, ಬೆಳಸಿ ಕನ್ನಡದ ಸಾಂಸ್ಕೃತಿಕ ನೆಲೆಯನ್ನು ಗಟ್ಟಿಗೊಳಿಸಿ ಚಲುವ ಕನ್ನಡ ನಾಡನ್ನು ಕಟ್ಟಲು ಶ್ರಮಿಸಿದ ಇತಿಹಾಸವನ್ನು ನಾವೆಲ್ಲರೂ ಅರಿಯಬೇಕಿದೆ ಎಂದ ಅವರು, ಕನ್ನಡ ಭಾಷೆ ಹಳ್ಳಿಗಳಲ್ಲಿ ಮಾತ್ರ ಹೆಚ್ಚು ಪ್ರಚಲಿತದಲ್ಲಿದ್ದು

ಪಟ್ಟಣಗಳಲ್ಲಿ, ಪ್ರತಿಷ್ಠಿತ ಶಾಲಾ ಕಾಲೇಜುಗಳಲ್ಲಿ ಕಲಿತವರಲ್ಲಿ ಕನ್ನಡದ ಬಗ್ಗೆ ಅಸಡ್ಡೆಯ ಭಾವವಿರುವುದು ದುರದುಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ತಾಯಿ ಕರ್ನಾಟಕದಲ್ಲಿ ಕಳೆದು ಹೋಗದಂತೆ ನಾವೆಲ್ಲರೂ ಗಂಭೀರವಾಗಿ ಚಿಂತಿಸಿ ಕನ್ನಡ ನೆಲ, ಜಲ, ಭಾಷೆ, ಸಂಸ್ಕೃತಿಗಳ ಉಳುವಿಗಾಗಿ ಶ್ರಮಿಸಬೇಕು ಎಂದು ಕರೆ ನೀಡಿದ ಬಸವರಾಜ ಎಸ್. ಹೊರಟ್ಟಿ, ಕನ್ನಡ ಭಾಷೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಹಲವಾರು ಯೋಜನೆಗಳನ್ನು ಕೈಗೊಂಡಿದ್ದು, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದೆ. ಆ ಆದೇಶದಲ್ಲಿ ಕಟ್ಟುನಿಟ್ಟಿನ ಪಾಲನೆಯಾಗುವತ್ತ ಸರ್ಕಾರ ಹಾಗೂ ಅಧಿಕಾರಿಗಳು ಸಹ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದರು.

ಜಗತ್ತಿನೆಲ್ಲೆಡೆ ಇರುವ ಕನ್ನಡಿಗರು ಎಂದೆಂದಿಗೂ ಕನ್ನಡಿಗರಾಗಿ ಉಳಿಯುವುದರ ಜತೆಗೆ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಸಂಕಲ್ಪದ ಪ್ರತೀಕವಾಗಿ ಅಕ್ಕ ವಿಶ್ವ ಕನ್ನಡ ಸಮ್ಮೇಳನ ನಡೆಯುತ್ತಿರುವುದು ಶ್ಲಾಘನೀಯ ಎಂದು ಸಭಾಪತಿಗಳು ಮೆಚ್ಚುಗೆ ಸೂಚಿಸಿದರು.

**ಆಧಾರ**: ಉದಯವಾಣಿ, ದಿನಾಂಕ: 07.08.2024

## 46. ಜಗತ್ತಿನಲ್ಲೇ ಮೊದಲಿಗೆ ಪ್ರಜಾಪ್ರಭುತ್ವದ ಪರಿಕಲ್ಪನೆ ತಂದ ಬಸವಣ್ಣ

ಅನುಭವದ ಮಂಟಪದ ಮೂಲಕ ಜಗತ್ತಿಗೆ ಮೊಟ್ಟಮೊದಲು ಪ್ರಜಾಪ್ರಭುತ್ವ ಪರಿಕಲ್ಪನೆಯನ್ನು ನೀಡಿದ ಬಸವಣ್ಣ ಪ್ರಥಮ ಪ್ರಜಾಪ್ರಭುತ್ವವಾದಿ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಹೇಳಿದ್ದಾರೆ. ಬಸವ ಸಮಿತಿಯ ಅನುಭವ ಮಂಟಪ ಸಭಾಂಗಣದಲ್ಲಿ ಆಯೋಜಿಸಿದ್ದ ಮಾಜಿ ಉಪರಾಷ್ಟ್ರಪತಿ ಡಾ.ಬಿ.ಡಿ.ಜತ್ತಿ 112ನೇ ಜಯಂತಿ ಮತ್ತು ಬಸವ ಸಮಿತಿ ವಜ್ರಮಹೋತ್ಸವ ಉದ್ಘಾಟಿಸಿ ಮಾತನಾಡಿದರು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಅನುಷ್ಠಾನಗೊಳಿಸಿ, ಜಗತ್ತಿಗೆ ಜಾತ್ಯತೀತ ಸಮಸಮಾಜ, ಶೋಷಣೆರಹಿತ ಹಾಗೂ ಕಾಯಕ ದಾಸೋಹದ ಕ್ರಾಂತಿಕಾರಿ ತತ್ವಾದರ್ಶವನ್ನು ಸಾರಿದ ಬಸವಣ್ಣನವರು ಕರ್ನಾಟಕದಲ್ಲಿದ್ದುದು ನಾಡಿಗೆ ಬಹುದೊಡ್ಡ ಗೌರವ. ಬಸವಣ್ಣನ ತತ್ವಾದರ್ಶಗಳನ್ನು ಜಗತ್ತಿಗೆ ಮುಟ್ಟಿಸಬೇಕಿದ್ದು, ರಾಜಕಾರಣ ದೂರವಿಟ್ಟು ಕಾಳಜಿ ವಹಿಸಿದರೆ ಅದು ಸಾಧ್ಯವಾಗುತ್ತದೆ ಎಂದರು.

'ಲಿಂಗಾಯತರು ಒಳಪಂಗಡಗಳನ್ನು ಮರೆತು ಒಂದಾಗಬೇಕು. ಲಿಂಗಾಯತರು ಇಡೀ ಜಗತ್ತನ್ನು ಆಳಬಲ್ಲರು, ಆದರೆ ಅವರಲ್ಲಿ ಒಗ್ಗಟ್ಟಿಲ್ಲ' ಎಂದು ಮಾಜಿ ಸಿ.ಎಂ. ರಾಮಕೃಷ್ಣ ಹೆಗಡೆ ಅವರು ಹೇಳಿದ ಮಾತು ನಿಜ. ಲಿಂಗಾಯತರಲ್ಲಿ ಒಗ್ಗಟ್ಟು ಮೂಡಿಸಲು ಜತ್ತಿಯವರು ಮಾಡಿದ ಕಾರ್ಯ ಸ್ತುತ್ಯಾರ್ಹ ಎಂದು ಹೇಳಿದರು.

**ಆಧಾರ**: ವಿಜಯವಾಣಿ, ದಿನಾಂಕ: 15.09.2024

## 47. ಭಾರತದಲ್ಲಿ ಸಮಸ್ಯೆಗಳ ಆಧಾರಿತ ಚರ್ಚೆಗಳಾಗಲಿ: ಯು.ಟಿ.ಖಾದರ್

ಜಾಗತಿಕವಾಗಿ ಭಾರತ ಹೆಚ್ಚು ಯುವ ಸಮುದಾಯವನ್ನು ಹೊಂದಿದೆ. ಇಲ್ಲಿ ಸಮಸ್ಯೆ ಆಧಾರಿತ ಚರ್ಚೆ ಹಾಗೂ ವಾದಗಳು ಮಂಡನೆಯಾಗಬೇಕೆಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು. ರಾಜಸ್ಥಾನದ ಜೈಪುರದಲ್ಲಿ ನಡೆದ ಇಂಡಿಯನ್ ಯೂತ್ ಪಾರ್ಲಿಮೆಂಟ್ 27ನೇ ರಾಷ್ಟ್ರೀಯ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಜಾಗತಿಕ ಅಂಕಿ ಅಂಶಗಳ ಪ್ರಕಾರ ಭಾರತ ಸುಮಾರು 35.6 ಕೋಟಿ ಯುವಶಕ್ತಿಯನ್ನು ಹೊಂದಿದೆ. ಹಾಗಾಗಿ ದೇಶವನ್ನು ಯಂಗ್ ಇಂಡಿಯಾ ಎಂದು ಕರೆಯಲಾಗುತ್ತಿದೆ. ಇಲ್ಲಿ ಹೆಚ್ಚಾಗಿ ಸಮಸ್ಯೆ ಆಧಾರಿತ ಚರ್ಚೆಗಳು ನಡೆಯಬೇಕಿದೆ ಎಂದರು.

ಸುಭದ್ರ ರಾಷ್ಟ್ರ ನಿರ್ಮಾಣದಲ್ಲಿ ಯುವಜನತೆ ಪಾತ್ರ ಮಹತ್ವದ್ದು, ಆ ನಿಟ್ಟಿನಲ್ಲಿ ಸಂಸತ್ತು ಮತ್ತು ರಾಜ್ಯಗಳಲ್ಲಿರುವ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಕಾರ್ಯ ಚಟುವಟಿಕೆ ಕುರಿತು ತಿಳಿದುಕೊಳ್ಳುವ ಅತ್ಯಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ರಾಜಸ್ಥಾನದ ರಾಜ್ಯಪಾಲರು ಹಾಗೂ ರಾಜಸ್ಥಾನ ವಿಧಾನಸಭೆ ಸಭಾಧ್ಯಕ್ಷರು ಸೇರಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

**ಆಧಾರ**: ಉದಯವಾಣಿ, ದಿನಾಂಕ: 16.09.2024

## 48. ಕುಲಪತಿ, ಕುಲಸಚಿವರ ಹುದ್ದೆಗೆ ಶಿಕ್ಷಣ ಪರಿಣಿತರು, ಸಾಧಕರನ್ನೇ ನೇಮಿಸಿ

ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸ್ಥಾಪನೆಯಾದ 11 ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಲಾಗಿದ್ದು, ಈ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಉತ್ತರ ಕರ್ನಾಟಕ ಭಾಗದವರನ್ನೇ ನೇಮಕ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರಿಗೆ ಪತ್ರ ಬರೆದು ಒತ್ತಾಯ ಮಾಡಿದ್ದಾರೆ. ಧಾರವಾಡದಲ್ಲಿ ಕರ್ನಾಟಕ ವಿ.ವಿ., ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ., ವಿಜಯಪುರದಲ್ಲಿ ಅಕ್ಕಮಹಾದೇವಿ ಮಹಿಳಾ ವಿವಿ., ಬೆಳಗಾವಿಯಲ್ಲಿ ರಾಣಿ ಚೆನ್ನಮ್ಮ ವಿವಿ., ಗೋಟಿಗೋಡಿಯಲ್ಲಿ ಜಾನಪದ ವಿ.ವಿ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿವಿ, ಬಾಗಲಕೋಟೆ ವಿಶ್ವವಿದ್ಯಾಲಯ, ಗದಗನಲ್ಲಿ ಪಂಚಾಯತ್ ರಾಜ್ ಗ್ರಾಮೀಣಾಭಿವೃದ್ಧಿ ವಿ.ವಿ., ಧಾರವಾಡದಲ್ಲಿ ಕೃಷಿ ವಿ.ವಿ, ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ವಿ.ವಿ, ಹಾವೇರಿಯಲ್ಲಿ ಹಾವೇರಿ ವಿ.ವಿ. ಸೇರಿದಂತೆ 11 ವಿವಿಗಳಿವೆ. ಉತ್ತರ ಕರ್ನಾಟಕ ಭಾಗದಲ್ಲಿನ ಈ 11 ವಿಶ್ವವಿದ್ಯಾಲಯಗಳಿಗೆ ಇದೇ ಭಾಗದವರನ್ನೇ ಕುಲಪತಿ, ಕುಲಸಚಿವರನ್ನಾಗಿ ನೇಮಕ ಮಾಡುವುದರಿಂದ ಅನೇಕ ಅನುಕೂಲತೆಗಳಿವೆ ಎಂದಿದ್ದಾರೆ.

ಸ್ಥಳೀಯ ಕ್ಷೇತ್ರದ ಬಗ್ಗೆ ಅವರಿಗೆ ಹೆಚ್ಚಿನ ಪರಿಚಯ ಇರುತ್ತದೆ. ಈ ಭಾಗದ ವಿದ್ಯಾರ್ಥಿಗಳ ಹಾಗೂ ಶೈಕ್ಷಣಿಕ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸುತ್ತಾರೆ ಎಂದು ವಿವರಿಸಿದ್ದಾರೆ. ಈ ಹಿನ್ನಲೆಯಲ್ಲಿ ಈ ಭಾಗದ ಅರ್ಹತೆ ಇರುವವರನ್ನು ಹಾಗೂ ಆಯಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಒಳಪಡುವ ಮತ್ತು ಅರ್ಹತೆ ಇರುವಂತಹ ಪ್ರಾಧ್ಯಾಪಕರನ್ನು ಕುಲಪತಿ ಮತ್ತು ಕುಲಸಚಿವರ ಹುದ್ದೆಗೆ ನೇಮಕ ಮಾಡಿಕೊಳ್ಳಬೇಕು. ಈ ಭಾಗದಲ್ಲಿ ಶಿಕ್ಷಣ ಪರಿಣಿತರು ಹಾಗೂ ಉತ್ತಮ ಶೈಕ್ಷಣಿಕ ಮಹತ್ಸಾಧನೆ ಮಾಡಿದವರು ಅನೇಕರಿದ್ದಾರೆ. ತಮ್ಮ ಪ್ರತಿಭೆಯ ಪ್ರಭೆಯಿಂದ ಈ ಭಾಗದ ಶೈಕ್ಷಣಿಕ ಲೋಕವನ್ನು ಶ್ರೀಮಂತಗೊಳಿಸಿ, ಉತ್ತರ ಕರ್ನಾಟಕಕ್ಕೆ ಕೊಡುಗೆಯನ್ನು ನೀಡಲು ಪ್ರತಿಭಾ ಸಂಪನ್ನರಿಗೆ ಅವಕಾಶ ಮಾಡಿಕೊಡಬೇಕು. ಇದರಿಂದ ಮುಂಬರುವ

ದಿನಗಳಲ್ಲಿ ಶಿಕ್ಷಣ ಕ್ಷೇತ್ರ ಅಭಿವೃದ್ಧಿ ಹೊಂದಿ, ಶೈಕ್ಷಣಿಕವಾಗಿ ಉನ್ನತ ಸ್ಥಾನ ತಲುಪಲು ಸಹಕಾರಿಯಾಗುತ್ತದೆ ಎಂದು ಪತ್ರದಲ್ಲಿ ಕೋರಿದ್ದಾರೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 23.09.2024

## 49. ಕನಿಷ್ಠ 60 ದಿನ ಅಧಿವೇಶನ ಕಡ್ಡಾಯ ಮಾಡಿ: ಸಭಾಪತಿ ಹೊರಟ್ಟಿ ಮನವಿ

ಶಾಸನ ಸಭೆಗಳು ಜನಸಾಮಾನ್ಯರ ಬದುಕಿನ ಜ್ವಲಂತ ಸಮಸ್ಯೆಗಳ ಕುರಿತು ಚರ್ಚಿಸುವ ಸೂಕ್ತ ವೇದಿಕೆಗಳಾಗಿದ್ದು, ವಾರ್ಷಿಕವಾಗಿ ಕನಿಷ್ಠ 60 ದಿನ ಅಧಿವೇಶನ ನಡೆಸುವುದನ್ನು ಕಡ್ಡಾಯಗೊಳಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ಲೋಕಸಭಾಧ್ಯಕ್ಷರಿಗೆ ಮನವಿ ಮಾಡಿದ್ದಾರೆ.

ನಗರದಲ್ಲಿ 10ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದ ಅಂಗವಾಗಿ ಜರುಗಿದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿ, ಪ್ರಜಾಪ್ರಭುತ್ವದ ಸಾರ್ಥಕತೆಗಾಗಿ ಪ್ರತಿವರ್ಷವೂ ಶಾಸನಸಭೆಗಳು ಕನಿಷ್ಠ 60 ದಿನಗಳ ಕಾಲ ಅಧಿವೇಶನ ನಡೆಸುವಂತೆ ಲೋಕಸಭೆ ಹಾಗೂ ರಾಜ್ಯ ಸಭೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು. ಶಾಸನ ಸಭೆಗಳ ಸ್ವತಂತ್ರ ನಿರ್ವಹಣೆ ಹಾಗೂ ಪಕ್ಷಾತೀತ ಕಾರ್ಯನಿರ್ವಹಣೆ ದೃಷ್ಟಿಯಿಂದ ಅವುಗಳಿಗೆ ಆರ್ಥಿಕ ಸ್ವಾಯತ್ತತೆ ನೀಡುವ ನಿಟ್ಟಿನಲ್ಲಿ ಸೂಕ್ತ ಕಾನೂನು ಕ್ರಮ ಅವಶ್ಯಕವಾಗಿದೆ. ಶಾಸನ ಸಭೆಗಳ ಸಚಿವಾಲಯಕ್ಕೆ ಸ್ವಾಯತ್ತ ಸ್ಥಾನ–ಮಾನ ನೀಡುವ ಕುರಿತು ಕಾನೂನು ಮೂಲಕ ಸೂಕ್ತ ನಿರ್ಧಾರ ಕೈಗೊಂಡು ಸದನಗಳ ಗೌರವ, ಘನತೆ ಹಾಗೂ ಪ್ರಾಮುಖ್ಯತೆ ಹೆಚ್ಚಿಸಬೇಕು ಎಂದು ಮನವಿ ಮಾಡಿದ್ದಾರೆ. ಸಮ್ಮೇಳನದಲ್ಲಿ ಲೋಕ ಸಭಾಧ್ಯಕ್ಷ ಓಂ ಬಿರ್ಲಾ, ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಸೇರಿ ವಿವಿಧ ರಾಜ್ಯಗಳ ಸಭಾಧ್ಯಕ್ಷರು ಪಾಲ್ಗೊಂಡಿದ್ದರು.

**ಆಧಾರ**: ಕನ್ನಡ ಪ್ರಭ ದಿನಾಂಕ: 24.09.2024

## 50. ದೇಶದ ಏಳ್ಗೆಯಲ್ಲಿ ಶಾಸನ ಸಭೆಗಳ ಪಾತ್ರ ಮಹತ್ತರ

ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದ ಸರ್ವಾಂಗೀಣ ಅಭ್ಯುದಯದಲ್ಲಿ ಶಾಸನ ಸಭೆ ಹಾಗೂ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ತರವಾದುದು ಎಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ನವದೆಹಲಿಯಲ್ಲಿ ನೂತನ ಸಂಸತ್ ಭವನದಲ್ಲಿ ನಡೆದ ಎರಡು ದಿನಗಳ 10ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯ ಸಮ್ಮೇಳನದಲ್ಲಿ "ಸುಸ್ಥಿರ ಹಾಗೂ ಸಮಗ್ರ ಅಭಿವೃದ್ಧಿ ಸಾಧಿಸುವಲ್ಲಿ ಶಾಸನ ಸಭೆಗಳ ಪಾತ್ರ" ಎಂಬ ವಿಷಯ ಕುರಿತು ಅವರು ವಿಚಾರ ಮಂಡಿಸಿದರು.

ದೇಶದ ಉನ್ನತಿಯಲ್ಲಿ ಶಾಸನ ಸಭೆಗಳ ಹಾಗೂ ಜನಪ್ರತಿನಿಧಿಗಳ ಕ್ರಿಯಾಶೀಲತೆ ಹಾಗೂ ಪಕ್ಷಭೇದವಿಲ್ಲದ ಅಭಿವೃದ್ಧಿ ಪರ ಚಿಂತನೆಯಿಂದ ಮಾತ್ರ ರಾಷ್ಟ್ರದ ಭವಿಷ್ಯ ಉಜ್ವಲವಾಗಬಲ್ಲದು. ಶಾಸನ ಸಭೆಗಳ ಕಾರ್ಯಚಟುವಟಿಕೆಗಳ ಸಮಾಜದ ಮೂಲಭೂತ ಅವಶ್ಯಕತೆಗಳ ಮೇಲೆ ಕೇಂದ್ರೀಕೃತವಾಗಿ ದೇಶದಲ್ಲಿರುವ ಬಡತನ, ಜನರ ಸಂಕಷ್ಟ ಬವಣೆಗಳ ನಿವಾರಣೆ ನಿಟ್ಟಿನಲ್ಲಿ ಚಿಂತನೆ ನಡೆಸುವ ಚಿಂತಕರ ಚಾವಡಿಗಳಾಗಿ ಪರಿವರ್ತನೆಯಾದಾಗ ಮಾತ್ರ ಪ್ರಜಾಪ್ರಭುತ್ವದ ನೈಜ ಆಶಯಗಳು ಈಡೇರಿಸಲು ಸಾಧ್ಯವಾಗುತ್ತದೆ ಎಂದರು. ಅಭಿವೃದ್ಧಿ ಪರ ಕಾನೂನುಗಳ ಜಾರಿ ಮತ್ತು ಅನುಷ್ಠಾನಗಳ ಕುರಿತು ಅಧ್ಯಯನ

ನಡೆಸಿ ಅವುಗಳ ಕಾರ್ಯರೂಪಕ್ಕೆ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಆದ್ಯತೆ ನೀಡಬೇಕು. ಶಾಸನ ಸಭೆಗಳು ಆಧುನಿಕ ತಂತ್ರಜ್ಞಾನಕ್ಕೆ ಪೂರಕವಾಗಿ ತಮ್ಮನ್ನು ಸನ್ನದ್ಧಗೊಳಿಸಿಕೊಂಡು ದೇಶದ ಅಗತ್ಯ ಬೇಡಿಕೆಗಳ ಈಡೇರಿಕೆಗೆ ಪಣ ತೊಡಬೇಕಾದ ಅವಶ್ಯಕತೆಯನ್ನು ಹೊರಟ್ಟಿ ಪ್ರತಿಪಾದಿಸಿದರು.

ಸಮ್ಮೇಳನದಲ್ಲಿ ದೇಶದ ಎಲ್ಲಾ ರಾಜ್ಯಗಳ ವಿಧಾನಸಭೆಯ ಸಭಾಧ್ಯಕ್ಷರು, ಉಪಸಭಾಧ್ಯಕ್ಷರುಗಳು ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ಉಪಸಭಾಪತಿಗಳು ಭಾಗವಹಿಸಿದ್ದರು. ಲೋಕಸಭಾಧ್ಯಕ್ಷ ಓಂ ಬಿರ್ಲಾ, ರಾಜ್ಯಸಭೆಯ ಉಪಸಭಾಪತಿ ಹರವಂಶಜಿ ವೇದಿಕೆಯಲ್ಲಿದ್ದರು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿ ಮಹಾಲಕ್ಷ್ಮಿ, ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಇತರರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 25.09.2024

# ಭಾಗ–2

## ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

# 1. ವಿಧಾನಪರಿಷತ್ತಿನ 153ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ವಿಧಾನ ಪರಿಷತ್ತಿನ 153ನೇ ಪ್ರಸ್ತುತ ಅಧಿವೇಶನವು ದಿನಾಂಕ: 15.07.2024 ರಿಂದ ದಿನಾಂಕ 25.07.2024 ರವರೆಗೆ ಒಟ್ಟು 08 ದಿನಗಳು ಅಂದರೆ, 37 ಗಂಟೆಗಳು 30 ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು. ICC Men’s T20 World Cup ನಲ್ಲಿ ವಿಜೇತರಾದ ಭಾರತೀಯ ಕ್ರಿಕೆಟ್ ತಂಡಕ್ಕೆ ಗೌರವ ಸಮರ್ಪಿಸಲು ಅಭಿನಂದನಾ ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಲಾಯಿತು.

2024–25ನೇ ಸಾಲಿನ ಪೂರಕ ಅಂದಾಜು (ಮೊದಲನೇ ಕಂತು)ಗಳ ಬೇಡಿಕೆಗಳನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02, 03 ಹಾಗೂ 04ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:1), ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ (2024ರ ವರದಿ ಸಂಖ್ಯೆ:2), ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಇಲಾಖೆ ನೀಡಿರುವ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು (2024ರ ವರದಿ ಸಂಖ್ಯೆ:2), ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಅನುಸರಣಾ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:3)ಗಳನ್ನು ಮಂಡಿಸಲಾಯಿತು.

ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಪರಿಶೀಲನಾ ಸಮಿತಿಯ ವರದಿ, ಅನುಸೂಚಿತ ಜಾತಿ ಮತ್ತು

ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 3ನೇ ವರದಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮೊದಲನೆಯ ವರದಿಗಳನ್ನು ಒಪ್ಪಿಸಲಾಯಿತು.

ವಿಧಾನ ಮಂಡಲದ ಜಂಟಿ/ವಿಧಾನ ಪರಿಷತ್ತಿನ ವಿವಿಧ ಸ್ಥಾಯಿ ಸಮಿತಿಗಳಿಗೆ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್, ಕರ್ನಾಟಕ ರಾಜ್ಯ ಅಂಗವಿಕಲರ ಸಲಹಾ ಮಂಡಳಿ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ನಿಯಮಾವಳಿ ಸಮಿತಿಗೆ ಮಾನ್ಯ ಶಾಸಕರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 19.06.2024ರಿಂದ 02 ತಿಂಗಳುಗಳು ಹಾಗೂ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 22.04.2024 ರಿಂದ 06 ತಿಂಗಳುಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗಳಿಗೆ ಸದನದ ಸಹಮತಿಯನ್ನು ಪಡೆಯಲಾಯಿತು. ನಾಲ್ಕು ಅಧಿಕೃತ ನಿರ್ಣಯಗಳನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ. ನಿಯಮ 59 ರಡಿಯಲ್ಲಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ನಿಯಮ 68ಕ್ಕೆ, 01 ನಿಯಮ 72ಕ್ಕೆ ಪರಿವರ್ತನೆಗೊಂಡು ಸದನದಲ್ಲಿ ಉತ್ತರಿಸಲಾಗಿರುತ್ತದೆ ಹಾಗೂ 02 ನಿಯಮ 330ಕ್ಕೆ ಪರಿವರ್ತಿಸಲಾಗಿದೆ. 01 ತಿರಸ್ಕೃತಗೊಂಡಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 4251 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 90 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 16 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು, ಲಿಖಿತ ಮೂಲಕ ಉತ್ತರಿಸುವ ಒಟ್ಟು 1116 ಪ್ರಶ್ನೆಗಳ ಪೈಕಿ 348 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 08 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. 3 ಸೂಚನೆಗಳನ್ನು ಚರ್ಚಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 126 ಸೂಚನೆಗಳನ್ನು ಸ್ವೀಕರಿಸಿದ್ದು. ಅವುಗಳ ಪೈಕಿ 08 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 49 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 87 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 05 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 31 ಸೂಚನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 62 ಸೂಚನೆಗಳ ಪೈಕಿ 39 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ಪರಿಶೀಲನಾ ಸಮಿತಿಗೆ ವಹಿಸಲಾಗಿದ್ದ ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕಗಳನ್ನು ಹಾಗೂ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2 ವಿಧೇಯಕಗಳು ಹಾಗೂ ತಿದ್ದುಪಡಿಯಿಲ್ಲದೆ ಅಂಗೀಕೃತ ರೂಪದಲ್ಲಿರುವ ಒಟ್ಟು 10 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

## 2. ವಿಶೇಷ ಸದನ ಸಮಿತಿಯ ಅವಧಿ ವಿಸ್ತರಣೆಗೆ ಸಂಬಂಧಿಸಿದ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**
**ಲಘು ಪ್ರಕಟಣೆ ಭಾಗ–2**
**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**
**ಮಂಗಳವಾರ, ದಿನಾಂಕ:16ನೇ ಜುಲೈ, 2024**

ಸಂಖ್ಯೆ: 37–ಎ

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ಅಂತಿಮ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ 'ವಿಶೇಷ ಸದನ ಸಮಿತಿ'ಯ ಅವಧಿಯನ್ನು ದಿನಾಂಕ: 22.04.2024 ರಿಂದ ಆರು ತಿಂಗಳವರೆಗೆ ವಿಸ್ತರಿಸಲಾಗಿದೆಯೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
**ವಿಧಾನ ಪರಿಷತ್ತು**

**ಗೆ:**

**ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.**

**www.kla.kar.nic.in/council.htm**

## 3. 2023–24ನೇ ಸಾಲಿನ ವಿವಿಧ ಸ್ಥಾಯಿ ಸಮಿತಿಗಳನ್ನು ಮುಂದುವರೆಸುವ ಬಗ್ಗೆ ಲಘು ಪ್ರಕಟಣೆ (ವಿಧಾನ ಪರಿಷತ್ತು)

**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ –2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**
**ಮಂಗಳವಾರ, ದಿನಾಂಕ:**
**30ನೇ ಜುಲೈ, 2024**

**ಸಂಖ್ಯೆ:39**

2023–24ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ನೇಮಕ ಮಾಡಲಾಗಿದ್ದ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳನ್ನು 2024–25ನೇ ಸಾಲಿನ ಸಮಿತಿಗಳನ್ನು ಪುನರ್‌ರಚಿಸುವವರೆಗೆ ಮುಂದುವರೆಸಲಾಗಿದೆ ಎಂಬ ವಿಷಯವನ್ನುಎಲ್ಲಾ ಮಾನ್ಯ ಶಾಸಕರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
**ವಿಧಾನ ಪರಿಷತ್ತು**

**ಗೆ:**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.**

**www.kla.kar.nic.in/council.htm**

## 4. ವಿಧಾನ ಪರಿಷತ್ತಿನ ನಿಯಮಾವಳಿಗಳ ಸಮಿತಿ ರಚನೆ  ಬಗೆಗಿನ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**

ಲಘು ಪ್ರಕಟಣೆ ಭಾಗ – 2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಬುಧವಾರ, ದಿನಾಂಕ:07ನೇ ಆಗಸ್ಟ್, 2024**

**ಸಂಖ್ಯೆ:42**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 347ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಿದ್ದುಪಡಿತರಲು **ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಶಾಸಕರನ್ನೊಳಗೊಂಡಂತೆ ವಿಧಾನ ಪರಿಷತ್ತಿನ ನಿಯಮಾವಳಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ ಎಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಶ್ರೀಮತಿ/ಶ್ರೀಯುರತುಗಳಾದ**

| | | |
|---|---|---|
| 1. | ಶ್ರೀ ಎಂ.ಕೆ. ಪ್ರಾಣೇಶ್ | ಮಾನ್ಯ ಉಪ ಸಭಾಪತಿಯವರು ಹಾಗೂ ಸಮಿತಿಸದಸ್ಯರು |
| 2. | ಅಡಗೂರು ಹೆಚ್ ವಿಶ್ವನಾಥ್ | ಸದಸ್ಯರು |
| 3. | ಬಿ.ಕೆ. ಹರಿಪ್ರಸಾದ್ | ಸದಸ್ಯರು |
| 4. | ಭಾರತಿಶೆಟ್ಟಿ | ಸದಸ್ಯರು |
| 5. | ಎಸ್.ವಿ. ಸಂಕನೂರ | ಸದಸ್ಯರು |
| 6. | ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 7. | ಕೆ.ಎಸ್. ನವೀನ್ | ಸದಸ್ಯರು |
| 8. | ಮಂಜುನಾಥ್ ಭಂಡಾರಿ | ಸದಸ್ಯರು |

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
**ವಿಧಾನ ಪರಿಷತ್ತು**

ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council.htm

## 5. 2024–25 ನೇ ಸಾಲಿನ ವಿಧಾನಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನಕ್ಕೆ ಸಂಬಂಧಿಸಿದ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ –2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶುಕ್ರವಾರ, ದಿನಾಂಕ: 30ನೇ ಆಗಸ್ಟ್, 2024**

**ಸಂಖ್ಯೆ:46**

### 2024–25ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನ

### ಅ) ಜಂಟಿ ಸಮಿತಿಗಳು

### 1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಬಿ.ಕೆ. ಹರಿಪ್ರಸಾದ್ |
| 2. | ಶಶೀಲ್ ಜಿ. ನಮೋಶಿ |
| 3. | ಸಿ.ಟಿ. ರವಿ |
| 4. | ಎಸ್. ರವಿ |
| 5. | ಎಸ್.ಎಲ್. ಭೋಜೇಗೌಡ |

### 2. ಅಧೀನ ಶಾಸನ ರಚನಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಡಾ: ಎಂ.ಆರ್. ಸೀತಾರಾಂ |
| 2. | ಎನ್. ರವಿಕುಮಾರ್ |
| 3. | ಕೆ.ಎ. ತಿಪ್ಪೇಸ್ವಾಮಿ |
| 4. | ಗಣಪತಿ ದುಮ್ಮಾ ಉಳ್ವೇಕರ್ |
| 5. | ಎ. ವಸಂತ ಕುಮಾರ್ |

## 3. ಸಾರ್ವಜನಿಕ ಉದ್ಯಮಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಉಮಾಶ್ರೀ |
| 2. | ಭಾರತಿ ಶೆಟ್ಟಿ |
| 3. | ಬಿ.ಜಿ. ಪಾಟೀಲ್ |
| 4. | ಐವನ್ ಡಿ'ಸೋಜಾ |
| 5. | ಟಿ.ಎನ್. ಜವರಾಯಿ ಗೌಡ |

## 4. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಎನ್. ರವಿಕುಮಾರ್ |
| 2. | ಡಾ: ಡಿ. ತಿಮ್ಮಯ್ಯ |
| 3. | ರಾಜೇಂದ್ರ ರಾಜಣ್ಣ |
| 4. | ಸಿ.ಎನ್. ಮಂಜೇಗೌಡ |
| 5. | ಹೇಮಲತಾ ನಾಯಕ್ |

## 5. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಕೆ. ಅಬ್ದುಲ್ ಜಬ್ಬರ್ |
| 2. | ಚಿದಾನಂದ್ ಎಂ. ಗೌಡ |
| 3. | ಡಾ: ಧನಂಜಯ ಸರ್ಜಿ |
| 4. | ಬಲ್ಕೀಸ್ ಬಾನು |
| 5. | ಟಿ.ಎನ್. ಜವರಾಯಿ ಗೌಡ |

## 6. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಅಡಗೂರ್ ಹೆಚ್. ವಿಶ್ವನಾಥ್ |
| 2. | ಸಿ.ಪಿ. ಯೋಗೇಶ್ವರ್ |
| 3. | ಲಖನ್ ಲಕ್ಷ್ಮಣರಾವ್ ಜಾರಕಿಹೊಳಿ |
| 4. | ಹೆಚ್.ಪಿ. ಸುಧಾಮ್ ದಾಸ್ |
| 5. | ಬಸನಗೌಡ ಬಾದರ್ಲಿ |

## 7. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಮತಿ/ಶ್ರೀಯುತರುಗಳಾದ: |
|---|---|
| 1. | ಡಾ: ಚಂದ್ರಶೇಖರ ಬಸವರಾಜ ಪಾಟೀಲ |
| 2. | ಶಾಂತಾರಾಮ್ ಬುಡ್ನ ಸಿದ್ದಿ |
| 3. | ವೈ.ಎಂ. ಸತೀಶ್ |
| 4. | ಶರಣಗೌಡ ಬಯ್ಯಾಪುರ |
| 5. | ಕೆ. ವಿವೇಕಾನಂದ |

## 8. ಗ್ರಂಥಾಲಯ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಎನ್. ನಾಗರಾಜು(ಎಂ.ಟಿ.ಬಿ) |
| 2. | ಯು.ಬಿ. ವೆಂಕಟೇಶ್ |
| 3. | ಸೂರಜ್ ರೇವಣ್ಣ |

## 9. ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಪ್ರದೀಪ್ ಶೆಟ್ಟರ್ |
| 2. | ಗೋವಿಂದ ರಾಜು |
| 3. | ಹೆಚ್.ಎಸ್. ಗೋಪಿನಾಥ್ |
| 4. | ಭೀಮರಾವ್ ಬಸವರಾಜ ಪಾಟೀಲ್ |
| 5. | ಚನ್ನರಾಜ್ ಬಸವರಾಜ್ ಹಟ್ಟಿಹೊಳಿ |

## ಆ) ವಿಧಾನ ಪರಿಷತ್ತಿನ ಸಮಿತಿಗಳು

## 1. ಹಕ್ಕುಬಾಧ್ಯತಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಮತಿ/ಶ್ರೀಯುತರುಗಳಾದ: |
|---|---|
| 1. | ಪಿ.ಹೆಚ್. ಪೂಜಾರ್ |
| 2. | ಕೆ.ಎ. ತಿಪ್ಪೇಸ್ವಾಮಿ |
| 3. | ಡಾ: ಎಂ.ಜಿ. ಮುಳೆ |
| 4. | ಡಾ: ತಳವಾರ್ ಸಾಬಣ್ಣ |
| 5. | ಎಂ. ನಾಗರಾಜು |
| 6. | ಕೇಶವ ಪ್ರಸಾದ್ ಎಸ್ |
| 7. | ಜಗದೇವ್ ಗುತ್ತೇದಾರ್ |
| 8. | ರಾಮೋಜಿಗೌಡ |
| 9. | ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 194(4) ರ ಮೇರೆಗೆ ಮಾನ್ಯ ಸಭಾಪತಿಯವರು **ಶ್ರೀ ಎಂ. ನಾಗರಾಜು** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 2. ಸರ್ಕಾರಿ ಭರವಸೆಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಪ್ರಕಾಶ್ ಕೆ. ರಾಥೋಡ್ |
| 2. | ಶರವಣಟಿ.ಎ. |
| 3. | ನಿರಾಣಿ ಹಣಮಂತ್ ರುದ್ರಪ್ಪ |
| 4. | ಯು.ಬಿ. ವೆಂಕಟೇಶ್ |
| 5. | ಪ್ರತಾಪ್ ಸಿಂಹ ನಾಯಕ್ ಕೆ. |
| 6. | ಡಿ.ಎಸ್. ಅರುಣ್ |
| 7. | ಕೆ.ಎಸ್. ನವೀನ್ |
| 8. | ಮಂಜುನಾಥ್ ಭಂಡಾರಿ |
| 9. | ತಿಪ್ಪಣ್ಣಪ್ಪ ಕಮಕನೂರ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 194(4) ರ ಮೇರೆಗೆ ಮಾನ್ಯ ಸಭಾಪತಿಯವರು **ಶ್ರೀ ಟಿ.ಎ. ಶರವಣ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 3. ಅರ್ಜಿಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಪುಟ್ಟಣ್ಣ |
| 2. | ಸುನೀಲ್ ವಲ್ಯಾಪುರ್ |
| 3. | ಎಸ್.ವ್ಹಿ. ಸಂಕನೂರ |
| 4. | ಮಧು ಜಿ. ಮಾದೇಗೌಡ |
| 5. | ಕುಶಾಲಪ್ಪ ಎಂ.ಪಿ. (ಸುಜಾ) |
| 6. | ದಿನೇಶ್ ಗೂಳಿಗೌಡ |
| 7. | ಎಂ.ಎಲ್. ಅನಿಲ್ ಕುಮಾರ್ |
| 8. | ಸೂರಜ್ ರೇವಣ್ಣ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ **243(1)ರ** ಮೇರೆಗೆ **ಶ್ರೀಪ್ರಾಣೇಶ್ ಎಂ.ಕೆ** ಮಾನ್ಯ ಉಪ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 4. ವಸತಿ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಬಿ.ಜಿ. ಪಾಟೀಲ್ |
| 2. | ಶರವಣ ಟಿ.ಎ. |
| 3. | ಸುನೀಲ್‌ಗೌಡ ಪಾಟೀಲ್ |
| 4. | ಡಾ: ಯತೀಂದ್ರ ಎಸ್ |
| 5. | ಡಿ.ಎಸ್. ಅರುಣ್ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ **349(2)**ರ ಮೇರೆಗೆ **ಶ್ರೀಪ್ರಾಣೇಶ್ ಎಂ.ಕೆ** ಮಾನ್ಯ ಉಪ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ

## 5. ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಯುತರುಗಳಾದ: |
|---|---|
| 1. | ಸಿ.ಟಿ. ರವಿ |
| 2. | ಎಸ್.ವ್ಹಿ. ಸಂಕನೂರ |
| 3. | ಕೆ. ಅಬ್ದುಲ್ ಜಬ್ಬರ್ |
| 4. | ಡಾ: ಚಂದ್ರಶೇಖರ ಬಸವರಾಜ ಪಾಟೀಲ |
| 5. | ಎಸ್.ಎಲ್. ಭೋಜೇಗೌಡ |
| 6. | ಐವನ್ ಡಿ'ಸೋಜಾ |
| 7. | ಡಾ: ಯತೀಂದ್ರ ಎಸ್ |
| 8. | ಪ್ರತಾಪ್ ಸಿಂಹ ನಾಯಕ್ ಕೆ. |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ **261(1)**ರ ಮೇರೆಗೆ **ಶ್ರೀಪ್ರಾಣೇಶ್ ಎಂ.ಕೆ** ಮಾನ್ಯ ಉಪ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 6. ನೀತಿ ನಿರೂಪಣಾ ಸಮಿತಿ

| ಕ್ರ.ಸಂ | ಸದಸ್ಯರ ಹೆಸರು<br>ಶ್ರೀಮತಿ/ಶ್ರೀಯುತರುಗಳಾದ: |
|---|---|
| 1. | ಬಿ.ಕೆ. ಹರಿಪ್ರಸಾದ್ |
| 2. | ಸಿ.ಟಿ. ರವಿ |
| 3. | ಡಾ: ಎಂ.ಆರ್. ಸೀತಾರಾಂ |
| 4. | ಎಸ್. ರವಿ |
| 5. | ಗೋವಿಂದ ರಾಜು |
| 6. | ಕೇಶವ ಪ್ರಸಾದ್ ಎಸ್ |

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ **242(ಸಿ)(1)(ಬಿ)ರ** ಮೇರೆಗೆ ಶ್ರೀ **ಪ್ರಾಣೇಶ್ ಎಂ.ಕೆ** ಮಾನ್ಯ ಉಪ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
**ವಿಧಾನ ಪರಿಷತ್ತು**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ**

**www://kla.kar.nic.in/council/council.htm**

## 6. ಹದಿನಾರನೇ ವಿಧಾನಸಭೆಯ ನಾಲ್ಕನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾರನೇ ವಿಧಾನಸಭೆಯ ನಾಲ್ಕನೇ ಅಧಿವೇಶನವು ದಿನಾಂಕ 15ನೇ ಜುಲೈ, 2024 ರಿಂದ 25ನೇ ಜುಲೈ, 2024 ರವರೆಗೆ ಒಟ್ಟು 08 ದಿನಗಳ ಕಾಲ ಸುಮಾರು 36 ಗಂಟೆ 51 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ಮಾನ್ಯ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- 2024–25ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ದಿನಾಂಕ:23.07.2024 ರಂದು ಮಂಡಿಸಿ, ದಿನಾಂಕ:24.07.2024 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.
- ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲೆ ನೀಡಿರುವ ಲೆಕ್ಕಪರಿಶೋಧನಾ ವರದಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯ ನಿರ್ವಾಹಣಾ ಲೆಕ್ಕಪರಿಶೋಧನಾ ವರದಿ ಹಾಗೂ ಮಾರ್ಚ್ 2022ಕ್ಕೆ ಕೊನೆಗೊಂಡ ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಅನುಸರಣಾ ಲೆಕ್ಕಪರಿಶೋಧನಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 2023–24ನೇ ಸಾಲಿನ ಎರಡನೇ ವರದಿ, ಕರ್ನಾಟಕ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 2023–24ನೇ ಸಾಲಿನ ಮೂವತ್ತೊಂಭತ್ತನೇ ವರದಿ, ಕರ್ನಾಟಕ ವಿಧಾನಸಭೆಯ ಅಂದಾಜುಗಳ ಸಮಿತಿಯ 2023–24ನೇ ಸಾಲಿನ ಮೊದಲನೇ ವರದಿ, ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2023–24ನೇ ಸಾಲಿನ ಮೂರನೇ ವರದಿ, ಹಾಗೂ 2023–24ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೂರನೇ ವರದಿ, ಹಾಗೂ ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ 2023–24ನೇ ಸಾಲಿನ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- ಕರ್ನಾಟಕ ವಿಧಾನಸಭೆಯ ನಿಯಮಾವಳಿ ಸಮಿತಿಯು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 212(1)ಕ್ಕೆ ತಿದ್ದುಪಡಿ ಮಾಡುವ ಸಂಬಂಧ ನಿಯಮಾವಳಿ ಸಮಿತಿಯ ಮಧ್ಯಂತರ ವರದಿಯನ್ನು ದಿನಾಂಕ:24.07.2024 ರಂದು ಸದನದಲ್ಲಿ ಮಂಡಿಸಲಾಗಿದ್ದು, ಸದನವು ತಿದ್ದುಪಡಿಯನ್ನು ಅಂಗೀಕರಿಸಿರುತ್ತದೆ.

- 2024–25ನೇ ಸಾಲಿನ ವಿಧಾನಮಂಡಲದ/ ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ದಿನಾಂಕ:25.07.2024 ರಂದು ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿರುತ್ತದೆ.

- ಒಟ್ಟು 23 ಅಧಿಸೂಚನೆಗಳು ಮತ್ತು 146 ವಾರ್ಷಿಕ ವರದಿಗಳು, 160 ಲೆಕ್ಕ ಪರಿಶೋಧನಾ ವರದಿಗಳು, 05 ಅನುಪಾಲನಾ ವರದಿಗಳು, 04 ಅನುಸರಣಾ ವರದಿ ಹಾಗೂ 01 ಲೆಕ್ಕ ತಪಾಸಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 13 ವಿಧೇಯಕಗಳನ್ನು ಮಂಡಿಸಲಾಗಿದ್ದು, 12 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ಉಳಿದಂತೆ 2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಲು ತೀರ್ಮಾನಿಸಲಾಯಿತು. ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ ಮತ್ತು ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

- ನಿಯಮ 60 ರಡಿಯಲ್ಲಿ ನೀಡಿದ್ದ 09 ಸೂಚನೆಗಳ ಪೈಕಿ 08ನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, 01 ಸೂಚನೆಯನ್ನು ತಿರಸ್ಕರಿಸಲಾಗಿದೆ, ಎರಡು ಸೂಚನೆಗಳನ್ನು ಚರ್ಚಿಸಲಾಗಿದೆ.

- ನಿಯಮ 69 ರಡಿಯಲ್ಲಿ ಒಟ್ಟು 14 ಸೂಚನೆಗಳನ್ನು ಸ್ವೀಕರಿಸಲಾಗಿದೆ.

- ಈ ಅವಧಿಯಲ್ಲಿ ಒಟ್ಟು 16 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

- ಒಟ್ಟು 2370 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 117 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 1902 ಪ್ರಶ್ನೆಗಳ ಪೈಕಿ 1438 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ನಿಯಮ 351 ರಡಿಯಲ್ಲಿ ಸ್ವೀಕೃತವಾದ 154 ಸೂಚನೆಗಳ ಪೈಕಿ 72 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಗಮನ ಸೆಳೆಯುವ 323 ಸೂಚನೆಗಳ ಪೈಕಿ 170 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಶೂನ್ಯ ವೇಳೆಯಲ್ಲಿ 03+ ಸೂಚನೆಗಳನ್ನು ಚರ್ಚಿಸಲಾಗಿದೆ.

- ಈ ಕೆಳಕಂಡ ಅಧಿಕೃತ ನಿರ್ಣಯಗಳನ್ನು ದಿನಾಂಕ:25.07.2024ರಂದು ಸದನದಲ್ಲಿ ಮಂಡಿಸಲಾಗಿದ್ದು, ಸದನವು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

1. ರಾಜ್ಯಕ್ಕೆ ಹಂಚಿಕೆ ಮಾಡಬೇಕಾದ ಲೋಕಸಭೆ ಸ್ಥಾನಗಳ ಮತ್ತು ಪ್ರತಿ ರಾಜ್ಯದ ವಿಧಾನಸಭೆಗೆ ನಿಗದಿಪಡಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು 1971ರ ಜನಗಣತಿಯನ್ನಾಧರಿಸಿ ನಿರ್ಧರಿಸಬೇಕೆಂಬ ಬಗ್ಗೆ;

2. ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾವವು ಭಾರತದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಗೆ ಅಪಾಯವನ್ನುಂಟು ಮಾಡುವುದರಿಂದ ಈ ಪ್ರಸ್ತಾವವನ್ನು ಅನುಷ್ಠಾನಗೊಳಿಸಬಾರದೆಂಬ ಬಗ್ಗೆ;
3. ನೀಟ್ ಪರೀಕ್ಷಾ ವ್ಯವಸ್ಥೆಯಲ್ಲಿ ಆಗುತ್ತಿರುವ ಅಕ್ರಮಗಳನ್ನು ಪರಿಗಣಿಸಿ ರಾಷ್ಟ್ರೀಯ ಮಟ್ಟದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಪಡಿಸುವ ಬಗ್ಗೆ;
4. ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006ರರಡಿಯಲ್ಲಿ ಮಾಡಲಾದ ನಿಯಮಗಳನ್ನು ಸೂಕ್ತವಾಗಿ ಮತ್ತು ಸಮರ್ಪಕವಾಗಿ ಮಾರ್ಪಡಿಸುವ ಬಗ್ಗೆ.

*****

# 7. ಸಮಿತಿ ಸಭೆಗಳನ್ನು ನಡೆಸಲು ಅವಶ್ಯವಿರುವ ಗಣಪೂರ್ತಿ(Quorum) ಬಗೆಗಿನ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ 24ನೇ ಜುಲೈ, 2024**

**ಸಂಖ್ಯೆ: 103**

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 212(1)ಕ್ಕೆ ನಿಯಮಾವಳಿ ಸಮಿತಿಯ ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಈ ಕೆಳಕಂಡಂತೆ ತಿದ್ದುಪಡಿ ತರಲು ಸದನವು ದಿನಾಂಕ: 24.07.2024ರಂದು ಒಪ್ಪಿಗೆ ನೀಡಿರುತ್ತದೆ ಎಂದು ಈ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

**212. ಸಭೆಯು ನಡೆಯಲು ಕನಿಷ್ಠ ಪಕ್ಷ ಹಾಜರಾಗಬೇಕಾದ ಸದಸ್ಯರ ಸಂಖ್ಯೆ (ಗಣಪೂರ್ತಿ):** ಅನ್ಯಥಾ ಉಪಬಂಧಿಸಿದ್ದ ಹೊರತು ಸಮಿತಿಯ ಉಪವೇಶನ ನಡೆಯಲು ಕನಿಷ್ಠಪಕ್ಷ ಹಾಜರಿರಬೇಕಾದ ಸದಸ್ಯರ ಸಂಖ್ಯೆ 3 ಆಗಿರತಕ್ಕದ್ದು ಮತ್ತು ಸಮಿತಿಯು ವರದಿಯನ್ನು ಪರಿಶೀಲನೆ ನಡೆಸುವ ಸಭೆಯಲ್ಲಿ ಮಾತ್ರ ಕನಿಷ್ಠಪಕ್ಷ ಹಾಜರಿರಬೇಕಾದ ಸದಸ್ಯರ ಸಂಖ್ಯೆ, ಆದಷ್ಟು ಮಟ್ಟಿಗೆ, ಸಮಿತಿಯ ಸದಸ್ಯರ ಸಂಖ್ಯೆಯ ಸರಿ ಸುಮಾರು ಮೂರನೆಯ ಒಂದು ಭಾಗವಾಗಿರಬೇಕು.

**Quorum:-**

212. (1) Except where otherwise provided, the Quorum to constitute a sitting of the Committee shall be atleast 3 Members and at the time of examination of the report of the Committee, the Quorum shall be, as near as may be, one-third of the total number of Members of the Committee.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

## 8. 2023–24ನೇ ಸಾಲಿನ ವಿವಿಧ ಸ್ಥಾಯಿ ಸಮಿತಿಗಳನ್ನು ಮುಂದುವರೆಸುವ ಬಗ್ಗೆ ಲಘು ಪ್ರಕಟಣೆ (ವಿಧಾನಸಭೆ)

# ಕರ್ನಾಟಕ ವಿಧಾನಸಭೆ

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ 02ನೇ ಆಗಸ್ಟ್, 2024**

**ಸಂಖ್ಯೆ: 105**

2023–24ನೇ ಸಾಲಿನ ಕರ್ನಾಟಕ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ನೇಮಕ ಮಾಡಲಾಗಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು 2024–25ನೇ ಸಾಲಿಗೆ ಸ್ಥಾಯಿ ಸಮಿತಿಗಳನ್ನು ಪುನರ್ ರಚಿಸುವವರೆಗೆ ಮುಂದುವರೆಸಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

## 9. ಜಂಟಿ ಪರಿಶೀಲನಾ ಸಮಿತಿ ರಚನೆ ಬಗ್ಗೆ ಲಘು ಪ್ರಕಟಣೆ

# ಕರ್ನಾಟಕ ವಿಧಾನಸಭೆ

## (ಹದಿನಾರನೇ ವಿಧಾನಸಭೆ)

## ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 22ನೇ ಆಗಸ್ಟ್, 2024**

## ಸಂಖ್ಯೆ: 107

2024ನೇ ಸಾಲಿನ **ದಿ ಗ್ರೇಟರ್ ಬೆಂಗಳೂರು** ಆಡಳಿತ ವಿಧೇಯಕವನ್ನು 16ನೇ ವಿಧಾನಸಭೆಯ 4ನೇ ಅಧಿವೇಶನದಲ್ಲಿ ದಿನಾಂಕ:25.07.2024ರಂದು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಲ್ಪಟ್ಟ ಸಂದರ್ಭದಲ್ಲಿ ಅನೇಕ ಸದಸ್ಯರುಗಳ ಕೋರಿಕೆ ಮೇರೆಗೆ ಸದರಿ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ ವರದಿಯನ್ನು ನೀಡಲು ಜಂಟಿ ಪರಿಶೀಲನಾ ಸಮಿತಿಗೆ ವಹಿಸಲಾಗಿರುತ್ತದೆ. ಸದನದ ನಿರ್ಣಯದಂತೆ 2024ನೇ ಸಾಲಿನ ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ನೀಡಲು ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರ ಸಹಮತಿಯೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 255ರ ಮೇರೆಗೆ ಈ ಕೆಳಕಂಡ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಜಂಟಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

| ಕ್ರ.ಸಂ. | **ವಿಧಾನಸಭಾ ಸದಸ್ಯರ ಹೆಸರು** |
|---|---|
| **1** | ರಿಜ್ವಾನ್ ಅರ್ಷದ್ |
| **2** | ಎನ್.ಎ. ಹ್ಯಾರಿಸ್ |
| **3** | ಬಿ. ಶಿವಣ್ಣ |
| **4** | ಎಸ್.ಟಿ. ಸೋಮಶೇಖರ್ |
| **5** | ಪ್ರಿಯಕೃಷ್ಣ |
| **6** | ಎಸ್. ರಘು |
| **7** | ಜಿ.ಟಿ. ದೇವೇಗೌಡ |

| ವಿಧಾನ ಪರಿಷತ್ ಸದಸ್ಯರು | |
|---|---|
| 1 | ಪುಟ್ಟಣ್ಣ |
| 2 | ಯು.ಬಿ. ವೆಂಕಟೇಶ |
| 3 | ಹೆಚ್.ಎಸ್. ಗೋಪಿನಾಥ್ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 255(2)ರ ಮೇರೆಗೆ ಈ ಕೆಳಕಂಡ ಸಚಿವರುಗಳು ಸಮಿತಿಯ ಸದಸ್ಯರಾಗಿ ನಾಮ ನಿರ್ದೇಶನಗೊಂಡಿರುತ್ತಾರೆ.

1. ವಿಧೇಯಕಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವರು ಅಂದರೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು.
2. ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 260ರ ಪ್ರಕಾರ ಜಂಟಿ ಪರಿಶೀಲನಾ ಸಮಿತಿಯು ತನ್ನ ಅಧ್ಯಕ್ಷನನ್ನು ತಾನೇ ಚುನಾಯಿಸತಕ್ಕದ್ದು.

ಸಮಿತಿಯು ವರದಿಯನ್ನು ನೀಡಲು ಮೂರು ತಿಂಗಳ ಕಾಲಾವಧಿಯನ್ನು ನಿಗದಿಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

**10. ಜಂಟಿ ಪರಿಶೀಲನಾ ಸಮಿತಿಗೆ ಸದಸ್ಯರ ನೇಮಕ.**

# ಕರ್ನಾಟಕ ವಿಧಾನಸಭೆ

**(ಹದಿನಾರನೇ ವಿಧಾನಸಭೆ)**

## ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 27ನೇ ಆಗಸ್ಟ್, 2024**

**ಸಂಖ್ಯೆ: 108**

ದಿನಾಂಕ 22ನೇ ಆಗಸ್ಟ್, 2024 ರಂದು ಹೊರಡಿಸಲಾಗಿರುವ ಲಘು ಪ್ರಕಟಣೆ ಸಂಖ್ಯೆ:107 ಅನ್ನು ಮುಂದುವರೆಸುತ್ತಾ, 2024ನೇ ಸಾಲಿನ ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ, ವರದಿಯನ್ನು ನೀಡಲು ರಚಿಸಲಾಗಿರುವ ಜಂಟಿ ಪರಿಶೀಲನಾ ಸಮಿತಿಗೆ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರ ಸಹಮತಿಯೊಂದಿಗೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿ ಗೌಡ ಅವರನ್ನು ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನೇಮಿಸಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

## 11. 2024–25ನೇ ಸಾಲಿನ ವಿಧಾನ ಮಂಡಲದ ವಿವಿಧ ಸ್ಥಾಯಿ ಸಮಿತಿಗಳ ರಚನೆ

# ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ 27ನೇ ಸೆಪ್ಟೆಂಬರ್, 2024**

## ಸಂಖ್ಯೆ: 112

**2024–25ನೇ ಸಾಲಿನ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳ ರಚನೆ**

2024–25ನೇ ಸಾಲಿನ ಕರ್ನಾಟಕ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ಈ ಕೆಳಕಂಡ ಸದಸ್ಯರುಗಳು ನಾಮನಿರ್ದೇಶನ ಹೊಂದಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**(ಅ) ಜಂಟಿ ಸಮಿತಿಗಳು**

**1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ**

| ವಿಧಾನಸಭೆಯ ಸದಸ್ಯರು | | | |
|---|---|---|---|
| ಶ್ರೀಯುತರುಗಳಾದ : | | | |
| 1 | ಸಿ.ಸಿ. ಪಾಟೀಲ್ | 9 | ಲಕ್ಷ್ಮಣ ಸಂಗಪ್ಪ ಸವದಿ |
| 2 | ಆರ್.ವಿ. ದೇಶಪಾಂಡೆ | 10 | ಡಾ. ಸಿ.ಎನ್. ಅಶ್ವತ್ಥನಾರಾಯಣ |
| 3 | ಎನ್.ವೈ. ಗೋಪಾಲಕೃಷ್ಣ | 11 | ವಿ. ಸುನೀಲ್ ಕುಮಾರ್ |
| 4 | ತನ್ವೀರ್ ಸೇಠ್ | 12 | ಎಸ್.ಆರ್. ವಿಶ್ವನಾಥ್ |
| 5 | ಭರಮಗೌಡ (ರಾಜು) ಅಲಗೌಡ ಕಾಗೆ | 13 | ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ |
| 6 | ಹೆಚ್.ಸಿ. ಬಾಲಕೃಷ್ಣ | 14 | ಟಿ. ರಘುಮೂರ್ತಿ |

| | | | |
|---|---|---|---|
| 7 | ಎಸ್.ಆರ್. ಶ್ರೀನಿವಾಸ (ವಾಸು) | 15 | ಅಲ್ಲಮಪ್ರಭು ಪಾಟೀಲ |
| 8 | ಜಿ.ಟಿ. ದೇವೇಗೌಡ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1 | ಬಿ.ಕೆ. ಹರಿಪ್ರಸಾದ್ | 4 | ಎಸ್. ರವಿ |
| 2 | ಶಶೀಲ್ ಜಿ. ನಮೋಶಿ | 5 | ಎಸ್.ಎಲ್. ಭೋಜೇಗೌಡ |
| **3** | **ಸಿ.ಟಿ. ರವಿ** | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಸಿ.ಸಿ. ಪಾಟೀಲ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 2. ಸಾರ್ವಜನಿಕ ಉದ್ದಿಮೆಗಳ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| 1 | ಬಸವರಾಜ್ ನೀಲಪ್ಪ ಶಿವಣ್ಣನವರ್ | 9 | ಬಿ.ಕೆ. ಸಂಗಮೇಶ್ವರ |
| 2 | ಹೆಚ್.ವೈ. ಮೇಟಿ | 10 | ಕೆ.ಎಂ. ಶಿವಲಿಂಗೇಗೌಡ |
| 3 | ಆರಗ ಜ್ಞಾನೇಂದ್ರ | 11 | ಸುರೇಶ್ ಬಾಬು ಸಿ.ಬಿ. |
| 4 | ಬಿ.ಜಿ. ಗೋವಿಂದಪ್ಪ | 12 | ಕೆ. ಗೋಪಾಲಯ್ಯ |
| 5 | ಎನ್.ಎ. ಹ್ಯಾರೀಸ್ | 13 | ಬಿ.ಎ. ಬಸವರಾಜ |
| 6 | ಎಂ. ಕೃಷ್ಣಪ್ಪ (ವಿಜಯನಗರ) | 14 | ದಿನಕರ ಕೇಶವ ಶೆಟ್ಟಿ |
| 7 | ಎಂ.ವೈ. ಪಾಟೀಲ್ | 15 | ಜಿ. ಜನಾರ್ಧನ ರೆಡ್ಡಿ |
| 8 | ಸಿ. ಪುಟ್ಟರಂಗಶೆಟ್ಟಿ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1 | ಶ್ರೀಮತಿ ಉಮಾಶ್ರೀ | 4 | ಐವಾನ್ ಡಿ'ಸೋಜಾ |
| 2 | ಶ್ರೀಮತಿ ಭಾರತಿ ಶೆಟ್ಟಿ | 5 | ಟಿ.ಎನ್. ಜವರಾಯಿ ಗೌಡ |
| 3 | ಬಿ.ಜಿ. ಪಾಟೀಲ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 3. ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| 1 | ಪಿ.ಎಂ. ನರೇಂದ್ರ ಸ್ವಾಮಿ | 9 | ಬಸವರಾಜ್ ಮತ್ತಿಮುಡ |
| 2 | ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ | 10 | ನೇಮಿರಾಜ್ ನಾಯ್ಕ |
| 3 | ಡಾ. ಎಂ. ಚಂದ್ರಪ್ಪ | 11 | ಚನ್ನಾರೆಡ್ಡಿ ಪಾಟೀಲ್ ತುನ್ನೂರು |
| 4 | ದುರ್ಯೋದನ ಎಂ. ಐಹೊಳೆ | 12 | ಬಿ. ದೇವೇಂದ್ರಪ್ಪ |
| 5 | ಜಿ. ಹಂಪಯ್ಯ ನಾಯಕ್ ಬಲ್ಲಟಗಿ | 13 | ಕೆ.ಸಿ. ವೀರೇಂದ್ರ ಪಪ್ಪಿ |
| 6 | ಎಸ್.ಎನ್. ಸುಬ್ಬಾರೆಡ್ಡಿ (ಚಿನ್ನಕಾಯಲಪಲ್ಲಿ) | 14 | ಕೃಷ್ಣಾ ನಾಯ್ಕ ಕೆ. |
| 7 | ಬಸನಗೌಡ ತುರುವಿಹಾಳ್ | 15 | ಕೆ.ಎಸ್. ಬಸವಂತಪ್ಪ |
| 8 | ಜಿ.ಹೆಚ್. ಶ್ರೀನಿವಾಸ್ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| **1** | ಎನ್. ರವಿಕುಮಾರ್ | 4 | ಸಿ.ಎನ್. ಮಂಜೇಗೌಡ |
| **2** | ಡಾ. ಡಿ. ತಿಮ್ಮಯ್ಯ | 5 | ಶ್ರೀಮತಿ ಹೇಮಲತಾ ನಾಯಕ್ |
| **3** | ರಾಜೇಂದ್ರ ರಾಜಣ್ಣ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಪಿ.ಎಂ. ನರೇಂದ್ರ ಸ್ವಾಮಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 4. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| 1 | ಎ.ಆರ್. ಕೃಷ್ಣಮೂರ್ತಿ | 9 | ಆಸಿಫ್ (ರಾಜು) ಸೇಠ್ |
| 2 | ಡಾ. ಅಜಯ್ ಸಿಂಗ್ | 10 | ಹೆಚ್.ವಿ. ವೆಂಕಟೇಶ್ |
| 3 | ಗೋಪಾಲಕೃಷ್ಣ ಬೇಳೂರು | 11 | ಗುರುರಾಜ್ ಶೆಟ್ಟಿ ಗಂಟಿಹೊಳಿ |
| 4 | ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. | 12 | ಚನ್ನಬಸಪ್ಪ (ಚನ್ನಿ) |
| 5 | ಅಬ್ಬಯ್ಯ ಪ್ರಸಾದ್ | 13 | ಸಿದ್ದು ಪಾಟೀಲ |
| 6 | ಎ.ಬಿ. ರಮೇಶ್ ಬಂಡಿಸಿದ್ದೇಗೌಡ | 14 | ನಿಖಿಲ್ ಉಮೇಶ್ ಕತ್ತಿ |
| 7 | ಹೆಚ್.ಆರ್. ಗವಿಯಪ್ಪ | 15 | ಎಂ.ಆರ್. ಮಂಜುನಾಥ್ |
| 8 | ಶರಣು ಸಲಗರ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |

| | | | |
|---|---|---|---|
| 1 | ಕೆ. ಅಬ್ದುಲ್ ಜಬ್ಬರ್ | 4 | ಶ್ರೀಮತಿ ಬಲ್ಕೀಸ್ ಬಾನು |
| 2 | ಚಿದಾನಂದ್ ಎಂ. ಗೌಡ | 5 | ಟಿ.ಎನ್. ಜವರಾಯಿ ಗೌಡ |
| 3 | ಡಾ. ಧನಂಜಯ ಸರ್ಜಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಎ.ಆರ್. ಕೃಷ್ಣಮೂರ್ತಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 5. ಅಧೀನ ಶಾಸನ ರಚನಾ ಸಮಿತಿ

| | | | |
|---|---|---|---|
| **ವಿಧಾನಸಭೆಯ ಸದಸ್ಯರು** | | | |
| **ಶ್ರೀಯುತರುಗಳಾದ :** | | | |
| 1 | ಬಿ. ಶಿವಣ್ಣ | 9 | ರಾಜಾ ವೇಣುಗೋಪಾಲ್ ನಾಯಕ್ |
| 2 | ಎಸ್. ರಘು | 10 | ಟಿ.ಹೆಚ್. ಶ್ರೀವತ್ಸ |
| 3 | ಎಂ. ಕೃಷ್ಣಪ್ಪ (ಬೆಂಗಳೂರು ದಕ್ಷಿಣ) | 11 | ಎ. ಕಿರಣಕುಮಾರ ಕೊಡ್ಗಿ |
| 4 | ಡಿ.ಜಿ. ಶಾಂತನಗೌಡ | 12 | ಸಿ.ಕೆ. ರಾಮಮೂರ್ತಿ |
| 5 | ಕೆ. ಹರೀಶ್ ಗೌಡ | 13 | ವಿಠ್ಠಲ ಸೋಮಣ್ಣ ಹಲಗೇಕರ |
| 6 | ಪ್ರಕಾಶ್ ಕೋಳಿವಾಡ | 14 | ಜಿ.ಟಿ. ಹರೀಶ್ ಗೌಡ |
| 7 | ಡಾ. ಎನ್.ಟಿ. ಶ್ರೀನಿವಾಸ | 15 | ಸಮೃದ್ಧಿ ವಿ. ಮಂಜುನಾಥ್ |
| 8 | ಉದಯ್ ಕೆ.ಎಂ. | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1 | ಎಂ.ಆರ್.ಸೀತಾರಾಮ್ | 4 | ಗಣಪತಿ ದುಮ್ಮಾ ಉಳ್ವೇಕರ್ |
| 2 | ಎನ್. ರವಿಕುಮಾರ್ | 5 | ಎ. ವಸಂತ ಕುಮಾರ್ |
| 3 | ಕೆ.ಎ. ತಿಪ್ಪೇಸ್ವಾಮಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು **ಶ್ರೀ ಬಿ. ಶಿವಣ್ಣ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| ಶ್ರೀಯುತರುಗಳಾದ : | | | |
| 1 | ಹೆಚ್.ಡಿ. ರೇವಣ್ಣ | 9 | ಬಸವರಾಜು ವಿ. ಶಿವಗಂಗಾ |
| 2 | ಕೆ.ಎಂ. ಶಿವಲಿಂಗೇಗೌಡ | 10 | ವಿಶ್ವಾಸ್ ವಸಂತ್ ವೈದ್ಯ |
| 3 | ಮುನಿರತ್ನ | 11 | ಎಂ.ಆರ್. ಪಾಟೀಲ |
| 4 | ಜಿ.ಬಿ. ಜ್ಯೋತಿ ಗಣೇಶ್ | 12 | ಡಾ. ಶೈಲೇಂದ್ರ ಬೆಲ್ದಾಳೆ |
| 5 | ಹೆಚ್.ಎಂ. ಗಣೇಶ್ ಪ್ರಸಾದ್ | 13 | ಗುರ್ಮೆ ಸುರೇಶ್ ಶೆಟ್ಟಿ |
| 6 | ರವಿಕುಮಾರ್ ಗೌಡ ಗಣಿಗ | 14 | ಹೆಚ್.ಟಿ. ಮಂಜು |
| 7 | ಡಿ. ರವಿಶಂಕರ್ | 15 | ಕೆ.ಹೆಚ್. ಪುಟ್ಟಸ್ವಾಮಿ ಗೌಡ |
| 8 | ಬಾಬಾ ಸಾಹೇಬ್ ಪಾಟೀಲ್ | | |
| ವಿಧಾನ ಪರಿಷತ್ ಸದಸ್ಯರು | | | |
| 1 | ಅಡಗೂರು ಹೆಚ್ ವಿಶ್ವನಾಥ್ | 4 | ಹೆಚ್.ಪಿ. ಸುಧಾಮ್ ದಾಸ್ |
| 2 | ಸಿ.ಪಿ. ಯೋಗೇಶ್ವರ್ | 5 | ಬಸನಗೌಡ ಬಾದರ್ಲಿ |
| 3 | ಲಖನ್ ಲಕ್ಷ್ಮಣರಾವ್ ಜಾರಕಿಹೊಳಿ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಹೆಚ್.ಡಿ. ರೇವಣ್ಣ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 7. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| ಶ್ರೀಯುತರುಗಳಾದ : | | | |
| 1 | ಎನ್.ಹೆಚ್. ಕೋನರೆಡ್ಡಿ | 9 | ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ್ |
| 2 | ಉಮಾನಾಥ್ ಎ. ಕೋಟ್ಯಾನ್ | 10 | ಪ್ರದೀಪ್ ಈಶ್ವರ್ |
| 3 | ಡಾ. ವೈ. ಭರತ್ ಶೆಟ್ಟಿ | 11 | ಡಿ. ರವಿಶಂಕರ್ |
| 4 | ಉದಯ ಬಿ. ಗರುಡಾಚಾರ್ | 12 | ಹೆಚ್.ಕೆ. ಸುರೇಶ್ (ಹುಲ್ಲಳ್ಳಿ ಸುರೇಶ್) |
| 5 | ಹೆಚ್.ಎ. ಇಕ್ಬಾಲ್ ಹುಸೇನ್ | 13 | ಶ್ರೀಮತಿ ಮಂಜುಳಾ ಅರವಿಂದ ಲಂಬಾವಳಿ |
| 6 | ಅಶೋಕ್ ಮಲ್ಲಪ್ಪ ಮನಗೂಳಿ | 14 | ಶ್ರೀಮತಿ ಕರೆಮ್ಮ ನಾಯ್ಕ |
| 7 | ಕೊತ್ತೂರು ಜಿ. ಮಂಜುನಾಥ | | |
| 8 | ಶ್ರೀಮತಿ ನಯನ ಮೋಟಮ್ಮ | | |
| ವಿಧಾನ ಪರಿಷತ್ತಿನ ಸದಸ್ಯರು | | | |
| 1 | ಡಾ. ಚಂದ್ರಶೇಖರ ಬಸವರಾಜ ಪಾಟೀಲ | 4 | ಶರಣಗೌಡ ಬಯ್ಯಾಪುರ |
| 2 | ಶಾಂತಾರಾಮ್ ಬುಡ್ನ ಸಿದ್ದಿ | 5 | ಕೆ. ವಿವೇಕಾನಂದ |
| 3 | ವೈ.ಎಂ. ಸತೀಶ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಎನ್.ಹೆಚ್. ಕೋನರೆಡ್ಡಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 8. ಗ್ರಂಥಾಲಯ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| **ಶ್ರೀಯುತರುಗಳಾದ :** | | | |
| 1 | ಯು.ಬಿ. ಬಣಕಾರ್ | 4 | ಶ್ರೀಮತಿ ಶಾರದಾ ಪೂರ್ಯ ನಾಯ್ಕ |
| 2 | ಶರತ್ ಕುಮಾರ್ ಬಚ್ಚೇಗೌಡ | 5 | ಆನಂದ್ ಕೆ.ಎಸ್. |
| 3 | ಉದಯ ಬಿ. ಗರುಡಾಚಾರ್ | | |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1 | ಎನ್. ನಾಗರಾಜು (ಎಂ.ಟಿ.ಬಿ) | 3 | ಸೂರಜ್ ರೇವಣ್ಣ |
| 2 | ಯು.ಬಿ. ವೆಂಕಟೇಶ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 371 (2) ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಗ್ರಂಥಾಲಯ ಸಮಿತಿಯ ಸದಸ್ಯರಾಗಿದ್ದು, ನಿಯಮ 211(1) ರ ಮೇರೆಗೆ **ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು** ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 9. ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ

| ವಿಧಾನಸಭೆಯ ಸದಸ್ಯರು | | | |
|---|---|---|---|
| **ಶ್ರೀಯುತರುಗಳಾದ :** | | | |
| 1 | ರಿಜ್ವಾನ್ ಅರ್ಷದ್ | 8 | ವಿಜಯಾನಂದ ಕಾಶಪ್ಪನವರ |
| 2 | ಜಿ.ಕೆ. ವೆಂಕಟಶಿವಾರೆಡ್ಡಿ | 9 | ಮಾನೆ ಶ್ರೀನಿವಾಸ |
| 3 | ರವಿ ಸುಬ್ರಮಣ್ಯ | 10 | ಶ್ರೀಮತಿ ಎಂ. ರೂಪಕಲಾ |
| 4 | ಎಂ. ಸತೀಶ್ ರೆಡ್ಡಿ | 11 | ಬಿ.ಎಂ. ನಾಗರಾಜ |
| 5 | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ | 12 | ಹರೀಶ್ ಪೂಂಜಾ |
| 6 | ಗಣೇಶ್ ಪ್ರಕಾಶ್ ಹುಕ್ಕೇರಿ | 13 | ಅಶೋಕ್ ಕುಮಾರ್ ರೈ |
| 7 | ಅನಿಲ್ ಚಿಕ್ಕಮಾದು | 14 | ಶ್ರೀನಿವಾಸಯ್ಯ ಎನ್. |
| **ವಿಧಾನ ಪರಿಷತ್ತಿನ ಸದಸ್ಯರು** | | | |
| 1 | ಪ್ರದೀಪ್ ಶೆಟ್ಟರ್ | 4 | ಭೀಮಾರಾವ್ ಬಸವರಾಜ ಪಾಟೀಲ್ |
| 2 | ಗೋವಿಂದ ರಾಜು | 5 | ಚನ್ನರಾಜ್ ಬಸವರಾಜ್ ಹಟ್ಟಿಹೊಳಿ |
| 3 | ಹೆಚ್.ಎಸ್. ಗೋಪಿನಾಥ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ರಿಜ್ವಾನ್ ಅರ್ಷದ್** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

**ವಿಶೇಷ ಸೂಚನೆ:** ಕರ್ನಾಟಕ ವಿಧಾನಮಂಡಲದ ಜಂಟಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವತಿಯಿಂದ ಪ್ರತ್ಯೇಕವಾಗಿ ದಿನಾಂಕ:30.08.2024ರಂದು ಹೊರಡಿಸಲ್ಪಟ್ಟ ಲಘು ಪ್ರಕಟಣೆಯಂತೆ ಸಮಿತಿಯ ಸದಸ್ಯರಾಗಿರುತ್ತಾರೆ.

## (ಆ) ವಿಧಾನಸಭೆಯ ಸಮಿತಿಗಳು

### 1. ಅಂದಾಜುಗಳ ಸಮಿತಿ

**ಶ್ರೀಯುತರುಗಳಾದ :**

| | | | |
|---|---|---|---|
| 1 | ಹಂಪನಗೌಡ ಬಾದರ್ಲಿ | 10 | ಡಾ. ಶಿವರಾಜ್ ಪಾಟೀಲ್ |
| 2 | ಅಪ್ಪಾಜಿ ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ | 11 | ಬಿ. ಸುರೇಶ್ ಗೌಡ |
| 3 | ಕೌಜಲಗಿ ಮಹಾಂತೇಶ್ ಶಿವಾನಂದ | 12 | ಮಾನಪ್ಪ ಡಿ. ವಜ್ಜಲ್ |
| 4 | ಜೆ.ಟಿ. ಪಾಟೀಲ | 13 | ಬಸನಗೌಡ ದದ್ದಲ್ |
| 5 | ಗುರುಪಾದಗೌಡ ಸಂಗನಗೌಡ ಪಾಟೀಲ | 14 | ಜೆ.ಎನ್. ಗಣೇಶ್ |
| 6 | ಅಭಯ್ ಪಾಟೀಲ್ | 15 | ನಾರಾ ಭರತ್ ರೆಡ್ಡಿ |
| 7 | ಎಂ.ಟಿ. ಕೃಷ್ಣಪ್ಪ | 16 | ಬಿ.ವೈ. ವಿಜಯೇಂದ್ರ |
| 8 | ರಾಘವೇಂದ್ರ ಬಸವರಾಜ್ ಹಿಟ್ನಾಳ್ | 17 | ಶ್ರೀಮತಿ ಲತಾ ಮಲ್ಲಿಕಾರ್ಜುನ್ |
| 9 | ಕೆ. ಷಡಾಕ್ಷರಿ | 18 | ಬಿ.ಎನ್. ರವಿಕುಮಾರ್ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಹಂಪನಗೌಡ ಬಾದರ್ಲಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

### 2. ಸರ್ಕಾರಿ ಭರವಸೆಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| 1 | ಕೆ.ವೈ. ನಂಜೇಗೌಡ | 9 | ಶರತ್ ಕುಮಾರ್ ಬಚ್ಚೇಗೌಡ |
| 2 | ಶಾಮನೂರು ಶಿವಶಂಕರಪ್ಪ | 10 | ಬಿ.ಪಿ. ಹರೀಶ್ |
| 3 | ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ | 11 | ಯು. ರಾಜೇಶ್ ನಾಯ್ಕ್ |
| 4 | ಪ್ರಭು ಬಿ. ಚವ್ಹಾಣ್ | 12 | ಬಿ.ಬಿ. ಚಿಮ್ಮನಕಟ್ಟಿ |
| 5 | ಸಿದ್ದು ಸವದಿ | 13 | ದರ್ಶನ್ ಧ್ರುವನಾರಾಯಣ |
| 6 | ವಿನಯ್ ಕುಲಕರ್ಣಿ | 14 | ಜಗದೀಶ ಶಿವಯ್ಯ ಗುಡಗಂಟಿ |
| 7 | ಟಿ.ಡಿ. ರಾಜೇಗೌಡ | 15 | ಶರಣಗೌಡ ಕಂದಕೂರ |
| 8 | ಸತೀಶ್ ಕೃಷ್ಣ ಸೈಲ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಕೆ.ವೈ. ನಂಜೇಗೌಡ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 3. ಹಕ್ಕುಬಾಧ್ಯತೆಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| 1 | ಕೌಜಲಗಿ ಶಿವಾನಂದ ಮಹಾಂತೇಶ | 7 | ಬಸನಗೌಡ ಆರ್. ಪಾಟೀಲ್ (ಯತ್ನಾಳ್) |
| 2 | ಡಿ.ಜಿ. ಶಾಂತನಗೌಡ | 8 | ಡಿ. ವೇದವ್ಯಾಸ ಕಾಮತ್ |
| 3 | ಬಸವರಾಜ ನೀಲಪ್ಪ ಶಿವಣ್ಣನವರ | 9 | ಶ್ರೀಮತಿ ಶಾರದಾ ಪೂರ್ಯ ನಾಯ್ಕ |
| 4 | ಎ.ಆರ್. ಕೃಷ್ಣಮೂರ್ತಿ | 10 | ಭೀಮಣ್ಣ ಟಿ. ನಾಯ್ಕ |
| 5 | ಎ.ಬಿ. ರಮೇಶ್ ಬಂಡಿಸಿದ್ದೇಗೌಡ | 11 | ಯಶ್‌ಪಾಲ್ ಎ. ಸುವರ್ಣ |
| 6 | ಅರವಿಂದ ಬೆಲ್ಲದ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ, ಮಾನ್ಯ ಸಭಾಧ್ಯಕ್ಷರು ಶ್ರೀ **ಕೌಜಲಗಿ ಶಿವಾನಂದ ಮಹಾಂತೇಶ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 4. ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| 1 | ರುದ್ರಪ್ಪ ಮಾನಪ್ಪ ಲಮಾಣಿ | 7 | ಕೆ. ಹರೀಶ್ ಗೌಡ |
| 2 | ಗುರುಪಾದಗೌಡ ಸಂಗನಗೌಡ ಪಾಟೀಲ | 8 | ಡಾ. ಶ್ರೀನಿವಾಸ್ ಎನ್.ಟಿ. |
| 3 | ಎಲ್.ಎ. ರವಿಸುಬ್ರಮಣ್ಯ | 9 | ಪ್ರಕಾಶ್ ಕೋಳಿವಾಡ |
| 4 | ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ | 10 | ದರ್ಶನ್ ಧ್ರುವನಾರಾಯಣ |
| 5 | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ | 11 | ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ |
| 6 | ಉದಯ ಬಿ. ಗರುಡಾಚಾರ್ | | |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 283ರ ಮೇರೆಗೆ ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

## 5. ಅರ್ಜಿಗಳ ಸಮಿತಿ

| ಶ್ರೀಯುತರುಗಳಾದ : | | | |
|---|---|---|---|
| 1 | ರುದ್ರಪ್ಪ ಮಾನಪ್ಪ ಲಮಾಣಿ | 9 | ಡಾ. ಹೆಚ್.ಡಿ. ರಂಗನಾಥ್ |
| 2 | ಎಸ್. ಸುರೇಶ್ ಕುಮಾರ್ | 10 | ಡಾ. ಅವಿನಾಶ್ ಉಮೇಶ್ ಜಾಧವ್ |
| 3 | ಎ. ಮಂಜು | 11 | ಹೆಚ್.ಡಿ. ತಮ್ಮಯ್ಯ |
| 4 | ಯು.ಬಿ. ಬಣಕಾರ್ | 12 | ಕೆ.ಎಸ್. ಆನಂದ್ |
| 5 | ಪ್ರಿಯ ಕೃಷ್ಣ | 13 | ಡಾ. ಮಂತರ್ ಗೌಡ |
| 6 | ಎಸ್. ಮುನಿರಾಜು | 14 | ಎ.ಸಿ. ಶ್ರೀನಿವಾಸ್ |
| 7 | ಎಸ್.ಟಿ. ಸೋಮಶೇಖರ್ | 15 | ಡಾ. ಚಂದ್ರು ಲಮಾಣಿ |
| 8 | ಸಿ.ಎನ್. ಬಾಲಕೃಷ್ಣ | 16 | ದರ್ಶನ್ ಪುಟ್ಟಣ್ಣಯ್ಯ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 211(2)ರ ಮೇರೆಗೆ ಮಾನ್ಯ ಸಭಾಧ್ಯಕ್ಷರು ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

## 6. ವಸತಿ ಸೌಕರ್ಯ ಸಮಿತಿ

| | | | |
|---|---|---|---|
| | **ಶ್ರೀಯುತರುಗಳಾದ :** | | |
| 1 | ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ | 7 | ಶ್ರೀಮತಿ ಭಾಗೀರಥಿ ಮುರುಳ್ಯ |
| 2 | ಹೆಚ್.ಸಿ. ಬಾಲಕೃಷ್ಣ | 8 | ಸಿಮೆಂಟ್ ಮಂಜು |
| 3 | ಬಿ. ನಾಗೇಂದ್ರ | 9 | ಮಹೇಶ್ ಟೆಂಗಿನಕಾಯಿ |
| 4 | ಬಿ. ಶಿವಣ್ಣ | 10 | ಧೀರಜ್ ಮುನಿರಾಜು |
| 5 | ಅರಬೈಲ್ ಶಿವರಾಮ್ ಹೆಬ್ಬಾರ್ | 11 | ಸ್ವರೂಪ್ ಪ್ರಕಾಶ್ |
| 6 | ಶ್ರೀಮತಿ ಕನೀಜ್ ಫಾತಿಮಾ | 12 | ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ |

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 211(2)ರ ಮೇರೆಗೆ ಮಾನ್ಯ ಸಭಾಧ್ಯಕ್ಷರು ವಿಧಾನಸಭೆಯ ಉಪ ಸಭಾಧ್ಯಕ್ಷರಾದ **ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ** ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

## 12. ವಿವಿಧ ಸಮಿತಿಗಳಿಗೆ ಸದಸ್ಯರನ್ನು ಮರು ನಾಮ ನಿರ್ದೇಶನ ಮಾಡುವ ಬಗ್ಗೆ

# ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ 30ನೇ ಸೆಪ್ಟೆಂಬರ್, 2024

## ಸಂಖ್ಯೆ: 114

ದಿನಾಂಕ:27.09.2024ರ ಲಘು ಪ್ರಕಟಣೆ ಸಂಖ್ಯೆ:112ನ್ನು ಭಾಗಶಃ ಮಾರ್ಪಡಿಸಿ. ಈ ಕೆಳಕಂಡಂತೆ ವಿಧಾನಸಭೆಯ ಮಾನ್ಯ ಸದಸ್ಯರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸಮಿತಿಗಳಿಗೆ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ಮರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

| **ಕ್ರಸಂ** | **ಸದಸ್ಯರ ಹೆಸರು ಶ್ರೀಯುತರುಗಳಾದ** | **ಹಿಂದೆ ನಾರ್ಮನಿರ್ದೇಶನ ಮಾಡಿದ್ದ ಸಮಿತಿ** | **ಮರು ನಾಮನಿರ್ದೇಶನ ಮಾಡಲಾಗಿರುವ ಸಮಿತಿ** |
|---|---|---|---|
| **1** | ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | ಅಂದಾಜುಗಳ ಸಮಿತಿ |
| **2** | ಕೆ.ಷಡಾಕ್ಷರಿ | ಅಂದಾಜುಗಳ ಸಮಿತಿ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ |
| **3** | ಅಲ್ಲಮಪ್ರಭು ಪಾಟೀಲ್ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | ಸಾರ್ವಜನಿಕ ಉದ್ಯಮಗಳ ಸಮಿತಿ |
| **4** | ಕೆ.ಎಂ.ಶಿವಲಿಂಗೇಗೌಡ | 1. ಸಾರ್ವಜನಿಕ ಉದ್ಯಮಗಳ ಸಮಿತಿ<br>2. ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ |
| 5 | ಅಬ್ಬಯ್ಯ ಪ್ರಸಾದ್ | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ |
| 6 | ಜಿ.ಹೆಚ್.ಶ್ರೀನಿವಾಸ್ | ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ |
| 7 | ಕಟಕದೋಂಡ್ ವಿಠ್ಠಲ್ ದೋಂಡಿಬಾ | ಅಧೀನ ಶಾಸನ ರಚನಾ ಸಮಿತಿ | ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ |

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# ಭಾಗ–3

# ಸಂಸತ್ ಸುದ್ದಿಗಳು

## 1. ಕಲಾಪ ನಿರ್ವಹಣೆಗೆ ಸಮಿತಿ: ಸಂಸದ ಪಿ.ಸಿ.ಮೋಹನ್‌ಗೆ ಸ್ಥಾನ

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕಲಾಪ ನಿರ್ವಹಿಸಲು 9 ಸದಸ್ಯರ ಸಂಸದರ ಸಮಿತಿ ರಚಿಸಿದ್ದಾರೆ. ಅದರಲ್ಲಿ ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಸಂಸದ ಪಿ.ಸಿ.ಮೋಹನ್ ಸ್ಥಾನ ಪಡೆದಿದ್ದಾರೆ. ಈ ಬಗ್ಗೆ ಲೋಕಸಭೆಯಲ್ಲಿ ಮಾತನಾಡಿದ ಓಂ ಬಿರ್ಲಾ ಕಲಾಪ ನಿರ್ವಹಿಸುವ ನಿಟ್ಟಿನಲ್ಲಿ ಇತರ ಸಂಸದರಾಗಿರುವ ಜಗದಾಂಬಿಕಾ ಪಾಲ್(ಬಿಜೆಪಿ), ಸಂಧ್ಯಾ ರೇ (ಬಿಜೆಪಿ), ದಿಲೀಪ್ ಸೈಕಿಯಾ(ಬಿಜೆಪಿ), ಕುಮಾರಿ ಸೆಲ್ಜಾ(ಕಾಂಗ್ರೆಸ್), ಎ ರಾಜಾ (ಡಿಎಂಕೆ), ಡಾ.ಕಕೋಲಿ ಘೋಷ್ ದಸ್ತಿದಾರ್(ಟಿಎಂಸಿ), ಕೃಷ್ಣಪ್ರಸಾದ್ ತನ್ನೇಟಿ(ಟಿಡಿಪಿ) ಹಾಗೂ ಅವಧೇಶ್ ಪ್ರಸಾದ್ (ಎಸ್‌ಪಿ) ಕಲಾಪ ನಿರ್ವಹಿಸುವ ಸಮಿತಿಯಲ್ಲಿ ಇರಲಿದ್ದಾರೆ ಎಂದು ಪ್ರಕಟಿಸಿದರು.

**ಆಧಾರ**: ಉದಯವಾಣಿ, ದಿನಾಂಕ: 03.07.2024

## 2. ಶಪಥದ ವೇಳೆ ಘೋಷಣೆ ಕೂಗುವಂತಿಲ್ಲ: ನಿಯಮ

ಲೋಕಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವಾಗ ಯಾವುದೇ ರೀತಿಯ ಘೋಷಣೆಗಳನ್ನು ಕೂಗಬಾರದು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನಿಯಮವನ್ನು ತಿದ್ದುಪಡಿ ಮಾಡಿದ್ದಾರೆ.

ಇತ್ತೀಚೆಗೆ ನೂತನವಾಗಿ ಲೋಕಸಭೆಗೆ ಚುನಾಯಿತರಾದ ಸಂಸದರಲ್ಲಿ ಕೆಲವರು ತಮ್ಮ ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ 'ಜೈ ಸಂವಿಧಾನ, ಜೈ ಹಿಂದೂ ರಾಷ್ಟ್ರ, ಜೈ ಪಾಲೆಸ್ತೀನ್' ಎಂದೆಲ್ಲಾ ಘೋಷಣೆಗಳನ್ನು ಕೂಗಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು. ಈ ನಿಟ್ಟಿನಲ್ಲಿ ತಿದ್ದುಪಡಿ ಮಾಡಿ ಬಿರ್ಲಾ ಅವರು, 'ಪ್ರಮಾಣ ವಚನ ಸಂದರ್ಭದ ಆರಂಭದಲ್ಲಿ ಅಥವಾ ಕೊನೆಯಲ್ಲಿ ಯಾವುದೇ ರೀತಿಯ ಘೋಷಣೆ ಕೂಗಬಾರದು' ಎಂದು ಸಂಸದರಿಗೆ ಸೂಚಿಸಿದ್ದಾರೆ.

**ಆಧಾರ:** ಕನ್ನಡಪ್ರಭ ದಿನಾಂಕ: 04.07.2024

## 3. ಲೋಕಸಭಾ ಸಚೇತಕರಾಗಿ ಕೋಟ ಶ್ರೀನಿವಾಸ್ ಪೂಜಾರಿ

ಲೋಕಸಭಾ ಸಚೇತಕರಾಗಿ ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸದಸ್ಯ ಕೋಟ ಶ್ರೀನಿವಾಸ್ ಪೂಜಾರಿ ಅವರನ್ನು ನೇಮಕ ಮಾಡಲಾಗಿದೆ. ರಾಜ್ಯದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ, ಸಚಿವರಾಗಿ, ಪರಿಷತ್‌ನ ವಿರೋಧ ಪಕ್ಷದ ನಾಯಕರಾಗಿ ಹಾಗೂ ನಾಲ್ಕು ದಶಕಗಳ ಕಾಲ ರಾಜ್ಯದಲ್ಲಿ ಬಿಜೆಪಿ ಸಂಘಟನೆಯಲ್ಲಿ ಅಪಾರ ಅನುಭವ ಹೊಂದಿರುವ ಕೋಟ ಶ್ರೀನಿವಾಸ ಪೂಜಾರಿ ಅವರು ಲೋಕಸಭೆಯಲ್ಲಿ ಆಡಳಿತ ಪಕ್ಷದ ಸಚೇತಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಕೋಟ ಶ್ರೀನಿವಾಸ ಪೂಜಾರಿ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿನಂದಿಸಿದ್ದಾರೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 30.07.2024

## 4. LS records 136% productivity in Budget session

The Parliament was adjourned sine die on Friday one sitting ahead of the scheduled end of the session with the two Houses passing several key pieces of legislation, including the Finance Bill. 2024 both crucial for the Union Budget.

The session gained significance after the introduction of the contentious Waqf Board Bill. which was referred to the Joint Parliamentary Committee in the wake of opposition parties' strong resistance.

"As many as 15 sittings were held during the Session lasting for 115 hours and the productive of the House during the Session was 136%," said Om Birla in his valedictory address.

Lok Sabha function for 123% of its scheduled time and Rajya Sabha for 110%. As many as 12 government bills were introduced and four bills were passed during the session. Besides the Finance Bill and appropriation Bill, the other bills which were passed included the Jammu and Kashmir Appropriation Bill and Bharatiya Vayuyan Vidheyak, 2024. Speaker said 86 starred questions were answered orally during the session.

A total 400 matters of urgent public importance were raised by members during the zero Hour and 358 matters were taken up under Rule 377. Birla said during the session 25 statements were made under Direction 73A and a total number of 30 statements given by the minister of parliamentary affairs in connection with parliamentary business and three suo moto statements by ministers were given. As many as 1,345 papers were laid on the table of the House.

Rajya Sabha was adjourned sine die amidst opposition walkouts that disrupted the House proceedings.

Parliamentary affairs and minority affairs minister, Kiren Rijiju on Friday thanked the presiding officers of both Houses and said that the Parliament saw very good business transactions in both Houses along with active participation from the members.

"After many years neither the Budget session nor the entire Parliament session was washed out for a single day and we saw good business transactions in both. Houses along with active participation from the members. On behalf of all ten members of the Lok Sabha and Rajya Sabha and the government, I want to thank the Chairman of both Houses for their great help in running the Houses," Rijiju said at a press conference.

**Courtesy:** Times of India, date:10.08.2024

## 5. Lok Sabha Speaker continues six new parliamentary panels

Lok Sabha Speaker constituted six new parliamentary committees, including the Public Accounts Committee (PAC) which keeps a close eye on government expenditure to be headed by senior Congress Leader K.C.Venugopal.

The PAC one of the three key financial committees tasked with keeping a with on the government's accounts is usually headed by a senior Lok Sabha member of the principal Opposition party, Congress leader Adhir Ranjan Chowdhury headed by the PAC for five years. Before him, Congress president Malikarjun Kharge headed the PAC.

Two other financial committees the Estimates Committee and the Public Undertakings Committee will be chaired by Bharatiya Janata Party (BJP) leaders.

In a bulletin, Sanjay Jaiswal was appointed Chairperson of the Committee on Estimates and Baijayant Panda made Chairperson of the Committee on Public Undertakings.

The Speaker has appointed Ganesh Singh Chairperson of the Committee on Welfare of other Backward Classes, the bulletin said.

Fagan Singh Kulaste has been appointed Chairperson of the Committee on the Welfare of Scheduled Casts and Scheduled Tribe.

**One-year tenure**: All the above formed committees have a tenure of one year and have members from both the Lok Sabha and the Rajya Sabha.

The Lok Sabha Speaker is yet to constitute related Standing Committees, covering under their jurisdiction all the Ministries and Departments of the Government of India.

Unlike the previous Lok Sabha, the committee in the 18th Lok Sabha, formed after the General Election in June 2024, have taken shape mostly through consensus instead of election.

**Courtesy:** Deccan Herald, date:13.08.2024

## 6. All states must adopt National Education policy, says Dhankhar

Asserting that the National Education Policy (NEP) was a game-changer for the nation, Vice-president literate, this will be a spinal contribution for Viksit Bharat" he said, and expressed confidence Jagdeep Dhankhar appealed to the States which are yet to adopt it to rethink their stance.

"This National Education policy empowers our youth to fully exploit their talent and energy, giving due importance to all languages" he said in his address at the International Literacy Day celebrations here.

Mr.Dhankhar also highlighted the special significance of the mother tongue and the unparalleled linguistic diversity of India. It was the language in which we dream, he added. "As Chairman of the Rajya Sabha, I afford members the opportunity to speak in 22 languages. When I hear them speak in their language, I listen to the translation, but their body language itself tells me what they are saying".

The Vice President called upon everyone to resolve to make at least one person literate. "When we make someone literate we liberate him or her, we help that person discover himself or herself, we make him or her feel dignity, we cut down dependence, we generate independence and interdependence. It enables a person to help himself or herself. It is a supreme facet of hand-holding".

Let each one make one that if literacy was pursued passionately, India could reclaim it ancient status as a centre of learning.

**Courtesy:** The Hindu, Dated:09.09.2024

## 7. 'Role of legislative bodies important for inclusive governance'

Lok Sabha Speaker Om Birla on Monday urged legislative bodies to make governance more responsible and efficient by ensuring accountability and transparency of the executive.

Mr Birla was addressing the plenary session of the 10th Commonwealth Parliament Association India Region Conference on the Parliament premises. Rajya Sabha Deputy Chairman Harivansh and presiding officers of legislative bodies from the States participated in the session.

The Speaker emphasized the use of technology to improve the efficiently and functioning of legislative bodies to focus on welfare schemes to ensure that the benefit reaches the last person in the society.

Implementation of this programme would involve discussions and dialogues for two hours per week (with three periods of 40 minutes) in all governments, aided, and unaided primary and high schools of the State, the order said One period of value education and two periods of Socially Useful productive work (SUPW) have been adjusted to this. The programme was announced in the State Budget of 2024-25, presented by Chief Minister Siddaramaiah, to inculcate values enshrined in the Constitution among children.

Officers have been advised to provide appropriate guidance regarding the implementation of the programme and appoint nodal officer at the district level, and submit a report to Department of State Educatinonal Research and Training (DSERT), the order said. No special grant will be given for the implementation of the programme.

The Department of School Education and Literacy has released a format for implementation of the programme.

**Courtesy:** The Hindu, Dated:08.07.2024

## 3. ಎಸ್ಸಿ, ಎಸ್ಟಿಗೆ ಶೇ.24 ಅನುದಾನ ಕಡ್ಡಾಯ

ಪರಿಶಿಷ್ಟ ಜಾತಿ, ಪಂಗಡದವರಿಗೆ ಶೇ.24.01 ಅನುದಾನ ಕಡ್ಡಾಯವಾಗಿ ವೆಚ್ಚ ಮಾಡುವುದನ್ನು ಖಾತ್ರಿಪಡಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ರಾಜ್ಯ ಹಣಕಾಸು ನಿಧಿ (ಎಸ್‌ಎಫ್‌ಸಿ) ಮುಕ್ತ ನಿಧಿ ಯೋಜನೆಯಡಿ ಕಲ್ಯಾಣ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ಶೇ.24.01 ಅನುದಾನ ಕಡ್ಡಾಯವಾಗಿ ವೆಚ್ಚ ಮಾಡುವುದನ್ನು ಖಾತ್ರಿಪಡಿಸಬೇಕು ಎಂದು ಆದೇಶ ನೀಡಿದ್ದಾರೆ. ಅದೇ ರೀತಿ 15ನೇ ಹಣಕಾಸು ಆಯೋಗದಡಿ ಮಂಜೂರಾಗಿದ್ದ 33,803 ಕಾಮಗಾರಿಗಳು ಪೂರ್ಣಗೊಂಡಿದ್ದು ಬಿಡುಗಡೆಯಾಗಿದ್ದ ರೂ.2,799 ಕೋಟಿ ಪೈಕಿ ರೂ. 1883 ಕೋಟಿ ವೆಚ್ಚವಾಗಿದೆ. ಇನ್ನೂ 916 ಕೋಟಿ ರೂಗಳ 10,089 ಕಾಮಗಾರಿ ಬಾಕಿಯಿದ್ದು ಮುಂದಿನ 2 ವಾರದೊಳಗೆ ಟೆಂಡರ್ ಕರೆದು ನಿಗದಿತ ಅವಧಿಯೊಳಗೆ ಅನುದಾನ ಬಳಕೆ ಮಾಡಬೇಕು ಎಂದಿದ್ದಾರೆ.

**ಆಧಾರ**: ಉದಯವಾಣಿ, ದಿನಾಂಕ:09.07.2024

## 4. ಭಾಷಾ ನಿಯಮ ಪಾಲನೆಗೆ ಶಾಲೆಗಳಿಗೆ 'ಸಿಐಎಸ್‌ಸಿಇ' ಸೂಚನೆ

ಸಿಬಿಎಸ್‌ಸಿ, ಐಸಿಎಸ್‌ಇ ಪಠ್ಯಕ್ರಮ ಅನುಸರಿಸುವ ಎಲ್ಲ ಶಾಲೆಗಳೂ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸಬೇಕು ಎನ್ನುವ ರಾಜ್ಯ ಸರ್ಕಾರದ ಆದೇಶವನ್ನು ಪಾಲಿಸುವಂತೆ 'ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್' (ಸಿಐಎಸ್‌ಸಿಇ) ಸೂಚಿಸಿದೆ.

ನಗರದಲ್ಲಿ ನಡೆದ ಶಾಲಾ ಮುಖ್ಯಸ್ಥರ ಸಭೆಯಲ್ಲಿ ಸೂಚನೆ ನೀಡಿದ ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಜೋಸೆಫ್ ಇಮ್ಯಾನುಯೆಲ್, 'ಕರ್ನಾಟಕ ಶಿಕ್ಷಣ ಸಂಸ್ಥೆಗಳ (ನಿರಾಕ್ಷೇಪಣಾ ಪ್ರಮಾಣಪತ್ರ ಮತ್ತು ನಿಯಂತ್ರಣದ ವಿತರಣೆ) ನಿಯಮಗಳನ್ನು ಪಾಲಿಸಬೇಕು. ಶಾಲೆಗಳು ಅಯಾ ರಾಜ್ಯಗಳ ಭಾಷಾ ನೀತಿಗೆ ಬದ್ಧವಾಗಿರಬೇಕು' ಎಂದರು.

'ಪಠ್ಯ ಪುಸ್ತಕಗಳ ಬೆಲೆ ಅಧಿಕವಾಗಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಎಂಟನೇ ತರಗತಿಯವರೆಗೆ ಶಾಲೆಗಳೇ ಪಠ್ಯಪುಸ್ತಕ ಆಯ್ಕೆ ಮಾಡುವ ಸ್ವಾತಂತ್ರ್ಯ ಬಳಸಿಕೊಳ್ಳಬೇಕು. ಆಗ ಪುಸ್ತಕಗಳ ಬೆಲೆಯ ಹೊರೆಯನ್ನು ಪೋಷಕರಿಗೆ ಕಡಿಮೆ ಮಾಡಬಹುದು' ಎಂದು ಸಲಹೆ ನೀಡಿದರು.

ಮುಂಬರುವ ದಿನಗಳಲ್ಲಿ ಶಾಲೆಗಳ ಕಾರ್ಯಕ್ಷಮತೆಯನ್ನು ವಿಶ್ವ ಶ್ರೇಯಾಂಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಲಾಗುವುದು. ಶೇ.80ರಷ್ಟು ಮೌಲ್ಯಮಾಪನವು ಭೋದನೆ ಮತ್ತು ಕಲಿಕೆಯ ಮೇಲೆ ಆಧಾರಿತವಾಗಿರುತ್ತದೆ. ಶಾಲೆಗಳ ನಡುವೆ ಆರೋಗ್ಯಕರ ಸ್ಪರ್ಧೆಗೆ ಮಾನದಂಡವಾಗಿ ಕಾರ್ಯನಿರ್ವಹಿಸಲು ಅವಕಾಶವಾಗಲಿದೆ ಎಂದು ಹೇಳಿದರು.

**ಆಧಾರ**: ಪ್ರಜಾವಾಣಿ, ದಿನಾಂಕ: 10.07.2024

## 5. ಡಾ. ಬಾಬು ಜಗಜೀವನ್‌ರಾಮ್ ಭವನ ಉದ್ಘಾಟನೆ

ನಗರದಲ್ಲಿ ನಿರ್ಮಾಣಗೊಂಡಿರುವ ಡಾ.ಬಾಬು ಜಗಜೀವನರಾಮ್ ಭವನ ಮತ್ತು ಸಂಶೋಧನಾ ಸಂಸ್ಥೆಯನ್ನು ಲೋಕಸಭೆ ಮಾಜಿ ಸ್ಪೀಕರ್ ಮೀರಾ ಕುಮಾರ್ ಮತ್ತು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು. ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಸಚಿವರಾದ ಎಚ್.ಸಿ.ಮಹದೇವಪ್ಪ, ಆರ್.ಬಿ.ತಿಮ್ಮಾಪುರ, ಶಾಸಕ ಮುನಿರತ್ನ ಮತ್ತಿತರರಿದ್ದರು.

**ಆಧಾರ**: ವಿಜಯವಾಣಿ, ದಿನಾಂಕ: 14.07.2024

## 6. ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ

ಮಂಡ್ಯದಲ್ಲಿ ಡಿಸೆಂಬರ್ 20 ರಿಂದ 22ವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಸಿಎಂ ಶ್ರೀ ಸಿದ್ದರಾಮಯ್ಯ ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು.

'ಸಕ್ಕರೆಯ ನಾಡು, ಅಕ್ಕರೆಯ ಬೀಡು' ಎಂಬ ಧ್ಯೇಯವಾಕ್ಯದೊಂದಿಗೆ ರೂಪುಗೊಂಡ ಲಾಂಛನವು ಮಂಡ್ಯದ ಅಸ್ಮಿತೆ, ಸಂಸ್ಕೃತಿ ಮತ್ತು ವೈಶಿಷ್ಟ್ಯತೆ ಒಳಗೊಂಡಿದೆ. ಜೀವನದಿ ಕಾವೇರಿ, ಕಬ್ಬು, ಬಿಸಿ ಬೆಲ್ಲ, ಹಸಿಭತ್ತ ಹಾಗೂ ನೇಗಿಯೋಗಿ ರೈತನನ್ನು ಒಳಗೊಂಡಿದೆ. ಸಮ್ಮೇಳನದ ದಿನಾಂಕ ಸಹಿತ ಶಿವನಸಮುದ್ರ–ಶಿಂಷಾ ಜಲವಿದ್ಯುತ್ ಯೋಜನೆ, ಗಗನಚುಕ್ಕಿ ಜಲಪಾತ, ಶಿವಪುರ ಧ್ವಜ ಸತ್ಯಾಗ್ರಹ ಸೌಧ, ಸಕ್ಕರೆ ಕಾರ್ಖಾನೆ, ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನ ಮಂಡ್ಯ ಜಿಲ್ಲೆಯ ಸಂಸ್ಥಾಪಕರಾದ ನಾಲ್ವಡಿಯವರ ಭಾವಚಿತ್ರವೂ ಲಾಂಛನದಲ್ಲಿ ಸೇರಿದೆ.

**ಆಧಾರ**: ವಿಜಯವಾಣಿ, ದಿನಾಂಕ: 20.07.2024

## 7. Govt. to continue financial aid for SC&ST student to pursue PhD in foreign varsities

The State government has decided to withdraw its earlier order cancelling the financial assistance to Scheduled Castes and Scheduled Tribes students to pursue PhD in foreign universities under the Prabuddha scheme.

Minister of Social Welfare H.C.Mahadevappa posted on Facebook and X; There has been some confusion regarding SC/ST students pursuing phD in foreign universities under prabuddha Scheme and the government will continue this shceme as before.

It is our responsibility to realize B.R.Ambedkar's wish that SC and ST community people can rise to dignified positions only when they pursue higher studies abroad. Therefore SC and ST students, who will be selected for PhD programmes in the top 100 universities of the world, will get the benefit under this scheme. I have informed the officials of the Social Welfare Department about the continuation of this scheme. I hereby request members of the community not to create confusion in this regard, he stated.

The State government had cancelled the financial assistance from the academic year 2023-24 to SC and ST students pursuing phD in foreign universities citing high expenditure.

**Courtesy:** The Hindu, Dated: 23.07.2024

## 8. ಕೆಆರ್‌ಎಸ್, ಕಬಿನಿಗೆ ಬಾಗಿನ

ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಜಲಾಶಯ ಭರ್ತಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಶ್ರೀ ಡಿ.ಕೆ.ಶಿವಕುಮಾರ್ ಬಾಗಿನ ಅರ್ಪಿಸಿದರು.

ಶ್ರೀ ಸಿದ್ದರಾಮಯ್ಯ ಅವರು 2013 ಮತ್ತು 2015ರಲ್ಲಿ ಕೆ.ಆರ್‌ಎಸ್‌ಗೆ ಬಾಗಿನ ಅರ್ಪಿಸಿದ್ದರು. ಎರಡೂ ಜಲಾಶಯಗಳನ್ನು ತಳಿರು–ತೋರಣ, ಹೂವುಗಳಿಂದ ಸಿಂಗರಿಸಲಾಗಿತ್ತು. ಅಣೆಕಟ್ಟೆಯ ಮಹಾದ್ವಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯರವರ ಪ್ರತಿಮೆಗಳನ್ನು ಮುಖ್ಯಮಂತ್ರಿ ಅನಾವರಣಗೊಳಿಸಿದರು.

ನಂತರ ಮಾತನಾಡಿ, 'ಕಾವೇರಿ ನಮ್ಮೆಲ್ಲರ ಜೀವನದಿ. ಈ ಬಾರಿ ವರುಣನ ಕೃಪೆಯಿಂದ ಭರ್ತಿಯಾಗಿದ್ದು, 1ಲಕ್ಷ ಕ್ಯೂಸೆಕ್ ನೀರು ನದಿಗೆ ಹರಿದಿದೆ ಪ್ರತಿವರ್ಷ ಕನ್ನಂಬಾಡಿ ತುಂಬಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ' ಎಂದರು.

'ಕಳೆದ ಸಾಲಿನಲ್ಲಿ ಅಣೆಕಟ್ಟೆ ತುಂಬಿರಲಿಲ್ಲ. ಈ ಬಾರಿ ಉತ್ತಮವಾಗಿ ಮಳೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಕಬಿನಿ, ಹಾರಂಗಿ, ಹೇಮಾವತಿ ಮತ್ತು ಕೆ.ಆರ್.ಎಸ್. ಜಲಾಶಯಗಳು ಭರ್ತಿಯಾಗಿವೆ. ಈಗ ಇರುವ ಒಟ್ಟು 114 ಟಿಎಂಸಿ ಅಡಿ ನೀರನ್ನು ಸಮರ್ಪಕವಾಗಿ ಬಳಸಬೇಕಿದೆ' ಎಂದರು.

**ಆಧಾರ:** ಉದಯವಾಣಿ, ದಿನಾಂಕ: 30.07.2024

## 9. ಕೇರಳ ರಕ್ಷಣಾ ಕಾರ್ಯಕ್ಕೆ ಕರ್ನಾಟಕ ಸಾಥ್

ಭೂ ಕುಸಿತದಿಂದ ನೆರೆಯ ಕೇರಳದ ವಯನಾಡಿನಲ್ಲಿ ಸಂಭವಿಸಿರುವ ದುರಂತದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವೂ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಧಾವಿಸಿದ್ದು, ಇಬ್ಬರು ಐಎಎಸ್ ಅಧಿಕಾರಿಗಳನ್ನು ಕರ್ನಾಟಕ ಸರ್ಕಾರ ನಿಯೋಜನೆ ಮಾಡಿದೆ.

ನವದೆಹಲಿ ಪ್ರವಾಸದಲ್ಲಿರುವ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಯನಾಡಿನಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳ ಕುರಿತಂತೆ ಸಮನ್ವಯಕ್ಕಾಗಿ ಹಿರಿಯ ಐಎಎಸ್ ಅಧಿಕಾರಿ ಶ್ರೀ ಪಿ.ಸಿ.ಜಾಫರ್ ಹಾಗೂ ಶ್ರೀ ದಿಲೀಶ್ ಶಶಿ ಅವರನ್ನು ನಿಯೋಜಿಸಲಾಗಿದೆ.

ಬೆಂಗಳೂರಿನಲ್ಲಿ 2 ಎನ್‌ಡಿಆರ್‌ಎಫ್ ಹಾಗೂ ಮದ್ರಾಸ್ ಎಂಜಿನಿಯರ್ ಗ್ರೂಪ್ ಸೇನಾ ತಂಡಗಳು ಅಗತ್ಯ ಉಪಕರಣಗಳೊಂದಿಗೆ ತೆರಳಿದ್ದು ಹೆಚ್ಚುವರಿ ತಂಡ ಹಾಗೂ ಪರಿಹಾರ ಸಾಮಾಗ್ರಿಗಳನ್ನು ರವಾನಿಸಲು ಸೂಚಿಸಿದ್ದಾರೆ. ಎಂಇಜಿಯ ಒಬ್ಬರು ಅಧಿಕಾರಿ, ಇಬ್ಬರು ಜೆಸಿಓಗಳು ಹಾಗೂ 70 ಮಂದಿ ವಿವಿಧ ರ್‍ಯಾಂಕ್‌ನ ಸಿಬ್ಬಂದಿ ಈಗಾಗಲೇ ರಕ್ಷಣೆ ಹಾಗೂ ಪರಿಹಾರ ಸಾಮಗ್ರಿಗಳೊಂದಿಗೆ 15 ವಾಹನಗಳಲ್ಲಿ ವಯನಾಡಿಗೆ ತೆರಳಿದ್ದಾರೆ. ಇನ್ನೂ ಇಬ್ಬರು ಅಧಿಕಾರಿಗಳು, 4 ಮಂದಿ ಜೆಸಿಓಗಳು, ಹಾಗೂ 100 ಮಂದಿ ಸೇನಾ ಸಿಬ್ಬಂದಿ ರಕ್ಷಣಾ ಉಪಕರಣಗಳೊಂದಿಗೆ 40 ವಾಹನಗಳಲ್ಲಿ ತೆರಳಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ತಂಡಗಳು ವಯನಾಡಿಗೆ ಶೀಘ್ರವೇ ತಲುಪಲು ರಕ್ಷಣಾ ಸಾಮಗ್ರಿ ಒಯ್ಯಲು ಅನುಕೂಲವಾಗುವಂತೆ ಬಂಡೀಪುರ ಚೆಕ್ ಪೋಸ್ಟ್‌ನಲ್ಲಿ ಗ್ರೀನ್ ಕಾರಿಡಾರ್ ಮೂಲಕ ಅನಿರ್ಬಂಧಿತ ಸಂಚಾರಕ್ಕೆ ಅವಕಾಶ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ. ಕರ್ನಾಟಕ ಸರ್ಕಾರವು ಕೇರಳ ಸರ್ಕಾರದ ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ನೆರವು ಒದಗಿಸಲಾಗುತ್ತಿದೆ. ಗಡಿ ಭಾಗದ ಮೈಸೂರು, ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳೂ ಸಹ ಸೂಕ್ತ ಬೆಂಬಲ ನೀಡುತ್ತಿದ್ದಾರೆ.

**ಆಧಾರ**: ಉದಯವಾಣಿ, ದಿನಾಂಕ: 31.07.2024

## 10. ಪರಿಸರ ಸವಾಲುಗಳಿಗೆ ನ್ಯಾನೋ ಪರಿಹಾರ ಶೋಧಿಸಿ

ಪ್ರಸ್ತುತ ಸನ್ನಿವೇಶದಲ್ಲಿ ಪರಿಸರ ನಿರ್ವಹಣೆಯಂತಹ ಕ್ಷೇತ್ರಗಳಲ್ಲಿ ಎದುರಾಗುವ ಸವಾಲುಗಳಿಗೆ ನ್ಯಾನೋ ತಂತ್ರಜ್ಞಾನ ಆಧಾರಿತ ಪರಿಹಾರವನ್ನು ಕಂಡುಕೊಳ್ಳಬೇಕಾದ ಅಗತ್ಯ ಇದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ವಿಜ್ಞಾನಿಗಳಿಗೆ ಕರೆ ನೀಡಿದ್ದಾರೆ.

ಕರ್ನಾಟಕ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯು ಕರ್ನಾಟಕ ವಿಜ್ಞಾನ ಹಾಗೂ ತಂತ್ರಜ್ಞಾನ ಉತ್ತೇಜನಾ ಸೊಸೈಟಿ ಮತ್ತು ಜವಾಹರಲಾಲ್ ನೆಹರು ಮುಂದುವರಿದ ವೈಜ್ಞಾನಿಕ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 13ನೇ ಅವೃತ್ತಿಯ ಬೆಂಗಳೂರು ಇಂಡಿಯಾ ನ್ಯಾನೋ ಶೃಂಗವನ್ನು ಉದ್ಘಾಟಿಸಿ ಮಾತನಾಡಿದರು. ಆಹಾರ ಭದ್ರತೆ, ಇಂಧನ ಸುರಕ್ಷತೆ ಶುದ್ಧ ಜಲ, ಮೂಲ ಸೌಕರ್ಯ, ಆರೋಗ್ಯ ಸೇವೆ, ತ್ಯಾಜ್ಯ ವಸ್ತುಗಳ ನಿರ್ವಹಣೆ ಕ್ಷೇತ್ರಗಳಲ್ಲಿ ಎದುರಾಗುವ

ಸವಾಲುಗಳಿಗೆ ನ್ಯಾನೋ ಟೆಕ್ನಾಲಜಿ ಆಧಾರಿತ ಪರಿಹಾರ ಬೇಕಿದೆ. ಹೆಚ್ಚುತ್ತಿರುವ ನಗರೀಕರಣ ಹಾಗೂ ಬದಲಾಗುತ್ತಿರುವ ಜೀವನಶೈಲಿಯಿಂದ ಭವಿಷ್ಯದಲ್ಲಿ ಹೆಚ್ಚಾಗುವ ಸಾಧ್ಯತೆಗಳಿರುವ ಕಾರಣ ನ್ಯಾನೋ ಟೆಕ್ನಾಲಜಿ ಆಧಾರಿತ ಪರಿಹಾರಗಳನ್ನು ಆವಿಷ್ಕರಿಸಬೇಕಿದೆ ಎಂದು ಸಲಹೆ ನೀಡಿದರು.

ಕರ್ನಾಟಕ ತನ್ನ ಸಾಂಸ್ಕೃತಿಕ ಪರಂಪರೆ ಅಲ್ಲದೆ ಶೈಕ್ಷಣಿಕ ಮತ್ತು ಸಂಶೋಧನೆ ಚಟುವಟಿಕೆಗಳಿಗೆ ಭದ್ರ ತಹಳದಿಯನ್ನು ಕಲ್ಪಿಸಿದೆ. ತಾಂತ್ರಿಕತೆ ಆಧಾರಿತ ಅನ್ವೇಷಣೆ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದೆ. ಐಐಎಸ್‌ಸಿ, ಜೆಎನ್‌ಸಿಎಎಸ್‌ಆರ್, ಎನ್‌ಸಿಬಿಎಸ್ ಅಂತಹ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ನೆರವಿನೊಂದಿಗೆ ಬೆಂಗಳೂರು ದೇಶದ ನ್ಯಾನೋ ಟೆಕ್ ಹಬ್ ಆಗಿ ರೂಪುಗೊಳ್ಳುತ್ತಿದೆ. ಭವಿಷ್ಯದಲ್ಲಿ ಬೆಂಗಳೂರು ಈ ಆಧುನಿಕ ತಾಂತ್ರಿಕ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಆಧಾರ**: ವಿಜಯವಾಣಿ, ದಿನಾಂಕ: 03.08.2024

## 11. ಕರ್ನಾಟಕ 12 ಕ್ರೀಡಾ ಸಾಧಕರಿಗೆ ಸರ್ಕಾರಿ ಉದ್ಯೋಗ

ಪ್ಯಾರಾಲಿಂಪಿಕ್ಸ್ ಕಾಮನ್‌ವೆಲ್ತ್ ಸೇರಿದಂತೆ ವಿವಿಧ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತ 12 ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರ ವಿವಿಧ ಸರ್ಕಾರಿ ಹುದ್ದೆಗಳಿಗೆ ನೇಮಕ ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ಸಾಧಕ ಕ್ರೀಡಾಪಟುಗಳಿಗೆ ನೇಮಕಾತಿ ಪತ್ರ ಹಸ್ತಾಂತರಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ನೇಮಕ ಪತ್ರ ನೀಡಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, ಕ್ರೀಡಾ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಕ್ರೀಡಾ ಚಟುವಟಿಕೆಗಳಿಗೆ ಎಲ್ಲಾ ರೀತಿಯ ನೆರವು ನೀಡಲು ಬದ್ಧವಾಗಿದೆ. ಈ ಹಿಂದೆ 2016–17ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಒಲಿಂಪಿಕ್ಸ್ ಏಷ್ಯನ್ ಗೇಮ್ಸ್ ಕಾಮನ್‌ವೆಲ್ತ್ ನಂತಹ ಕ್ರೀಡಾಕೂಟಗಳಲ್ಲಿ ಪದಕ ಪಡೆದವರನ್ನು ಸರ್ಕಾರಿ ಉದ್ಯೋಗಕ್ಕೆ ನೇರ ನೇಮಕಾತಿ ಮಾಡುವುದಾಗಿ ಘೋಷಿಸಿದ್ದೆ. ಆದರೆ, ಸರ್ಕಾರ ಬದಲಾದ ಬಳಿಕ ಇದು ನೆನೆಗುದಿಗೆ ಬಿದ್ದಿತ್ತು. ಮತ್ತೆ ಅಧಿಕಾರಕ್ಕೆ ಬಂದ ಬಳಿಕ ಇದನ್ನು ಜಾರಿಗೊಳಿಸಲು ಚಾಲನೆ ನೀಡಿದ್ದೇವೆ ಎಂದರು.

**ಆಧಾರ**: ಕನ್ನಡ ಪ್ರಭ, ದಿನಾಂಕ: 05.08.2024

## 12. ಬೌರಿಂಗ್ ಆಸ್ಪತ್ರೆ ಹೊಸ ಕಟ್ಟಡಕ್ಕೆ ಶೀಘ್ರ ಶಂಕು

ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಬೋರಿಂಗ್ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಕ್ಕೆ ಮುಂದಿನ ತಿಂಗಳು ಸ್ಥಾಪನೆ ನೆರವೇರಲಿದೆ ಎಂದು ವೈದ್ಯಕೀಯ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವರು ಡಾ॥ ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ಬೋರಿಂಗ್ ಆಸ್ಪತ್ರೆಯ ನಿರ್ಮಾಣ ಹಂತದ ಚರಕ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು. ಹಿಂದೆ ಇದ್ದ ಬೌರಿಂಗ್ ಆಸ್ಪತ್ರೆಯನ್ನು ನೆಲಸಮಗೊಳಿಸಿದ ಬಳಿಕ ನೂತನ ಹತ್ತು ಅಂತಸ್ತಿನ 500 ಹಾಸಿಗೆಗಳ ಸೌಲಭ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಯೋಜಿಸಲಾಗಿದೆ. ಜನತೆಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ದೊರಕಿಸಲಾಗುವುದು. ಮುಂದಿನ ತಿಂಗಳು ಆಸ್ಪತ್ರೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ಆಗಲಿದೆ ಎಂದರು.

ಬಳಿಕ ಆಸ್ಪತ್ರೆಯ ಡೆಂಘೀ ವಾರ್ಡ್‌ಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದ ಅವರು, ಆಸ್ಪತ್ರೆಯಲ್ಲಿ ವೈದ್ಯರು ಸೂಕ್ತವಾದ ಚಿಕಿತ್ಸೆ ನೀಡುತ್ತಿದ್ದಾರೆಯೇ, ಭೋಜನ ಸಮರ್ಪಕವಾಗಿ ಸಿಗುತ್ತಿದೆಯೇ ಎಂದು ಪ್ರಶ್ನಿಸಿ ರೋಗಿಗಳಿಂದ ಮಾಹಿತಿ ಪಡೆದರು. ಶಿವಾಜಿನಗರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಹಿರಿಯ ಅಧಿಕಾರಿಗಳಿದ್ದರು.

**ಆಧಾರ**: ಕನ್ನಡ ಪ್ರಭ, ದಿನಾಂಕ: 06.08.2024

## 13. Amidst rising dengue cases, BBMP to crack down on unclean vacant plots

Amidst rising dengue case, the city's civic body has decided to crack down on unclean vacant plots that have become dump yards for waste and breeding grounds for mosquitoes. "Property owners who fail to maintain their plots will be issued notices requiring them to clean up the sites. Persistent offenders will face fines and warnings against future violations," Chief Civic Commissioner Tushar Giri Nath said.

Mr.Giri Nath directed officials to identify and list all vacant plots across various BBMP zones. He suggested evaluating whether these vacant plots are subject to property tax, and taking necessary steps to include them under the tax regime. During a meeting held at the BBMP head office, Mr.Giri Nath emphasised the need for a compassed the need for a compassed the need for a comprehensive approach to maintain cleanliness. The commissioner also directed officials to step up measures to destroy mosquito breeding sites using 600 fogging machines and 618 sprayers.

The meeting also addressed the issue of unauthorised advertisements. Mr.Giri Nath inducted officials to issue notices to the printing press operating within their respective zones, enforcing adherence to the Karnataka Open Places (Prevention of Defacement) Act, 1981 and the BBMP Act 2020. He stressed that violators must be prosecuted to prevent the proliferation of unauthorised ads.

In addition to these measures Mr.Giri Nath called for the immediate start of white topping work across the city. He said all the projects have to be completed within the stipulated time in collaboration with the traffic police.

**Courtesy:** The Hindu, dated: 06.08.2024

## 14. ಮುಂದಿನ ತಿಂಗಳು ಗೃಹ ಆರೋಗ್ಯ ಜಾರಿ

'ಮನೆ ಬಾಗಿಲಲ್ಲಿಯೇ ತಪಾಸಣೆ ನಡೆಸಿ, ಅಗತ್ಯ ಔಷದಿಗಳನ್ನು ಒದಗಿಸುವ 'ಗೃಹ ಆರೋಗ್ಯ' ಯೋಜನೆಯನ್ನು ಮುಂದಿನ ತಿಂಗಳು ರಾಜ್ಯದಲ್ಲಿ ಜಾರಿ ಮಾಡಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ಹಾಗೂ ನೊವೊ ನಾರ್ಡಿಸ್ಕ್ ಎಜುಕೇಷನ್ ಫೌಂಡೇಶನ್ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಧುಮೇಹ ಚಿಕಿತ್ಸೆ ತರಬೇತಿಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 'ಗೃಹ ಆರೋಗ್ಯ' ಯೋಜನೆ ಜಾರಿಗೆ ಸಚಿವ ಸಂಪುಟದಲ್ಲಿ ಈಗಾಗಲೇ ಅನುಮೋದನೆ ದೊರೆತಿದೆ. ಯೋಜನೆ ಚಾಲನೆಗೆ ದಿನಾಂಕ ನಿಗದಿ ಮಾಡಲು ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು. ಈ ಯೋಜನೆಗೆ ಮೊದಲ ಹಂತದಲ್ಲಿ ರಾಜ್ಯದ ನಾಲ್ಕು ವಿಭಾಗಗಳಿಂದ ಎಂಟು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಮಧುಮೇಹ ಸೇರಿ ವಿವಿಧ ಸಮಸ್ಯೆಗಳ ಪತ್ತೆಗೆ ಅಲ್ಲಿನ ಎಲ್ಲ ಮನೆಗಳ ಕುಟುಂಬದ ಸದಸ್ಯರಿಗೆ ತಪಾಸಣೆ ನಡೆಸಲಾಗುತ್ತದೆ ಎಂದು ಹೇಳಿದರು.

'ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಲ್ಲಿ ಕೆಲವರು ನಿಯಮಿತವಾಗಿ ಮಾತ್ರೆಗಳನ್ನು ಸೇವಿಸುತ್ತಿಲ್ಲ. ಆರ್ಥಿಕ ಹೊರೆ ಸೇರಿ ವಿವಿಧ ಕಾರಣಗಳಿಂದ ಮಾತ್ರೆಗಳನ್ನು ಖರೀದಿಸುತ್ತಿಲ್ಲ. 'ಗೃಹ ಆರೋಗ್ಯ' ಯೋಜನೆಯಡಿ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರಿಗೆ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ಮನೆಗಳಿಗೆ ನೇರವಾಗಿ ಒದಗಿಸಲಾಗುತ್ತದೆ ಎಂದು ತಿಳಿಸಿದರು.

**ಆಧಾರ**: ಪ್ರಜಾವಾಣಿ, ದಿನಾಂಕ: 07.08.2024

## 15. ಗೃಹಲಕ್ಷ್ಮಿ ಯೋಜನೆ ಹಣ ವರ್ಗಾವಣೆ

ಗೃಹಲಕ್ಷ್ಮಿ ಯೋಜನೆಯಡಿ ಒಂದು ತಿಂಗಳ ಹಣ ಫಲಾನುಭವಿಗಳ ಖಾತೆಗೆ ಬ್ಯಾಂಕ್ ಮೂಲಕ ವರ್ಗಾವಣೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಸುಮಾರು ಮೂರು ಸಾವಿರ ಕೋಟಿಯಷ್ಟು ಗೃಹಲಕ್ಷ್ಮಿ ಯೋಜನೆ ಹಣ ವರ್ಗಾವಣೆ ಆಗಬೇಕಾದರೆ ಹದಿನೈದು ದಿನಗಳ ಸಮಯ ತೆಗೆದುಕೊಳ್ಳುತ್ತದೆ. ಪ್ರತಿ ತಿಂಗಳು ಹದಿನೈದನೇ ತಾರೀಖಿನಂದು ಹಣ ವರ್ಗಾವಣೆ ಕೆಲಸ ಆರಂಭವಾಗುತ್ತದೆ. ಅದು ತಿಂಗಳ ಕೊನೆ ವಾರದಲ್ಲಿ ಖಾತೆಗೆ ಜಮಾ ಆಗುತ್ತದೆ ಎಂದು ತಿಳಿಸಿದರು. ಸಂಪುಟ ವಿಸ್ತರಣೆ ಸಂಬಂಧ ರಾಜ್ಯ ಸರ್ಕಾರದ ಬಳಿ ಯಾವುದೇ ವಿಷಯ ಪ್ರಸ್ತಾಪವಾಗಿಲ್ಲ ಎಂದು ತಿಳಿಸಿದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 12.08.2024

## 16. Road to employment: Karnataka government launches apprenticeship degree

To equip students with employable skills the state government announced a new course-apprenticeship embedded degree programme (AEDP) in select 45 government first grade colleges across the state from the academic year 2024-25. This year, 1,373 students have registered, of which 884 are girls. The programme has been framed in line with the University Grants Commission.

During the launching of the programme, Higher Education Minister Dr. M.C. Sudhakar said the department wants to offer skilled manpower to the industry and help students in rural areas and women.

An MoU was signed with representatives from degree colleges at the Karnataka State Higher Education Council in Bangalore, in collaboration with CRISP (Centre for Research in Schemes and Policies) and Sector Skill Councils, who will facilitate the course.

The programme will be implemented inner the Logistics, BFSI and Retail Sector Skill Councils in the form three year degree courses in Banking and Finance (BFSI), e-Commerce, Logistics and Retail, in select existing infrastructure and faculty members.

"As a new course students will pursue studies in their colleges during the first four semesters. They will undergo apprenticeship training during the $5^{th}$ and $6^{th}$ semesters in industries and organisations as decided by the respective Sector Skill Councils" said Sudhakar. He added that in the next three years, the government has set a goal of enrolling 14,000 students in AEDP.

VLVSS Subba Rao, Senior Advisor, CRISP, and former bureaucrat, said a monthly stipend of Rs. 18,000-20,000 will be awarded to students. "This cost will be borne by different companies. The Added benefit here is that those students who perform well, can absorbed by companies" he said.

**Courtesy:** Indian Express, dated, 14.08.2024

## 17. Plans on to improve services under AB-Ark health scheme

To improve services under the Ayushman Bharat Pradhan Mantri Jan Arogya Yojana Arogya Karnataka (AB-PMJAY-Ark) health Department is toying with the idea of doing away with the referral system for certain high-end tertiary care procedure.

As of now, the scheme covers 1,650 procedures 294 simple secondary, 251 complex secondary, 934 tertiary care procedures and 171 emergency procedures.

While the simple secondary procedures are completely handled at the government hospital level, for all other procedures patients need to be referred by a government hospital to a private facility. This according to patients, is causing a lot of inconvenience.

Being implemented in a 'Assurance Mode' by Suvarna Arogya Surakshna Trust (SAST) the State's nodal health agency, the scheme offers cashless treatment up to Rs, 5 lakh a year per family.

At a review meeting, Health Minister Dinesh Gundu Rao instructed officials to study the feasibility of doing away with the referral system for some high-end tertiary care procedures that cannot be done in government hospitals.

"We are discussing if patients can be allowed to directly go to private hospital (without the mandatory referral) for high-end procedures that can anyway not be done in government hospitals. Also for such procedures, if patients have to be referred from rural areas to cities such as

Bangalore or Mysore, it would be better if they are allowed to directly go to any empanelled private hospital of their choice. I have asked the official to prepare a list of such territory-care procedures that cannot be done in our hospitals, Mr.Rao told The Hindu after the meeting.

Pointing out that discussions are on to improve the existing service under the scheme, the Minister said "We are also planning to add a few more procedures under the scheme and improve the referral system."

Arogya Karnataka, which was rolled out in March 2018 in the State, was co-brained with Ayushman Bharat on October 30 in the same year after the State signed a memorandum of understanding with the Centre.

**Courtesy:** The Hindu, dated: 14.08.2024

## 18. Order on change of rules to give incentives to SC students withdrawn

The State government has withdrawn its order on the change of rules for giving incentives to Scheduled Caste (SC) students who pass with first class marks in SSLC and range of post metric courses.

The government issued an order in this regard and revoked the revised order issued by the Department of Social Welfare on December 2 , 2023.

Further as per the order issued earlier on September 4, 2023. It has been ordered to sanction the incentives to the eligible students. Hence, all SC students who pass SSLC and post-metric courses in the first attempt will go the incentive. Also, there is no income limit for the candidates applying for this incentives.

The Hindu had on July 16 published a report, 'Activists, students unhappy over Karnataka government, tweaking rules on incentives to Dalit students introducing income criteria,.

Various Dalit leaders and students across the State had expressed unhappiness over the government's decision to change the rules and protested, demanding that the order be withdrawn immediately.

Opposition parties had criticised the government's decision during the legislature session.

**Courtesy:** The Hindu, dated:15.08.2024

## 19. ಆರೋಗ್ಯ ಇಲಾಖೆಗೆ ಭರಪೂರ ಅನುದಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಆರೋಗ್ಯ ಇಲಾಖೆಯ ವಿವಿಧ ಯೋಜನೆಗಳಿಗೆ ಅಂಗೀಕಾರ ಸಿಕ್ಕಿದೆ. ಕಲಬುರಗಿ, ಕಾರವಾರ ಬೆಂಗಳೂರು ಸೇರಿದಂತೆ ಹಲವೆಡೆ ನೂತನ ಆಸ್ಪತ್ರೆಗಳ ಸ್ಥಾಪನೆಗೆ ಅನುದಾನ ಒದಗಿಸಲಾಗಿದೆ.

ಕಲಬುರಗಿಯಲ್ಲಿ 150 ಹಾಸಿಗೆ ಸಾಮರ್ಥ್ಯದ ಮಕ್ಕಳ ಆರೋಗ್ಯ ಘಟಕವನ್ನು ಇಂದಿರಾಗಾಂಧಿ ಮಕ್ಕಳ ಅರೋಗ್ಯ ಸಂಸ್ಥೆಯ ತಾಂತ್ರಿಕ ನೆರವಿನೊಂದಿಗೆ ರೂ. 221.51 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಸಂಪುಟ

ಆಡಳಿತಾತ್ಮಕ ಅನುಮೋದನೆ ನೀಡಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ವೈದ್ಯಕೀಯ ವಿಜ್ಞಾನ ಮಹಾವಿದ್ಯಾಲಯದ ಆವರಣದಲ್ಲಿ 450 ಹಾಸಿಗೆಗಳ ಆಸ್ಪತ್ರೆ ಮತ್ತು ವಸತಿ ನಿಲಯ ನಿರ್ಮಾಣ ಕಾಮಗಾರಿಗೆ ರೂ. 198.27 ಕೋಟಿಗಳ ಅಂದಾಜು ವೆಚ್ಚಕ್ಕೆ ಕ್ಯಾಬಿನೆಟ್ ಆಡಳಿತಾತ್ಮಕ ಅನುಮೋದನೆ ಕೊಟ್ಟಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯ ಕಟ್ಟಡ ಕಾಮಗಾರಿಯ ರೂ.262.20 ಕೋಟಿಗಳ ಪರಿಷ್ಕೃತ ಅಂದಾಜಿಗೆ ಸಂಪುಟ ಅನುಮೋದನೆ ನೀಡಿದೆ.

ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ರೇಡಿಯೋ ಥೆರಪಿ ಚಿಕಿತ್ಸೆ ಮತ್ತು ರೋಗನಿರ್ಧಾರಕ ಉಪಕರಣಗಳನ್ನು ಖರೀದಿಸಲು ರೂ. 70 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಸಮ್ಮತಿ ಸಿಕ್ಕಿದೆ. ಮೈಸೂರಿನ 40ಹಾಸಿಗೆ ಸಾಮರ್ಥ್ಯದ ನೆಫ್ರೋ–ಯುರಾಲಜಿ ಆಸ್ಪತ್ರೆಯನ್ನು 100 ಹಾಸಿಗೆ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲು ರೂ.117.11 ಕೋಟಿ ಮೊತ್ತಕ್ಕೆ ಸಂಪುಟ ಆಡಳಿತಾತ್ಮಕ ಅನುಮೋದನೆ ಹಾಗೂ ಹೊರರೋಗಿ ವಿಭಾಗಕ್ಕೆ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 16.15 ಕೋಟಿಗಳಿಗೆ ಸಮ್ಮತಿ ನೀಡಿದೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 06.09.2024

## 20. ದಶಕದ ಬಳಿಕ ಕಲಬುರಗಿಯಲ್ಲಿ ಸಂಪುಟ ಸಭೆ

10 ವರ್ಷ ನಂತರ ತೊಗರಿ ನಾಡು ಕಲಬುರಗಿಯಲ್ಲಿ ರಾಜ್ಯ ಸಚಿವ ಸಂಪುಟ ಸಭೆಗೆ ಮಹೂರ್ತ ನಿಗದಿಯಾಗಿದೆ. ಸೆಪ್ಟೆಂಬರ್ 17ರ ಸಂಜೆ 4 ಗಂಟೆಗೆ ಕಲಬುರಗಿ ನಗರದ ಮಿನಿ ವಿಧಾನಸೌಧದಲ್ಲಿರುವ ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಸಂಪುಟ ಸಭೆ ನಿಗದಿಗೊಳಿಸಲಾಗಿದೆ. ಕಲಬುರಗಿಯಲ್ಲಿ ಪ್ರಸಕ್ತ ಸಾಲಿನ 19ನೇ ಸಚಿವ ಸಂಪುಟ ಸಭೆ ಎಂಬುದಾಗಿ ಸಚಿವ ಸಂಪುಟದ ಜಂಟಿ ಕಾರ್ಯದರ್ಶಿ ಆರ್.ಚಂದ್ರಶೇಖರ ಅಧಿಸೂಚನೆ ಹೊರಡಿಸಿದ್ದಾರೆ. ಮುಖ್ಯಮಂತ್ರಿಗಳು ಸೆಪ್ಟೆಂಬರ್ 17ರಂದು ಬೆಳಗ್ಗೆ 9 ಗಂಟೆಗೆ ಕಲ್ಯಾಣ ಕರ್ನಾಟಕ ಉತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಲಿದ್ದಾರೆ. ಸಂಪುಟದ ಎದುರು ಕಳುಹಿಸಬಹುದಾದ ವಿಷಯವನ್ನು ಮುಂದಿನ 5 ದಿನದೊಳಗೆ ಆಯಾ ಇಲಾಖೆಗಳು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಕಲಬುರಗಿಯಲ್ಲಿ ಈ ಹಿಂದೆ 2014ರ ನವೆಂಬರ್ 28 ರಂದು ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆದಿದ್ದರೆ ಈಗ 10 ವರ್ಷಗಳ ನಂತರ ಅವರದ್ದೇ ನೇತೃತ್ವದಲ್ಲಿ ಸಂಪುಟ ಸಭೆಗೆ ದಿನಾಂಕ ನಿಗದಿಯಾಗಿದೆ. ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯುತ್ತಿರುವ 2ನೇ ಸಂಪುಟ ಸಭೆ ಇದಾಗಲಿದೆ. 2010ರಲ್ಲಿ ಖಮರುಲ್ ಇಸ್ಲಾಂ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಯಡಿಯೂರಪ್ಪ ನೇತೃತ್ದಲ್ಲಿ ಸತತವಾಗಿ 2008ರ ಸೆಪ್ಟೆಂಬರ್ 26, 2009ರ ಅಕ್ಟೋಬರ್ 27 ಹಾಗೂ 2010ರ ಅಕ್ಟೋಬರ್ 10ರಂದು ಕಲಬುರಗಿಯಲ್ಲಿ ಸಂಪುಟದ ಸಭೆಗಳು ನಡೆದಿವೆ. ಇದಕ್ಕೂ ಮುಂಚೆ 1982ರಲ್ಲಿ ಗುಂಡೂರಾವ್ ಸಿಎಂ ಆಗಿದ್ದಾಗ ಕಲಬುರಗಿಯಲ್ಲಿ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ 2012ರ ಅಗಸ್ಟ್ 18 ರಂದು ಸಂಪುಟ ಸಭೆ ನಡೆದಿವೆ.

**ಆಧಾರ:** ಉದಯವಾಣಿ, ದಿನಾಂಕ: 07.09.2024

## 21. ಕರುನಾಡಲ್ಲಿ ಇಂದು ಸಂವಿಧಾನ ಜಾತ್ರೆ

ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸರ್ಕಾರ 2500 ಕಿ.ಮೀ ಉದ್ದದ ಮಾನವ ಸರಪಳಿಯನ್ನು ರಾಜ್ಯಾದ್ಯಂತ ನಿರ್ಮಿಸುವ ಮೂಲಕ ವಿಶ್ವ ದಾಖಲೆ ನಿರ್ಮಿಸಲು ಮುಂದಾಗಿದೆ. ಬೀದರ್‌ನಿಂದ ಚಾಮರಾಜನಗರದವರೆಗೂ ಸಮಾಜದ ಎಲ್ಲಾ ವರ್ಗದ ಜನರೂ ಸೇರಿ ಸುಮಾರು 2.50 ಲಕ್ಷ ಮಂದಿ ಕೈ ಕೈ ಹಿಡಿದು ರಾಜ್ಯದುದ್ದಕ್ಕೂ ವಿಶ್ವದ ಬೃಹತ್ ಮಾನವ ಸರಪಳಿ ನಿರ್ಮಿಸಲಿದ್ದಾರೆ.

ಆ ಮೂಲಕ ಅಸ್ಪೃಶ್ಯತೆ  ನಿವಾರಿಸಿ ಭ್ರಾತೃತ್ವ ಬೆಳೆಸುವ ಪ್ರಯತ್ನ ಮಾಡಿ ಸಮಾನತೆಯ ಹೆಜ್ಜೆ ಇಡಲಿದ್ದಾರೆ. ಇದೇ ವೇಳೆ ಸಂವಿಧಾನದ ಮಹತ್ವ ಸಾರುವ ಪ್ರಸ್ತಾವನೆ ಓದುವುದು ಹಾಗೂ ಪ್ರಜಾಪ್ರಭುತ್ವದ ರಕ್ಷಣೆಯ ಹೊಣೆಗಾರಿಕೆ ನೆನಪಿಸುವ ಮಾತುಗಳನ್ನಾಡಿ ಜಾಗೃತಿ ಮೂಡಿಸಲಾಗುತ್ತದೆ. ಜತೆಗೆ ಸುತ್ತಮುತ್ತಲ ಪ್ರದೇಶದಲ್ಲಿ ರಾಜ್ಯಾದ್ಯಂತ 10 ಲಕ್ಷ ಗಿಡಗಳನ್ನು ನೆಡಲಾಗುತ್ತಿದೆ.

ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ರಾಜ್ಯ 32 ಇಲಾಖೆಗಳ ಸುಮಾರು 8 ಲಕ್ಷಕ್ಕೂ ಅಧಿಕ ಸಿಬ್ಬಂದಿ ಕಾರ್ಯಕ್ರಮಕ್ಕಾಗಿ ಶ್ರಮಿಸುತ್ತಿದ್ದಾರೆ. ಸಚಿವ ಡಾ.ಎಚ್.ಸಿ.ಮಹಾದೇವಪ್ಪ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಈ ವಿನೂತನ ಕಾರ್ಯಕ್ರಮಕ್ಕೆ ಲಂಡನ್‌ನ ವಿಶ್ವದಾಖಲೆ ಪರಿಶೀಲಿಸುವ ತಂಡ ಆಗಮಿಸಲಿದ್ದು, ಎಲ್ಲವೂ ನಿಗದಿಯಂತೆ ನಡೆದರೆ ಕಾರ್ಯಕ್ರಮ ವಿಶ್ವ ದಾಖಲೆಗೆ ಸೇರಲಿದೆ. ಈ ವಿಶೇಷ ಮಾನವ ಸರಪಳಿಯು ಪ್ರತಿ ಜಿಲ್ಲೆ ತಾಲ್ಲೂಕು ಹಾಗೂ ಪ್ರಮುಖ ಗ್ರಾಮಗಳು, ಹೆದ್ದಾರಿಗಳಲ್ಲಿ ಹಾದು ಹೋಗಲಿದ್ದು, ಎಲ್ಲಾ ಹಳ್ಳಿಗಳಲ್ಲೂ ಹಬ್ಬದಂತೆ ಆಚರಿಸಲು ಸಕಲ ಸಿದ್ಧತೆ ನಡೆದಿದೆ.

**ಆಧಾರ**: ವಿಜಯಕರ್ನಾಟಕ, ದಿನಾಂಕ: 15.09.2024

## 22. ಭ್ರಾತೃತ್ವ  ಬೆಸೆದ ಮಾನವ ಸರಪಳಿ

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ನಿಮಿತ್ತ ರಾಜ್ಯ ಸರ್ಕಾರ ಹಮ್ಮಿಕೊಂಡಿದ್ದ ಅತಿ ಉದ್ದನೆಯ ಮಾನವ ಸರಪಳಿಯು ಸಮಾನತೆ, ಮಾನವೀಯತೆಗೆ ಹೊಸ ಭಾಷ್ಯ ಬರೆದು ವಿಶ್ವದಾಖಲೆ ನಿರ್ಮಿಸಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವು ಪ್ರಜಾಪ್ರಭುತ್ವ ಜೀವಾಳವೆಂದು ಸಾರುವ ಉದ್ದೇಶದಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ವಿವಿಧ ಇಲಾಖೆ, ಸಂಸ್ಥೆಗಳ ಸಹಯೋಗದಲ್ಲಿ ಆಚರಿಸಲಾಯಿತು. 31 ಜಿಲ್ಲೆಗಳಲ್ಲಿ ಒಟ್ಟು 2,500 ಕಿ.ಮೀ.ಉದ್ದನೆಯ ಮಾನವ ಸರಪಳಿ ನಿರ್ಮಿಸಲಾಗಿತ್ತು. 25ಲಕ್ಷ ನಾಗರಿಕರು ಇದರಲ್ಲಿ ಪಾಲ್ಗೊಂಡಿದ್ದರು. ಇದು ಅತಿ ಉದ್ದನೆಯ ಮಾನವ ಸರಪಳಿ ಎಂದು 'ವರ್ಲ್ಡ್ ಬುಕ್ ಆಫ್ ರೆಕಾರ್ಡ್'ಗೆ ಸೇರ್ಪಡೆ ಆಯಿತು. ವಿಧಾನಸೌಧ ಮಹಾದ್ವಾರದ ಮೆಟ್ಟಿಲು ಬಳಿ ಅಯೋಜಿಸಿದ್ದ ಉದ್ಘಾಟನಾ ಕಾರ್ಯಕ್ರಮದಲ್ಲಿ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯ ಪ್ರತಿನಿಧಿ ಶೈಲಜಾ ಅವರು ಪ್ರಮಾಣ ಪತ್ರ ಫಲಕವನ್ನು ಮುಖ್ಯಮಂತ್ರಿ, ಸಚಿವರಿಗೆ ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ 10 ಲಕ್ಷ ಸಸಿಗಳು, ಸಂವಿಧಾನ ಪೀಠಿಕೆಯ ಐದು ಸಾವಿರ ಪ್ರತಿಗಳನ್ನು ರಾಜ್ಯಾದ್ಯಂತ ವಿತರಿಸಲಾಯಿತು. ಅಂಚೆ ಇಲಾಖೆ ಹೊರತಂದ ವಿಶೇಷ ಲಕೋಟೆಯನ್ನು ಸಿಎಂ ಬಿಡುಗಡೆ ಮಾಡಿದರು.

**ಆಧಾರ**: ವಿಜಯವಾಣಿ, ದಿನಾಂಕ: 16.09.2024

## 23. ರಾಜ್ಯದ ಮೊದಲ ಅನಿಲ ವಿದ್ಯುತ್ ಸ್ಥಾವರ

ರಾಜ್ಯದ ಮೊದಲ ಅನಿಲ ವಿದ್ಯುತ್ ಸ್ಥಾವರದ ಲೋಕಾರ್ಪಣೆಗೆ ಈಗ ಕ್ಷಣಗಣನೆ. ಬಹುನಿರೀಕ್ಷಿತ ಯಲಹಂಕ ಅನಿಲ ವಿದ್ಯುತ್ ಸ್ಥಾವರವು ಸೆಪ್ಟೆಂಬರ್ 24ರಂದು ಅಧಿಕೃತವಾಗಿ ಸೇವೆಗೆ ಅಣಿಯಾಗಲಿದ್ದು, ಆ ಮೂಲಕ ವಿದ್ಯುತ್ ಜಾಲಕ್ಕೆ 370 ಮೆ.ವ್ಯಾ ಸೇರ್ಪಡೆಗೊಳ್ಳಲಿದೆ.

ಅನಿಲ ಮತ್ತು ನೀರಿನ ಹಬೆಯ ಸಂಯೋಜಿತ ವಿದ್ಯುತ್ ಸ್ಥಾವರ ಯಲಹಂಕದಲ್ಲಿ ಈಗಾಗಲೇ ತಲೆ ಎತ್ತಿದ್ದು ಎರಡೂ ಮೂಲಗಳಿಂದ ಕ್ರಮವಾಗಿ 236.82 ಮೆ.ವ್ಯಾ. ಹಾಗೂ 133.225 ಮೆ.ವಾ ವಿದ್ಯುತ್ ಪೂರೈಕೆ ಆಗುತ್ತಿದೆ. ಇಂದು ಸಂಜೆ 5 ಗಂಟೆಗೆ ಸಿಎಂ ಸಿದ್ದರಾಮಯ್ಯ ಈ ಘಟಕಕ್ಕೆ ಚಾಲನೆ ನೀಡಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಇಂಧನ ಸಚಿವ ಕೆ.ಜೆ.ಜಾರ್ಜ್ ಸೇರಿ ವಿವಿಧ ಇಲಾಖೆಗಳ ಸಚಿವರು, ಅಧಿಕಾರಿಗಳು ಈ ಕ್ಷಣಗಳಿಗೆ ಸಾಕ್ಷಿಯಾಗಲಿದ್ದಾರೆ.

ರಾಜ್ಯದಲ್ಲಿ ಜಲ ಮತ್ತು ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಪ್ರಮುಖ ಯೋಜನೆಗಳಾಗಿವೆ. ಇವುಗಳ ಜತೆಗೆ ಪವನ, ಸೌರ, ಕಿರು ಜಲವಿದ್ಯುತ್, ಬಯೋಮಾಸ್ ನಂತರ ಅಸಾಂಪ್ರದಾಯಿಕ ಯೋಜನೆಗಳು ಇದ್ದವು. ಆದರೆ, ಕರ್ನಾಟಕವು ಅನಿಲ ಆಧಾರಿತ ಯೋಜನೆಗಳನ್ನು ಹೊಂದಿರಲಿಲ್ಲ. ಜಲವಿದ್ಯುತ್ ಕೇಂದ್ರಗಳಲ್ಲಿನ ಉತ್ಪಾದನೆಯು ಮುಂಗಾರು ಮಾರುತಗಳ ಮೇಲೆ ಅವಲಂಬಿತವಾಗಿದೆ. ಮುಂಗಾರು ಮಳೆ ಸಮರ್ಪಕವಾಗಿ ಇಲ್ಲದಿದ್ದರೆ, ವಿದ್ಯುತ್ ಉತ್ಪಾದನೆ ಮೇಲೆ ಪರಿಣಾಮ ಬೀರುತ್ತದೆ. ಅಂತಹ ಸಂದರ್ಭದಲ್ಲಿ ಶಾಖೋತ್ಪನ್ನಗಳ ಘಟಕಗಳ ಜತೆಗೆ ಅನಿಲ ಆಧಾರಿತ ವಿದ್ಯುತ್ ಯೋಜನೆ ಕಾರ್ಯಗತಗೊಳಿಸುವುದರಿಂದ ಒತ್ತಡ ತಗ್ಗಿಸಲು ಸಾಧ್ಯವಾಗುತ್ತದೆ.

**ಆಧಾರ**: ಉದಯವಾಣಿ, ದಿನಾಂಕ: 24.09.2024

# ಭಾಗ–6
# ನ್ಯಾಯಾಲಯ ಸುದ್ದಿಗಳು

## 1. Court cannot insist on bank guarantees while granting bail, says HC

Trial courts cannot insist on bank guarantees from the accused while granting bail, the Karnataka High Court said in a recent, judgement. Justice M Nagaprasanna stated this while allowing a petition filed by Bengaluru based Vaibhavraj Utsav.

The petitioner had challenged the May 17, 2024 order passed by a sessions court in Bengaluru. A crime was registered against the petitioner for offences under IPC sections 406, 465, 471 and 379 for alleged misappropriation of funds to the tune of Rs. 1,08,50,000 to a certain Vimukthi Trust. After the charge sheet was filed, the petitioner filed an application seeking regular bail.

The bail was granted to the petitioner on March 14, 2023. Besides the other conditions, the sessions court asked him to execute a personal bond for Rs 50 lakh with one surety for the like sum. The court also directed him to furnish a bank guarantee to the trust to the tune of Rupees one crore within three months after his release from prison. On an application filed by him seeking modification of the order, the court directed him to furnish a bank guarantee of Rs. 50 lakh. Challenging this order, the petitioner contended that insistence of bank guarantee is illegal.

Justice Nagaprasanna citied the Apex Court judgement in the Karandeep Singh case and said that the top court clearly held that direction to furnish a bank guarantee as a condition precedent for release on bail or continuance of bail is, on the face of it, illegal.

Therefore, the fly in the ointment is the direction to furnish a bank guarantee. The Apex court has held it to be illegal in the afore quoted judgments. The said finding would become applicable to the facts of the case at hand and the condition of furnishing of bank guarantee is on the face of it illegal, Justice Nagaprasanna said.

The court further said. This court is coming across a plethora of cases where the concerned courts, while granting bail, are imposing a condition that the accused should furnish a bank guarantee of any quantum. This is on the face of it illegal. Such orders being passed have generated a lot of litigation. Therefore, I deem it appropriate to observe that the concerned court shall not insist on furnishing a bank guarantee for release of the accused on grant of bail. Except this, the concerned court would be free to impose any other legally tenable condition.

**Courtesy:** Deccan Herald, Dated:12.07.2024

## 2. ಪರಿಶಿಷ್ಟ ಜಾತಿ ಪಟ್ಟಿ ಬದಲಿಸಲು ಸರ್ಕಾರಕ್ಕಿಲ್ಲ ಅಧಿಕಾರ: ಸುಪ್ರೀಂ

ಸಂವಿಧಾನ 341ನೆಯ ವಿಧಿಯ ಅಡಿಯಲ್ಲಿ ಪ್ರಕಟಿಸಲಾಗಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಬದಲಾವಣೆ ತರುವ ಅಧಿಕಾರವು ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಬಿಹಾರ ರಾಜ್ಯ ಸರ್ಕಾರವು 2015ರ ಜುಲೈ 1 ರಂದು ಕೈಗೊಂಡ ನಿರ್ಣಯವನ್ನು ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸತೀಶ್ ಚಂದ್ರ ಶರ್ಮ ಅವರು ಇದ್ದ ವಿಭಾಗೀಯ ಪೀಠವು ರದ್ದುಪಡಿಸಿದೆ. ಅತ್ಯಂತ ಹಿಂದುಳಿದಿರುವ ಜಾತಿಯಾದ 'ತಾಂತಿ–ತತವಾ' ಅನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇರುವ 'ಪಾನ್/ಸ್ವಾಸಿ' ಜಾತಿಯ ಜೊತೆ ವಿಲೀನಗೊಳಿಸುವ ಈ ನಿರ್ಣಯವು ಅಕ್ರಮ ಎಂದು ಪೀಠವು ಹೇಳಿದೆ.

ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನವು ಸದುದ್ದೇಶ ಹೊಂದಿರಲಿಲ್ಲ. ಆ ತೀರ್ಮಾನವು ಸಂವಿಧಾನದಲ್ಲಿ ಇರುವ ಅವಕಾಶಗಳ ವ್ಯಾಪ್ತಿಯನ್ನೂ ಮೀರಿದೆ. ಸರ್ಕಾರವು ಮಾಡಿದ ಕುಚೋದ್ಯಮಕ್ಕೆ ಕ್ಷಮೆ ಇಲ್ಲ ಎಂದು ಪೀಠವು ಹೇಳಿದೆ.

341ನೆಯ ವಿಧಿಯನ್ನು ಉಲ್ಲೇಖಿಸಿರುವ ಪೀಠವು, ಸಂಸತ್ತು ರೂಪಿಸಿದ ಕಾನೂನಿನ ಮೂಲಕ ಮಾತ್ರವೇ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಬದಲಾಯಿಸಲು ಅವಕಾಶ ಇದೆ ಎಂದು ಹೇಳಿದೆ. ಪರಿಶಿಷ್ಟ ಜಾತಿಗಳನ್ನು ಹೆಸರಿಸಿ ಹೊರಡಿಸಿದ ಅಧಿಸೂಚನೆಯನ್ನು, ಸಂಸತ್ತು ರೂಪಿಸಿದ ಕಾನೂನು ಹೊರತುಪಡಿಸಿ, ಇನ್ನೊಂದು ಅಧಿಸೂಚನೆಯ ಮೂಲಕ ಬದಲಿಸಲು ಆಗದು ಎಂದು ಸ್ಪಷ್ಟಪಡಿಸಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ:16.07.2024

### 3. ತನಿಖೆಯಿಂದ ರಾಜ್ಯಪಾಲರಿಗೆ ವಿನಾಯಿತಿ: ಆಕ್ಷೇಪ

ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣದಲ್ಲಿ ತನಿಖೆಯಿಂದ ರಾಜ್ಯಪಾಲರಿಗೆ ಸಾರಾಸಗಟಾಗಿ ವಿನಾಯಿತಿ ನೀಡುವ ಸಂವಿಧಾನ ವಿಧಿ 361(2)ರ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿ ಕುರಿತು ಸುಪ್ರಿಂಕೋರ್ಟ್ ಅಟಾರ್ನಿ ಜನರಲ್ ಅವರ ನೆರವು ಕೋರಿತು.

ಕೋಲ್ಕತ್ತದ ರಾಜಭವನದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಹಿಳೆಯೊಬ್ಬರು, ತನಿಖೆಯಿಂದ ರಾಜ್ಯಪಾಲರಿಗೆ ವಿನಾಯಿತಿ ನೀಡುವ ಸಂವಿಧಾನದ ವಿಧಿಯ ಸಿಂಧುತ್ವವನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ಧೀವಾಲಾ, ಮೋಜ್ ಮಿಶ್ರಾ ಅವರಿದ್ದ ಪೀಠವು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು. ಅಲ್ಲದೆ, ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನೂ ಪ್ರತಿವಾದಿಯಾಗಿ ಉಲ್ಲೇಖಿಸಲು ಅರ್ಜಿದಾರರಿಗೆ ಅವಕಾಶ ನೀಡಿತು.

ಅರ್ಜಿದಾರ ಮಹಿಳೆಯನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಶ್ಯಾಮ್‌ದಿವಾನ್, ಈ ಪ್ರಕರಣ ತನಿಖೆಗೆ ಸಂವಿಧಾನದ 361ನೇ ವಿಧಿ ಅಡ್ಡಿ ಆಗಬಾರದು ಎಂದು ಪ್ರತಿಪಾದಿಸಿದರು. ಸಾಕ್ಷ್ಯಗಳನ್ನು ಈಗಲೇ ಸಂಗ್ರಹಿಸಬೇಕಿದೆ. ಈ ಕೆಲಸವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗದು ಎಂದು ಹೇಳಿದರು. ಅರ್ಜಿದಾರ ಮಹಿಳೆಯು, ತಾನು ರಾಜ್ಯಪಾಲ ಸಿ.ವಿ.ಆನಂದ ಬೋಸ್ ವಿರುದ್ಧ ಮಾಡಿರುವ ಲೈಂಗಿಕ ದೌರ್ಜನ್ಯ ಆರೋಪದ ತನಿಖೆ ನಡೆಸುವಂತೆ ಬಂಗಾಳದ ಪೊಲೀಸರಿಗೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದರು. ರಾಜ್ಯಪಾಲರಿಗಿರುವ ವಿನಾಯಿತಿಯ ಕಾರಣದಿಂದ ತನಗೆ ಪರಿಹಾರ ಸಿಗುತ್ತಿಲ್ಲ ಎಂದೂ ಪ್ರತಿಪಾದಿಸಿದರು.

ಸಂವಿಧಾನ ವಿಧಿ 361(2) ಪ್ರಕಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರ ವಿರುದ್ಧ ಅವರು ಹುದ್ದೆಯಲ್ಲಿ ಇರುವ ಅವಧಿಯಲ್ಲಿ ಯಾವುದೇ ಕೋರ್ಟ್‌ನಲ್ಲಿ ಕ್ರಿಮಿನಲ್ ವಿಚಾರಣೆ ನಡೆಸುವಂತಿಲ್ಲ. ಅಂಶವನ್ನೇ ಉಲ್ಲೇಖಿಸಿರುವ

ಅರ್ಜಿದಾರರು, ಕಾನೂನುಬಾಹಿರ ಕೆಲಸಗಳನ್ನು ಮಾಡಲು ಈ ವಿನಾಯಿತಿಯು ತಮಗಿರುವ ಅವಕಾಶ ಎಂದು ರಾಜ್ಯಪಾಲರು ಅರ್ಥಮಾಡಿಕೊಳ್ಳಬಾರದು ಎಂದು ಹೇಳಿದ್ದಾರೆ.

ಪೊಲೀಸರು ತನಿಖೆ ಮಾಡಲು ಅಥವಾ ಎಫ್‌ಐಆರ್‌ನಲ್ಲಿ ಹೆಸರು ಸೇರಿಸಲು ಈ ವಿನಾಯಿತಿಯು ಅಡ್ಡಿ ಆಗಬಾರದು ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಕಾನೂನಿಗಿಂತ ಯಾರೂ ದೊಡ್ಡವರಿಲ್ಲ. ತನಿಖೆಯಿಂದ ಇರುವ ವಿನಾಯಿತಿಯ ಅರ್ಥ, ರಾಜ್ಯಪಾಲರು ಅಸಮರ್ಪಕವಾಗಿ ನಡೆದುಕೊಳ್ಳಬಹುದು ಮತ್ತು ಲೈಂಗಿಕ ದೌರ್ಜನ್ಯ ನಡೆಸಬಹುದು ಎಂದಲ್ಲ ಎಂದು ವಾದಿಸಲಾಗಿದೆ.

ಅರ್ಜಿದಾರರ ಮಹಿಳೆಯು ಇದೇ ವರ್ಷದ ಮೇ 2ರಂದು ಕೊಲ್ಕತ್ತದಲ್ಲಿರುವ ರಾಜಭವನದ ಅಧಿಕಾರಿಗೆ ದೂರು ನೀಡಿದ್ದರು. ರಾಜ್ಯಪಾಲರ ವಿರುದ್ಧ ಉತ್ತಮ ಕೆಲಸ ಒದಗಿಸುವ ಆಮಿಷವೊಡ್ಡಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪ ಮಾಡಿದ್ದರು. ತಮ್ಮ ಮೇಲೆ ನವದೆಹಲಿಯಲ್ಲಿ ರಾಜ್ಯಪಾಲರು 2023ರ ಜನವರಿಯಲ್ಲಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಒಡಿಸ್ಸಿ ನೃತ್ಯಪಟುವೊಬ್ಬರು 2023ರ ಅಕ್ಟೋಬರ್‌ನಲ್ಲಿ ಪೊಲೀಸರಿಗೆ ದೂರು ನೀಡಿದ್ದರು ಎಂಬುದನ್ನು ಮಹಿಳೆಯ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 20.07.2024

## 4. ರಾಯಧನ ಮೇಲೆ ರಾಜ್ಯದ್ದೇ ಹಕ್ಕು

ಖನಿಜಗಳನ್ನು ಹೊಂದಿರುವ ಭೂಮಿಯಲ್ಲಿ ಗಣಿಗಾರಿಕೆ ಹಾಗೂ ಸಂಬಂಧಿ ಚಟುವಟಿಕೆಗಳ ಮೇಲೆ ರಾಯಧನ ವಿಧಿಸುವ ರಾಜ್ಯ ಸರ್ಕಾರಗಳ ಹಕ್ಕನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಖನಿಜಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇದೆ ಎಂಬ ಕೇಂದ್ರ ಸರ್ಕಾರದ ಪ್ರತಿಪಾದನೆಯನ್ನು ತಳ್ಳಿಹಾಕಿದೆ. 9 ಸದಸ್ಯರ ವಿಸ್ತೃತ ಪೀಠ ಈ ಮಹತ್ವದ ತೀರ್ಪನ್ನು ನೀಡಿದೆ. 9 ರಲ್ಲಿ 8 ಸದಸ್ಯರು ಸಹಮತ ಅಭಿಪ್ರಾಯ ನೀಡಿದ್ದರೆ, ನ್ಯಾ.ಬಿ.ನಾಗರತ್ನ ಅವರು ಭಿನ್ನ ತೀರ್ಪು ನೀಡಿದ್ದಾರೆ.

ಸುಪ್ರೀಂಕೋರ್ಟ್‌ನ ಈ ತೀರ್ಪಿನಿಂದ ಒಡಿಶಾ, ಜಾರ್ಖಂಡ್, ಬಂಗಾಳ ಛತ್ತೀಸ್‌ಗಡ, ಮಧ್ಯಪ್ರದೇಶ ಮತ್ತು ರಾಜಸ್ಥಾನದಂತಹ ಖನಿಜ ಸಮೃದ್ಧ ರಾಜ್ಯಗಳಿಗೆ ಅನುಕೂಲವಾಗಲಿದೆ. ಈ ಸರ್ಕಾರಗಳು ತಮ್ಮ ರಾಜ್ಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಗಣಿ ಕಂಪನಿಗಳ ಮೇಲೆ ಹೆಚ್ಚುವರಿ ಸುಂಕವನ್ನು ವಿಧಿಸಬಹುದಾಗಿದೆ.

ರಾಯಧನವು ತೆರಿಗೆಗೆ ಸಮಾನವಲ್ಲ ಎಂದ ಸುಪ್ರೀಂ ಕೋರ್ಟ್, ರಾಯಧನ ಎನ್ನುವುದು ಗುತ್ತಿಗೆ ನೀಡುವವನಿಗೆ ಗುತ್ತಿಗೆದಾರ ಪಾವತಿಸುವ ಗುತ್ತಿಗೆ ಹಣವಾಗಿದ್ದು, ಇದರ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ಸಂಸತ್ತು ಹೊಂದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ರಾಯಧನ ಮತ್ತು ಸಾಲದ ಬಾಡಿಗೆ ಎರಡೂ ತೆರಿಗೆಯ ಅಂಶಗಳನ್ನು ಪೂರೈಸುವುದಿಲ್ಲ ಎಂದು ನಾವು ಭಾವಿಸುತ್ತೇವೆ ಎಂದು ಸಿಜೆಐ ನೇತೃತ್ವದ ನ್ಯಾಯಪೀಠ ಹೇಳಿದೆ. ಗಣಿ ಮತ್ತು ಖನಿಜಗಳ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆಯಲ್ಲಿ ಖನಿಜಗಳ ಮೇಲೆ ತೆರಿಗೆ ವಿಧಿಸಲು ರಾಜ್ಯದ ಮೇಲೆ ಮಿತಿಗಳನ್ನು ಹೇರುವ ಯಾವುದೇ ನಿಬಂಧನೆ ಇಲ್ಲ ಎಂದು ವಿಸ್ತೃತ ನ್ಯಾಯಪೀಠ ಹೇಳಿರುವ ಮಧ್ಯ ಖನಿಜ ಹಕ್ಕುಗಳ ಮೇಲೆ ತೆರಿಗೆ ವಿಧಿಸಲು ರಾಜ್ಯಗಳಿಗೆ ಅವಕಾಶ ನೀಡುವುದರಿಂದ, ಆದಾಯ ಪಡೆಯಲು ರಾಜ್ಯಗಳ ನಡುವೆ ಅನಾರೋಗ್ಯಕರ ಪೈಪೋಟಿ ಸೃಷ್ಟಿಯಾಗಲಿದೆ.

ರಾಷ್ಟ್ರೀಯ ಮಾರುಕಟ್ಟೆಯನ್ನೂ ಅದು ಹಾಳು ಮಾಡಬಹುದು. ಇದು ಖನಿಜ ಅಭಿವೃದ್ಧಿಯ ದೃಷ್ಟಿಯಿಂದ ನೋಡಿದರೆ ಇದು ಒಕ್ಕೂಟ ವ್ಯವಸ್ಥೆಯ ವಿಘಟನೆಗೆ ಕಾರಣವಾಗುತ್ತದೆ ಎಂದು ನ್ಯಾ. ನಾಗರತ್ನ ತಮ್ಮ ತೀರ್ಪಿನಲ್ಲಿ ದಾಖಲಿಸಿದ್ದಾರೆ.

**ಆಧಾರ**: ವಿಜಯವಾಣಿ, ದಿನಾಂಕ: 26.07.2024

## 5. ಕೆನೆಪದರ ಗುರುತಿಸಿ ಮೀಸಲಿಂದ ದೂರವಿಡಿ

ಪರಿಶಿಷ್ಟ ಜಾತಿ/ಪಂಗಡಗಳಲ್ಲಿ ಕೆನೆಪದರದ ಅಡಿಯಲ್ಲಿ ಬರುವ ಜಾತಿಗಳನ್ನು ಗುರುತಿಸಿ, ಅವುಗಳನ್ನು ಮೀಸಲಾತಿ ಪ್ರಯೋಜನದಿಂದ ದೂರವಿಡಬೇಕು ಎಂಬ ಅತ್ಯಂತ ಕ್ರಾಂತಿಕಾರಕ ತೀರ್ಪನ್ನು ಸುಪ್ರೀಂಕೋರ್ಟ್ ನೀಡಿದೆ. ನಾಲ್ವರು ನ್ಯಾಯಮೂರ್ತಿಗಳು ಎಸ್.ಸಿ/ಎಸ್.ಟಿ ಗಳಲ್ಲಿನ ಕೆನೆಪದರ ಗುರುತಿಸುವಿಕೆಗೆ ಸೂಚನೆ ನೀಡಿದ್ದಾರೆ. ಈ ಕ್ರಮದಿಂದಾಗಿ ಮೀಸಲಾತಿಯ ಪ್ರಯೋಜನಗಳು ಎಸ್ಸಿ/ಎಸ್ಟಿ ಸಮುದಾಯಗಳಲ್ಲಿ ನೈಜವಾಗಿ ಹಿಂದುಳಿದವರಿಗೆ ಮಾತ್ರ ಲಭ್ಯವಾಗಲಿದೆ.

ಮೀಸಲಾತಿಯ ಅಂತಿಮ ಗುರಿ ದೇಶದಲ್ಲಿ ನಿಜವಾದ ಸಮಾನತೆ ತಂದುಕೊಡುವುದಾಗಿದೆ. ಎಸ್‌ಸಿ/ಎಸ್‌ಟಿಗಳಲ್ಲಿ ಕೆನೆಪದರ ಗುರುತಿಸಬೇಕು ಮತ್ತು ಅವುಗಳನ್ನು ಮೀಸಲಾತಿಯ ಪ್ರಯೋಜನಗಳಿಂದ ಹೊರಗಿಡಬೇಕು ಎಂದು ನ್ಯಾ. ಬಿ.ಆರ್.ಗವಾಯಿ ಬರೆದ ತೀರ್ಪಿಗೆ ಇತರೆ ಮೂವರು ನ್ಯಾಯಮೂರ್ತಿಗಳು ಸಹಮತ ನೀಡಿದ್ದಾರೆ.

ರಾಜ್ಯಗಳು ಎಸ್‌ಸಿ/ಎಸ್‌ಟಿ ವರ್ಗದಲ್ಲಿ ಕೆನೆಪದರ ಗುರುತಿಸಲು ಮತ್ತು ಅವರನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರತೆಗೆಯಲು ಸಮರ್ಥ ನೀತಿ ರೂಪಿಸಬೇಕು ಎಂದು ನ್ಯಾ.ಗವಾಯಿ ಅಭಿಪ್ರಾಯಪಟ್ಟಿದ್ದಾರೆ. ಒಬಿಸಿಗಳಿಗೆ (ಇತರೆ ಹಿಂದುಳಿದ ವರ್ಗ) ಅನ್ವಯವಾಗುವ ಕೆನೆ ಪದರದ ತತ್ವ ಪರಿಶಿಷ್ಟ ಜಾತಿಗಳಿಗೂ ಅನ್ವಯಿಸಬೇಕು. ಆದರೆ ಎಸ್‌ಸಿಗಳ ಕೆನೆ ಪದರ ಗುರುತಿಸಿ, ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡುವ ಮಾನದಂಡಗಳು ಒಬಿಸಿಗಳಿಗೆ ಅನ್ವಯಿಸುವುದಕ್ಕಿಂತ ಭಿನ್ನವಾಗಿರಬೇಕು ಎಂದು ನ್ಯಾಯಮೂರ್ತಿ ವಿಕ್ರಮ್‌ನಾಥ್ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

ನ್ಯಾ.ಪಂಕಜ್ ಮಿಥಲ್ ಕೂಡ ಈ ಅಭಿಪ್ರಾಯಗಳಿಗೆ ಬೆಂಬಲಿಸಿ, ಮೀಸಲಾತಿಯನ್ನು ಒಂದು ವರ್ಗ/ಜಾತಿಯ ಮೊದಲ ಪೀಳಿಗೆಗೆ ಮಾತ್ರ ಮೀಸಲಿಡಬೇಕು. ಎರಡನೇ ತಲೆಮಾರಿಗೂ ಮೀಸಲಾತಿ ಪ್ರಯೋಜನಗಳನ್ನು ವಿಸ್ತರಿಸುವುದು ಯೋಗ್ಯವಲ್ಲ. ಮೊದಲ ತಲೆಮಾರಿನ ಮೀಸಲಾತಿ ನಂತರ ಎರಡನೇ ಪೀಳಿಗೆಯು ಸಾಮಾನ್ಯ ವರ್ಗಕ್ಕೆ ಸಮನಾಗಿ ಬೆಳೆದು ನಿಲ್ಲುವಂತೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ಅಭಿಪ್ರಾಯ ಹೊರಹಾಕಿದ್ದಾರೆ. ಎಸ್‌ಸಿ/ಎಸ್‌ಟಿಗಳಲ್ಲಿ ಕೆನೆಪದರ ಗುರುತಿಸುವುದು ಸಾಂವಿಧಾನಿಕ ಅನಿವಾರ್ಯತೆಯಾಗಬೇಕು ಎಂದು ನ್ಯಾ.ಸತೀಶ್ ಚಂದ್ರ ಶರ್ಮಾ ಹೇಳಿದ್ದಾರೆ. ಪೀಠದಲ್ಲಿದ್ದ ಇಬ್ಬರು ನ್ಯಾಯಮೂರ್ತಿಗಳಾದ ಸಿಜೆಐ ಡಿ.ವೈ.ಚಂದ್ರಚೂಡ್ ಮತ್ತು ನ್ಯಾ. ಮನೋಜ್ ಮಿಶ್ರಾ ಈ ವಿಷಯದಲ್ಲಿ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲಿಲ್ಲ.

**ಆಧಾರ**: ವಿಜಯವಾಣಿ, ದಿನಾಂಕ: 02.08.2024

## 6. ಚುನಾವಣಾ ಬಾಂಡ್: ಸುಪ್ರೀಂನಲ್ಲಿ ಅರ್ಜಿ ವಜಾ

ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳು ಮತ್ತು ಕಾರ್ಪೋರೇಟ್ ಸಂಸ್ಥೆಗಳ ನಡುವೆ ಕೊಡು–ಕೊಳ್ಳುವಿಕೆ ನಡೆದಿರುವ ಕುರಿತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಚುನಾವಣಾ ಬಾಂಡ್‌ಗಳ ಖರೀದಿಗೆ ಸಂಬಂಧಿಸಿದಂತೆ ಊಹಾಪೋಹದ ಆಧಾರದ ಮೇಲೆ ತನಿಖೆಗೆ ಆದೇಶಿಸಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಾಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠ ಹೇಳಿತು. ಸ್ವಯಂ ಸೇವಾ ಸಂಘಟನೆಗಳಾದ ಕಾಮನ್ ಕಾಸ್ ಮತ್ತು ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ (ಸಿಪಿಐಎಲ್) ಹಾಗೂ ಜೈಪ್ರಕಾಶ್ ಶರ್ಮಾ, ಸುದೀಪ್ ತಮಾಂಕರ್, ಡಾ.ಖೇಮ್ ಸಿಂಗ್ ಭಾಟಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು. ಚುನಾವಣಾ ಬಾಂಡ್‌ಗಳ ವಿಚಾರದಲ್ಲಿ ರಾಜಕೀಯ ಪಕ್ಷಗಳು, ವಿವಿಧ ಕಾರ್ಪೋರೇಟ್ ಸಂಸ್ಥೆಗಳು ಹಾಗೂ ತನಿಖಾ ಸಂಸ್ಥೆಗಳ ನಡುವೆ ಕೊಡು– ಕೊಳ್ಳುವಿಕೆ ವ್ಯವಹಾರ ನಡೆದಿರಬಹುದು ಎಂದು ಅರ್ಜಿಯಲ್ಲಿ ದೂರಲಾಗಿತ್ತು.

ಕೊಡು–ಕೊಳ್ಳುವಿಕೆ ವ್ಯವಹಾರದ ಆರೋಪಗಳನ್ನು ಮಾಡಿರುವ ವೈಯಕ್ತಿಕ ದೂರುಗಳಿಗೆ ಕಾನೂನಿನಡಿ ಪರಿಹಾರ ಕಂಡುಕೊಳ್ಳಬೇಕು ಎಂದು ಪೀಠ ಹೇಳಿತು. ನ್ಯಾಯಾಂಗ ಪರಿಶೀಲನೆಯ ಅಂಶಗಳು ಇದ್ದಿದ್ದರಿಂದ ಚುನಾವಣಾ ಬಾಂಡ್‌ಗಳನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಲಯವು ಪರಿಗಣಿಸಿತ್ತು ಎಂದಿತು.

ಆದರೆ ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣಗಳಿಗೆ ಕಾನೂನಿನಡಿ ಪರಿಹಾರಗಳು ಇರುವಾಗ ಅದನ್ನು ಸಂವಿಧಾನದ 32ನೇ ವಿಧಿಯಡಿ ತರಬಾರದು ಎಂದು ಹೇಳಿತು.

ತಮ್ಮ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ನೇರವಾಗಿ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರುವ ಅಧಿಕಾರವನ್ನು ಸಂವಿಧಾನದ 32ನೇ ವಿಧಿಯು ಜನರಿಗೆ ನೀಡುತ್ತದೆ. ಎನ್‌ಜಿಒ ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಚುನಾವಣಾ ಬಾಂಡ್‌ಗಳನ್ನು ಖರೀದಿಸಿದ ಕಂಪನಿಯೊಂದು ಅದಕ್ಕೆ ಬದಲಾಗಿ ಕಾಮಗಾರಿಯ ಗುತ್ತಿಗೆ ಪಡೆದುಕೊಂಡ ಉದಾಹರಣೆ ಇದೆ ಎಂದು ವಾದಿಸಿದರು.

ರಾಜಕೀಯ ಪಕ್ಷಗಳು ಮತ್ತು ಕಂಪನಿಗಳ ನಡುವಿನ ಒಪ್ಪಂದದಲ್ಲಿ ತನಿಖಾ ಸಂಸ್ಥೆಗಳ ಕೆಲವು ಅಧಿಕಾರಿಗಳೂ ಭಾಗಿಯಾಗಿರುವ ಸಾಧ್ಯತೆ ಇರುವುದರಿಂದ ಇಂತಹ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸುವುದಾದರೂ ಹೇಗೆ ಎಂದು ನ್ಯಾಯಪೀಠವನ್ನು ಪ್ರಶ್ನಿಸಿದರು.

ಅದಕ್ಕೆ ಪೀಠ, ಕೊಡು–ಕೊಳ್ಳುವಿಕೆ ಆರೋಪಗಳಿಗೆ ಸಂಬಂಧಿಸಿದಂತೆ ಏನಾದರೂ ಪುರಾವೆಗಳಿವೆಯೇ ಎಂದು ಕೇಳಿತು. ಪ್ರಶಾಂತ್ ಭೂಷಣ್ ಅವರು, ಸತ್ಯವನ್ನು ಬಹಿರಂಗಪಡಿಸಿದರೆ ಭವಿಷ್ಯದಲ್ಲಿ ತಮ್ಮನ್ನು ಕಪ್ಪುಪಟ್ಟಿಗೆ ಸೇರಿಸಬಹುದು ಎಂಬ ಭಯದಿಂದ ಪ್ರತಿಸ್ಪರ್ಧಿ ಕಂಪನಿಗಳು ಈ ವಿಷಯದ ಕುರಿತು ಮಾತನಾಡುತ್ತಿಲ್ಲ ಎಂದು ಹೇಳಿದರು.

ಎಸ್‌ಐಟಿ ರಚಿಸುವುದು ಮಾತ್ರ ಇದಕ್ಕೆ ಉತ್ತರವಲ್ಲ. ಈ ಆರೋಪಗಳಿಗೆ ಕಾನೂನಿನಲ್ಲಿ ಪರಿಹಾರಗಳು ಲಭ್ಯವಿರುವಾಗ ನ್ಯಾಯಾಲಯ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ ಎಂದು ಹೇಳಿ ಪೀಠ ಅರ್ಜಿಗಳನ್ನು ತಿರಸ್ಕರಿಸಿತು. ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಪಡೆದಿರುವ ದೇಣಿಗೆಯನ್ನು ವಾಪಸ್ ಮಾಡಲು ಮತ್ತು ಅವರ ಆದಾಯ ತೆರಿಗೆ ಮೌಲ್ಯ ಮಾಪನವನ್ನು ಪುನರಾರಂಭಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಅರ್ಜಿದಾರರು ಮಾಡಿದ ಮನವಿಯನ್ನೂ ಸುಪ್ರೀಂ ಕೋರ್ಟ್ ತಳ್ಳಿಹಾಕಿತು.

**ಆಧಾರ**: ಪ್ರಜಾವಾಣಿ, ದಿನಾಂಕ: 03.08.2024

## 7. ಕನ್ನಡಿಗರಿಗೆ ಮೀಸಲು ಪ್ರಶ್ನಿಸಿದ್ದ ಅರ್ಜಿ ವಜಾ

ಕರ್ನಾಟಕದಲ್ಲಿ ಕೈಗಾರಿಕೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳ ಉದ್ಯೋಗಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ (ಕನ್ನಡಿಗರಿಗೆ) ಮೀಸಲು ಕಲ್ಪಿಸುವ ಉದ್ದೇಶಿತ ಮಸೂದೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ನಗರದ ಬಿಳೇಕಹಳ್ಳಿಯ ಲೆಕ್ಕ ಪರಿಶೋಧಕಿ ಡಾ.ಆರ್. ಅಮೃತಲಕ್ಷ್ಮಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಜೆ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ, ಹರಿಯಾಣ ಸರಕಾರ ರೂಪಿಸಿದ್ದ ಕಾಯಿದೆ ಆಧರಿಸಿ ಅರ್ಜಿದಾರರು ಈ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಹರಿಯಾಣ ಸರಕಾರವು ತನ್ನ ರಾಜ್ಯದ ಖಾಸಗಿ ವಲಯದಲ್ಲಿ ಸ್ಥಳೀಯರಿಗೆ ಮೀಸಲು ಕಲ್ಪಿಸಿ ಶಾಸನಾತ್ಮಕವಾದ ಕಾಯಿದೆ ರೂಪಿಸಿತ್ತು. ಕರ್ನಾಟಕದಲ್ಲಿ ಅರ್ಜಿದಾರರು ಆಕ್ಷೇಪಿಸಿರುವ ವಿಧೇಯಕ ಜಾರಿಗೆ ಬಂದಿಲ್ಲ. ವಿಧೇಯಕ ಸದ್ಯ ಕರಡು ಸ್ವರೂಪದಲ್ಲಿದ್ದು, ಕಾನೂನಿನ ಮಾನ್ಯತೆ ಪಡೆದುಕೊಂಡಿಲ್ಲ ಆದ್ದರಿಂದ ವಿಧೇಯಕವು ಕಾನೂನಿನ ಗುಣಲಕ್ಷಣ ಹೊಂದಿರುವುದಾಗಿ ನ್ಯಾಯಾಲಯ ಭಾವಿಸಲಾಗದು ಎಂದು ಅಭಿಪ್ರಾಯಪಟ್ಟಿತು.

ಅಲ್ಲದೆ ಅರ್ಜಿ ಅಪಕ್ವವಾಗಿರುವ ಕಾರಣ ಮೆರಿಟ್ ಮೇಲೆ ವಿಚಾರಣೆ ನಡೆಸದೆ ಮತ್ತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೆ ಅರ್ಜಿ ವಜಾಗೊಳಿಸಲಾಗುತ್ತಿದೆ ಎಂದು ನ್ಯಾಯಪೀಠ ಆದೇಶಿಸಿತು.

ಅರ್ಜಿದಾರರ ಪರ ವಕೀಲರು ಕರ್ನಾಟಕ ಕೈಗಾರಿಕೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗಗಳಲ್ಲಿ ಮೀಸಲು ಕಲ್ಪಿಸಿದ ವಿಧೇಯಕ ಕುರಿತು 2024 ಜುಲೈ.11 ರಂದು ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದೆ. ಈ ವಿಧೇಯಕಕ್ಕೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿರುವ ಬಗ್ಗೆ  ದಿನಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿದೆ. ಈ ವಿಧೇಯಕವನ್ನು ಪ್ರಶ್ನಿಸಿ ಜುಲೈ 19 ರಂದು ಈ ಅರ್ಜಿ ಸಲ್ಲಿಸಲಾಗಿದೆ ಎಂದು ವಿವರಿಸಿದರು.

ಸರ್ಕಾರಿ ವಕೀಲರು, ಅರ್ಜಿದಾರರು ವೃತ್ತಿಯಲ್ಲಿ ಲೆಕ್ಕಪರಿಶೋಧಕರಾಗಿದ್ದಾರೆ. ನೀತಿ ಆಯೋಗದ ಪ್ರಾದೇಶಿಕ ಮೆಂಟರ್ ಆಗಿದ್ದಾರೆ ಅರ್ಜಿಯಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ. ಖಾಸಗಿ ಹಿತಾಸಕ್ತಿಯಿಂದ ಅರ್ಜಿ ಸಲ್ಲಿಸಿದ್ದಾರೆ, ಎಂದು ಆಗ ನ್ಯಾಯಾಲಯ ಅರ್ಜಿದಾರರಿಗೆ ಐದು ಸಾವಿರ ರೂ. ದಂಡ ವಿಧಿಸಿತ್ತು.

**ಆಧಾರ**: ವಿಜಯ ಕರ್ನಾಟಕ, ದಿನಾಂಕ:07.08.2024

## 8. ಭಾಷಾ ದೋಷದಿಂದ ಶಾಸನದ ಉದ್ದೇಶ ವಿಫಲ

ಭಾಷಾ ದೋಷವು ಶಾಸನದ ಉದ್ದೇಶವನ್ನೇ ವಿಫಲಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಶಾಸನ ರಚನಾ ಪ್ರಕ್ರಿಯೆಯನ್ನು ಅತ್ಯಂತ ಸೂಕ್ಷ್ಮ, ಎಚ್ಚರ ಹಾಗೂ ಪರಿಣಿತಿಯೊಂದಿಗೆ ಕೈಗೊಳ್ಳಬೇಕು ಎಂದು ಹೇಳಿದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (ಕೆಲವೊಂದು ಭೂಮಿಯ ವರ್ಗಾವಣೆ ನಿಷೇಧ) ಕಾಯಿದೆ 1978ಕ್ಕೆ 2023ರ ಜುಲೈನಲ್ಲಿ ಮಾಡಿರುವ ತಿದ್ದುಪಡಿ ಕುರಿತು ಪರಿಶೀಲನೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾ. ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ಪೀಠ, ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಭೂಮಿ ಮರುಸ್ಥಾಪನೆಗೆ ನಿರಾಕರಿಸಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ದಾವಣಗೆರೆಯ ಗೌರಮ್ಮ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ನ್ಯಾಯಾಲಯ "ಕಾನೂನು ಭಾಷೆಯ ಮೂಲಕ ಮಾತನಾಡುತ್ತದೆ. ಭಾಷೆಯನ್ನು ಸರಿಯಾಗಿ ಬಳಕೆ ಮಾಡದೇ ಇದ್ದರೆ ಏನು ಮಾಡಬೇಕೋ ಅದು ಆಗುವುದಿಲ್ಲ. ಯಾವುದನ್ನು ಮಾಡಬಾರದು ಅದು ಆಗುತ್ತದೆ. ಆ ರೀತಿ ಭಾಷಾ ದೋಷವಾದಾಗ ಶಾಸನದ ಉದ್ದೇಶಕ್ಕೆ ಸೋಲಾಗುತ್ತದೆ" ಎಂದು ಹೇಳಿದೆ.

ಅಲ್ಲದೆ, ಏಕಸದಸ್ಯ ಪೀಠದ ಆದೇಶ ಎತ್ತಿಹಿಡಿದಿರುವ ವಿಭಾಗೀಯ ಪೀಠ, "ಮೊದಲಿಗೆ ಭೂಮಿಯನ್ನು ಕಾಯಿದೆಯಡಿ ಮಂಜೂರು ಮಾಡಿಲ್ಲ. ತಿದ್ದುಪಡಿಯಲ್ಲಿ ಸೆಕ್ಷನ್ 5(1) ರಡಿಯಲ್ಲಿ (ಸಿ) ಮತ್ತು (ಡಿ) ಕ್ಲಾಸ್‌ಗಳನ್ನು ಸೇರಿಸಲಾಗಿದೆ. ಅದರಂತೆ, ಇತರೆ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಕಾಯಿದೆಯ ನಿಭಂದನೆಗಳನ್ನು ಅನ್ವಯಿಸಲು ಸಮಯದ ಮಿತಿ ಇರುವುದಿಲ್ಲವೆಂದು ತಿಳಿಸಲಾಗಿದೆ" ಎಂದು ಹೇಳಿದೆ.

"1978ರ ಕಾಯಿದೆ ಪ್ರಕಾರ ಮಂಜೂರಾಗಿದ್ದ ಭೂಮಿಯನ್ನು ಪರಭಾರೆ ಮಾಡಿದ್ದರೂ ಯಾವುದೇ ಸಮಯದ ಮಿತಿ ಇಲ್ಲದೆ ಭೂಮಿ ಮರು ಸ್ಥಾಪನೆಗೆ ಅರ್ಜಿ ಸಲ್ಲಿಸಬಹುದು. ಆದರೆ, ತಿದ್ದುಪಡಿ ಕಾಯಿದೆ ಪೂರ್ವಾನ್ವಯವಾಗುವಂತೆ ಮಾಡಲಾಗಿದೆ. ಹಾಲಿ ಆ ಕಾನೂನು ಇದ್ದರೂ ಮತ್ತೆ ಇನ್ನೊಂದು ಅಂಶವಾಗಿ ಸೇರಿಸಿರುವುದು ಡೂಪ್ಲಿಕೇಷನ್ ಅಷ್ಟೇ" ಎಂದು ನ್ಯಾಯಪೀಠ ತಿಳಿಸಿದೆ.

**ಆಧಾರ**: ಉದಯವಾಣಿ, ದಿನಾಂಕ:09.07.2024

## 9. ದಿನಗೂಲಿ ನೌಕರರ ಸೇವೆ ಖಾಯಂ ಮಾಡಿ

ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯಲ್ಲಿ ಮಂಜೂರಾಗದ ಹುದ್ದೆಗಳಿಗೆ 10 ವರ್ಷಕ್ಕೊಮ್ಮೆ ಹೆಚ್ಚು ಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿದವರು ಕಾಯಂ ಸೇವೆ ಅರ್ಹರು ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಅರ್ಜಿದಾರರನ್ನು ಮೂರು ತಿಂಗಳಲ್ಲಿ ಸೂಕ್ತ ಹುದ್ದೆಗಳಿಗೆ ನೇಮಕ ಮಾಡಿ ಆದೇಶ ಹೊರಡಿಸಬೇಕು ಎಂದು ಸರಕಾರಕ್ಕೆ ನಿರ್ದೇಶನ ನೀಡಿದೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕಡಕೋಳದ ಶಾಂತಲಕ್ಷ್ಮಿ ಹಾಗೂ 30ಕ್ಕೂ ಅಧಿಕ ಮಂದಿ ಸಲ್ಲಿಸಿದ್ದ ಅರ್ಜಿಗಳನ್ನು ಆಲಿಸಿದ ನ್ಯಾ. ಬಿ.ಎಂ ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ಪೀಠ ಈ ತೀರ್ಪು ಕೊಟ್ಟಿದೆ.

ಅರ್ಜಿಗಳನ್ನು ಮಾನ್ಯ ಮಾಡಿರುವ ನ್ಯಾಯಾಲಯ, ಇಲಾಖೆಗಳು ಅರ್ಜಿದಾರರು ಸೇವೆ ಕಾಯಂಗೆ ಅರ್ಹರಲ್ಲವೆಂದು 2010ರ ಜೂನ್ 14 ಮತ್ತು 2012 ಜೂನ್ 15ರಂದು ನೀಡಿದ್ದ ಹಿಂಬರಹಗಳನ್ನು ರದ್ದುಗೊಳಿಸಿದೆ. ಅರ್ಜಿದಾರರು 2002/2005ರ ನಿಯಮಗಳಂತೆ ಕಾಯಂ ಸೇವೆಗೆ ಅರ್ಹರು ಎಂದು ಘೋಷಿಸಿದೆ.

ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ, "ಈ ಪ್ರಕರಣದಲ್ಲಿ 2022/2005ರ ಯೋಜನೆಗಳಂತೆ ಅರ್ಜಿದಾರರು ಸೇವೆ ಖಾಯಂಗೆ ಅರ್ಹರಾಗಿದ್ದಾರೆ. ಅವರ ಸೇವೆ ಖಾಯಂಗೊಂಡಿದ್ದು, ಅವರ ಕೆಲಸದ ಸ್ವರೂಪ ಮತ್ತು ಸೇವೆ ಮುಂದುವರಿಕೆ ಬಗ್ಗೆ ನಿರ್ಧರಿಸಬೇಕಿದೆ. ಅರ್ಜಿದಾರರನ್ನು ಇತರೆ ಸಿಬ್ಬಂದಿಯಂತೆ ಸಮಾನವಾಗಿ ಕಾಣಬೇಕಿದೆ" ಎಂದು ಆದೇಶಿಸಿದೆ.

ಒಂದೇ ಬಗೆಯ ಉದ್ಯೋಗ ಮಾಡುವವರನ್ನು ಭಿನ್ನ ರೀತಿಯಲ್ಲಿ ನೋಡಲಾಗದು. ಅರ್ಜಿದಾರರು 10 ವರ್ಷಗಳಿಗೂ ಅಧಿಕ ಕಾಲ ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿದ್ದಾರೆ. ಅವರನ್ನು ಹಂಗಾಮಿ ನೌಕರರಾಗಿಯೇ ಮುಂದುವರಿಸಲಾಗದು. ಅವರಿಗೆ ಅರ್ಹ ವೇತನ/ಭತ್ಯೆಗಳನ್ನು ನೀಡಬೇಕಾಗುತ್ತದೆ ಹಾಗಾಗಿ, ಉಮಾದೇವಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಂತೆ ಸೇವೆ ಖಾಯಂಗೆ ಅರ್ಹರು ಎಂದು ಆದೇಶದಲ್ಲಿ ವಿವರಿಸಿದೆ.

ನ್ಯಾಯಾಲಯಗಳ ಆದೇಶದಿಂದಾಗಿ ಅರ್ಜಿದಾರರನ್ನು 10 ವರ್ಷಕ್ಕೂ ಅಧಿಕ ಖಾಯಂ ದಿನಗೂಲಿ ಸೇವೆಯಲ್ಲಿ ಮುಂದುವರಿಸಲಾಗಿದೆ. ಹಾಗಾಗಿ ಅವರು ಸೇವೆ ಖಾಯಂಗೆ ಅನರ್ಹರು ಎಂಬ ರಾಜ್ಯ ಸರಕಾರದ ವಾದವನ್ನು ನ್ಯಾಯಲಯ ಸಂಪೂರ್ಣವಾಗಿ ತಳ್ಳಿಹಾಕಿದೆ.

**ಆಧಾರ**: ವಿಜಯ ಕರ್ನಾಟಕ, ದಿನಾಂಕ: 18.08.2024

## 10. Be cautious while entertaining plea on public exams, SC tells courts

The Supreme Court said courts must be circumspect in entertaining an individual grievance relating to a public examination since it delays finalization of result, seriously prejudicing larger public interest.

A bench of Chief Justice of India D Y Chandrachud and justices J. B. Pardiwala and Manoj Misra rejected a contention by Talluri Srikar that the National Testing Agency should be directed to give him chance to reappear in NEET- UG 2024 as he was not allowed to carry handkerchief during the examination.

He claimed he suffered from a medical condition called 'hyperhidrosis' of palms and soles. So, he required a piece of cloth, such as a handkerchief to wipe off the sweat.

The candidate claimed he was barred from carrying a handkerchief which affected his performance, so he must be given a chance as was done in the case of 1,563 candidates due to distribution of wrong set of question papers.

The court, however, said answers in the NEET-UG were to be given by darkening blank circles on the OMR sheet, In such a case, the use of a pen or a pencil is much less than where answers are to be written.

Hence, the view Taken by the high court that denial of permission to take a handkerchief inside the examination hall would not have materially affected petitioner's performance, as he could have rubbed his palms on his clothes, is a plausible view, the bench said.

The Telangana High Court had dismissed the writ petition by the candidate, saying even if it was assumed that the petitioner was wrongly denied permission to carry a handkerchief, it would not have materially affected his performance in the examination as sweat on palms could easily be wiped off on the clothes worn by a person.

The top court thus also said it was not a fit case for interference. The court also said the case of the petitioner is distinguishable from those 1,563 candidates for whom re-examination was conducted because of loss of examination time on account of delay in distribution of correct question paper.

**Courtesy:** Deccan Herald, Dated:14.09.2024

# ಭಾಗ–07

# ಹೊರ ರಾಜ್ಯ ಸುದ್ದಿಗಳು

## 1. SIDDU SEEKING CENTRE’S NOD FOR KALASA-BANDURI IRKS GOANS

Chief Minister Siddaramaiah’s request to Prime Minister Narendra Modi in New Delhi for the Centre’s green signal to implement the Kalasa- Banduri project has not gone down well with opposition parties and environmental lists in BJP ruled Goa.

While claiming that the project poses threat to wildlife and environment, opposition parties in Goa have appealed to their government to put pressure on the PM not to allow Karnataka to go ahead with the project till the case pertaining to it is resolved in the Supreme Court.

After his meeting with the PM, Siddaramaiah took to X, saying that he urged the PM to direct the Ministry of Environment, Forest and Climate Change to accord the needed environment and forest clearances to the state as the implementation of the project (by diverting water from Goa’s Mandovi river), a dream for people of Kittur-Karnataka region would help tide over the water crisis  the region.

**Courtesy:** Deccan Herald, Dated: 02.07.2024

## 2. ಗೋವಾ ಅಧಿವೇಶನದಲ್ಲಿ ಮಹದಾಯಿ ಪ್ರಸ್ತಾಪ

ಮಹದಾಯಿ ವಿಚಾರವಾಗಿ ಗೋವಾ ವಿಧಾನಸಭೆ ಅಧಿವೇಶನದಲ್ಲಿ ಸರ್ಕಾರದ ವೈಫಲ್ಯದ ಕುರಿತು ವಿಷಯ ಪ್ರಸ್ತಾಪಿಸುವುದಾಗಿ ಪ್ರತಿಪಕ್ಷದ ಶಾಸಕರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಗೋವಾ ಬಿಜೆಪಿ ಸರ್ಕಾರದ ನಿಲುವಿನ ಕುರಿತು ಪ್ರತಿಪಕ್ಷಗಳು ಆರೋಪಗಳ ಸುರಿಮಳೆಗೈದಿವೆ.

ಮಹದಾಯಿ ವಿಷಯದ ಕುರಿತು ಗೋವಾ ಫಾರ್ವರ್ಡ್ ಪಕ್ಷದ ನಾಯಕ ವಿಜಯ್ ಸರ್ದೇಸಾಯಿ ಪಣಜಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಹದಾಯಿ ವಿಚಾರವಾಗಿ ಗೋವಾ ವಿಧಾನಸಭೆಯಲ್ಲಿ ಸದನ ಸಮಿತಿ ರಚನೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದೇವೆ. ಆದರೆ ಈ ಸಮಿತಿ ಒಂದೇ ಒಂದು ಸಭೆ ನಡೆಸಿದೆ. ಕೇಂದ್ರದಿಂದ ನೇಮಕಗೊಂಡ ಮಹದಾಯಿ ಪ್ರವಾಹ ಪ್ರಾಧಿಕಾರದ ಅಧಿಕಾರಿಗಳು ಈಗ ಮಳೆಗಾಲದಲ್ಲಿ ಮಹದಾಯಿ ನದಿ ಪ್ರದೇಶವನ್ನು ಪರಿಶೀಲಿಸಲು ಬರುತ್ತಿದ್ದಾರೆ.

ಮಹದಾಯಿ ನಿರ್ವಹಣೆ ಮಾಡಲು ಈ ಸರ್ಕಾರಕ್ಕೆ ಇಚ್ಛಾ ಶಕ್ತಿಯಿಲ್ಲ. ಇದರಿಂದಾಗಿ ನಾವು ಈ ಹೋರಾಟದಲ್ಲಿ ಸೋಲುತ್ತೇವೆ. ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್ ನೇತೃತ್ವದ ಸರ್ಕಾರ ಕರ್ನಾಟಕಕ್ಕೆ ಮಹದಾಯಿ ನದಿ ನೀರನ್ನು ಮಾರಾಟ ಮಾಡಲು ಹೊರಟಿದೆ, ಈ ಸರ್ಕಾರದ ಸುಳ್ಳು ಮುಂದುವರೆಸಲು ಬಿಡುವುದಿಲ್ಲ. ಈ ಕುರಿತು ಗೋವಾ ವಿಧಾನಸಭೆಯಲ್ಲಿ ಧ್ವನಿಯೆತ್ತುತ್ತೇವೆ ಎಂದು ವಿಜಯ್ ಸರ್ದೇಸಾಯಿ ನುಡಿದರು.

ಪ್ರತಿಪಕ್ಷದ ನಾಯಕ ಯೂರಿ ಅಲೆಮಾಂವ್, ಕಳಸಾ ಬಂಡೂರಿ ಯೋಜನೆಯ ಡಿಪಿಆರ್ ಹಿಂಪಡೆಯುವಂತೆ ಆಗ್ರಹಿಸಿದರು. ಸಾವಂತ್ ಸರ್ಕಾರ ಇನ್ನೂ ಪ್ರಧಾನಿ ನರೇಂದ್ರ ಮೋದಿಯವರ ಬಳಿಗೆ

ಸರ್ವಪಕ್ಷಗಳ ನಿಯೋಗ ಕಳುಹಿಸದಿರುವುದು ದುರಂತ. ಕರ್ನಾಟಕದ ಬಿಜೆಪಿಗೆ ರಾಜಕೀಯ ಲಾಭ ಮಾಡಿಕೊಡಲು ಗೋವಾ ಸರ್ಕಾರ ಮಹದಾಯಿ ಒಪ್ಪಂದ ಮಾಡಿಕೊಂಡಿದೆ ಎಂದು ಆರೋಪಿಸಿದರು.

ಶಾಸಕ ವೀರೇಶ್ ಬೋರಕರ್ ಪ್ರತಿಕ್ರಿಯಿಸಿ, ಮಹದಾಯಿ ನಮ್ಮ ಕೈ ತಪ್ಪುತ್ತಿದೆ. ಮಹದಾಯಿ ಉಳಿಸಲು ರಾಜ್ಯ ಸರ್ಕಾರದಿಂದ ಯಾವುದೇ ಪ್ರಯತ್ನ ನಡೆಯುತ್ತಿಲ್ಲ ಎಂದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 03.07.2024

## 3. ಮೇಘಾಲಯ ರಾಜ್ಯಪಾಲರಾಗಿ ಸಿ.ಎಚ್.ವಿಜಯಶಂಕರ್ ಶಪಥ

ಮೇಘಾಲಯದ ರಾಜ್ಯಪಾಲರಾಗಿ ಮೈಸೂರಿನ ಮಾಜಿ ಸಂಸದ ಸಿ.ಎಚ್. ವಿಜಯಶಂಕರ್ ಅವರು ಪ್ರಮಾಣವಚನ ಸ್ವೀಕರಿಸಿದರು. ಇಲ್ಲಿನ ರಾಜಭವನದ ದರ್ಬಾರ್ ಹಾಲ್‌ನಲ್ಲಿ ಮೇಘಾಲಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ವೈದ್ಯನಾಥನ್ ಪ್ರಮಾಣ ವಚನ ಬೋಧಿಸಿದರು. ಈ ವೇಳೆ ಮುಖ್ಯಮಂತ್ರಿ ಕಾನ್ರಾಡ್ ಕೆ.ಸಂಗ್ಮಾ ಉಪಸ್ಥಿತರಿದ್ದರು. ವಿಜಯಶಂಕರ್ ಅವರಿಗಿಂತ ಮುನ್ನ ಚೌಹಾಣ್ ಈಶಾನ್ಯ ರಾಜ್ಯದ ರಾಜ್ಯಪಾಲರಾಗಿದ್ದರು.

ಇತ್ತೀಚೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ವಿಜಯಶಂಕರ್ ಅವರನ್ನು ರಾಜ್ಯಪಾಲರಾಗಿ ನೇಮಿಸಿದ್ದರು. ವಿಜಯಶಂಕರ್ ಅವರು ಮೈಸೂರಿನಿಂದ ಎರಡು ಭಾರಿ ಸಂಸದಾಗಿ ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದರು.

**ಆಧಾರ**: ಕನ್ನಡಪ್ರಭ, ದಿನಾಂಕ:31.07.2024

## 4. ಅಕ್ರಮ ಮತಾಂತರಕ್ಕೆ ಇನ್ನು ಉ.ಪ್ರದೇಶದಲ್ಲಿ ಜೀವಾವಧಿ ಶಿಕ್ಷೆ

ಬಲವಂತ ಮತ್ತು ಅಕ್ರಮ ಮಾರ್ಗದ ಮೂಲಕ ಮತಾಂತರ ಮಾಡಿದ ಪ್ರಕರಣದಲ್ಲಿ ದೋಷಿಗಳಿಗೆ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ನೀಡುವ ತಿದ್ದುಪಡಿ ಮಸೂದೆಯನ್ನು ಉತ್ತರಪ್ರದೇಶದ ವಿಧಾನಸಭೆ ಅಂಗೀಕರಿಸಿದೆ.

ಈ ಹಿಂದಿನ ಕಾಯ್ದೆ ಅನ್ವಯ ಅಕ್ರಮ ಮತ್ತು ಬಲವಂತದ ಮತಾಂತರಕ್ಕೆ ಗರಿಷ್ಠ 10 ವರ್ಷ ಜೈಲು ಮತ್ತು 50 ಸಾವಿರ ರೂ.ದಂಡ ವಿಧಿಸಬಹುದಾಗಿತ್ತು. ಆದರೆ ಅಂಗೀಕರಿಸಲಾದ ಉತ್ತರಪ್ರದೇಶ ಕಾನೂನು ಬಾಹಿರ ಧಾರ್ಮಿಕ ಮತಾಂತರ ತಡೆ ನಿಷೇಧ (ತಿದ್ದುಪಡಿ) ಮಸೂದೆ 2024ರ ಅನ್ವಯ ಧಾರ್ಮಿಕವಾಗಿ ಮತಾಂತರದ ಉದ್ದೇಶದಿಂದ ಯಾವುದೇ ವ್ಯಕ್ತಿ ಬೆದರಿಕೆ ಹಾಕಿದರೆ, ದಾಳಿ ನಡೆಸಿದರೆ, ವಿವಾಹವಾದರೆ ಅಥವಾ ಮದುವೆಯಾಗುವ ಭರವಸೆ ನೀಡಿದರೆ ಅಥವಾ ಅದಕ್ಕೆ ಸಂಚು ರೂಪಿಸಿದರೆ ಅಂಥ ಪ್ರಕರಣಗಳನ್ನು ಅತ್ಯಂತ ಗಂಭೀರ ಎಂದು ಪರಿಗಣಿಸಲಾಗುತ್ತದೆ. ಇಂಥ ಪ್ರಕರಣದ ದೋಷಿಗಳಿಗೆ 20 ವರ್ಷ ಜೈಲು ಅಥವಾ ಜೀವಾವಧಿ ಶಿಕ್ಷೆ ನೀಡಬಹುದಾಗಿದೆ.

ಜೊತೆಗೆ, ಮತಾಂತರ ಪ್ರಕರಣದ ಬಗ್ಗೆ ಇದೀಗ ಯಾರು ಬೇಕಾದರೂ ದೂರು ನೀಡಬಹುದಾಗಿರುತ್ತದೆ. ಈ ಹಿಂದೆ ಸಂತ್ರಸ್ತೆ ಅಥವಾ ಅವರ ಪೋಷಕರ ಸಮ್ಮುಖದಲ್ಲಿ ಮಾತ್ರವೇ ಯಾವುದೇ ವ್ಯಕ್ತಿ ದೂರು ನೀಡಬಹುದಾಗಿತ್ತು. ಅಲ್ಲದೆ ಹೊಸ ಕಾಯ್ದೆ ಅನ್ವಯ ಇಂಥ ಪ್ರಕರಣಗಳನ್ನು

ಸೆಷನ್ಸ್ ಕೋರ್ಟ್‌ಗಿಂತ ಕೆಳ ಹಂತದ ಯಾವುದೇ ಕೋರ್ಟ್‌ಗಳು ವಿಚಾರಣೆ ನಡೆಸುವಂತಿಲ್ಲ. ಜೊತೆಗೆ ಪಬ್ಲಿಕ್ ಪ್ರಾಸಿಕೂಟರ್ ವಾದವನ್ನು ಆಲಿಸದೇ ಆರೋಪಿಯ ಜಾಮೀನು ಅರ್ಜಿಯನ್ನು ಪರಿಗಣಿಸುವಂತಿಲ್ಲ. ಜೊತೆಗೆ ಇಂಥ ಎಲ್ಲಾ ಪ್ರಕರಣಗಳನ್ನು ಜಾಮೀನು ರಹಿತ ಎಂದು ಪರಿಗಣಿಸಲಾಗುವುದು.

**ಆಧಾರ**: ಕನ್ನಡ ಪ್ರಭ, ದಿನಾಂಕ:31.07.2024

## 5. ಕ್ಷಿಪ್ರಕ್ರಾಂತಿ ಬಾಂಗ್ಲಾ ಧಗಧಗ

ಮೀಸಲಾತಿ ಸಂಘರ್ಷದಿಂದ ಹೊತ್ತಿ ಉರಿಯುತ್ತಿರುವ ಬಾಂಗ್ಲಾದಲ್ಲಿ ಆಂತರಿಕ ದಂಗೆ ಭುಗಿಲೆದ್ದಿದೆ. ನಡೆದ ದಿಢೀರ್ ಬೆಳವಣಿಗೆಯಲ್ಲಿ ಲಕ್ಷಾಂತರ ಪದೆರಿ ಔಟನಾಕಾರರು ಪ್ರಧಾನಮಂತ್ರಿಗಳ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕಲು ಆಗಮಿಸಿದ ಕೆಲವೇ ಕ್ಷಣಗಳಲ್ಲಿ ಶೇಖ್ ಹಸೀನಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ ಭಾರತಕ್ಕೆ ಓಡಿ ಬಂದಿದ್ದಾರೆ. ಅತ್ತ ಪ್ರಧಾನಿ ನಿವಾಸಕ್ಕೆ ನುಗ್ಗಿದ ಪ್ರತಿಭಟನಾಕಾರರು, ಮನೆಯಲ್ಲಿರುವ ವಸ್ತುಗಳನ್ನೆಲ್ಲಾ ಲೂಟಿ ಮಾಡಿ ಬಿರಿಯಾನಿ ತಿಂದು ತೇಗಿದ್ದಾರೆ. ಆಡಳಿತ ಚುಕ್ಕಾಣಿಯನ್ನು ವಶಕ್ಕೆ ಪಡೆದಿರುವ ಬಾಂಗ್ಲಾ ಸೇನೆ, ಶೀಘ್ರ ಮಧ್ಯಂತರ ಸರ್ಕಾರ ರಚಿಸಿ ಶಾಂತಿ ಮರುಸ್ಥಾಪಿಸುವ ಘೋಷಣೆ ಹೊರಡಿಸಿದೆ.

ಬಾಂಗ್ಲಾದ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಕ್ಕೆ ಸರ್ಕಾರಿ ಉದ್ಯೋಗದಲ್ಲಿ ಶೇ.35 ಮೀಸಲಾತಿ ನೀಡುವ ಸರ್ಕಾರದ ನಿರ್ಧಾರದ ವಿರುದ್ಧ ಹೋರಾಟ ಭುಗಿಲೆದ್ದಿದೆ. ಸುಪ್ರಿಂಕೋರ್ಟ್ ಮೀಸಲಾತಿ ಪ್ರಮಾಣವನ್ನು ಶೇ.7ಕ್ಕೆ ತಗ್ಗಿಸಿದ ಬಳಿಕವೂ ಆಕ್ರೋಶ ತಣಿದಿಲ್ಲ. ಮತ್ತೆ ಭುಗಿಲೆದ್ದ ಹಿಂಸಾಚಾರದಲ್ಲಿ 93 ಜನರು ಬಲಿಯಾಗಿದ್ದರು. ಇದರಿಂದ ಮತ್ತಷ್ಟು ಆಕ್ರೋಶಗೊಂಡ ಬಾಂಗ್ಲಾದ 4 ಲಕ್ಷ ಜನರು ಪ್ರಧಾನಿ ನಿವಾಸದತ್ತ ಮುನ್ನುಗ್ಗಿದರು. ಈ ವೇಳೆ ದಾರಿಯುದ್ಧಕ್ಕೂ ಹಿಂಸಾಚಾರ ನಡೆಯಿತು. ತಕ್ಷಣ ನಡೆದ ಸಭೆಯಲ್ಲಿ ವಿಪಕ್ಷ ನಾಯಕರು, ನಾಗರಿಕ ಸಮಾಜದವರ ಹೊರತಾಗಿಯೂ ಆಡಳಿತಾರೂಢ ಅವಾಮಿ ಲೀಗ್‌ನ ಯಾರೊಬ್ಬರೂ ಹಾಜರಾಗಲಿಲ್ಲ. ಈ ವೇಳೆ ಹಸೀನಾಗೆ ರಾಜೀನಾಮೆ ನೀಡಲು ಸೇನೆ 45 ನಿಮಿಷ ಕಾಲಾವಕಾಶ ನೀಡಿತ್ತು. ಈ ಬೆಳವಣಿಗೆ ಬೆನ್ನಲ್ಲೇ ಹಸೀನಾ ಸಹೋದರಿ ಜತೆ ಹೆಲಿಕಾಪ್ಟರ್ ಮೂಲಕ ಭಾರತಕ್ಕೆ ತೆರಳಿದರು.

**ಆಧಾರ**: ವಿಜಯವಾಣಿ, ದಿನಾಂಕ: 06.08.2024

# ಭಾಗ–08

## ಶ್ರದ್ಧಾಂಜಲಿ

## 1. ಡಾ: ವೀರಬಸವಂತರೆಡ್ಡಿ ಮುದ್ನಾಳ್, ವಿಧಾನಸಭೆ ಮಾಜಿ ಶಾಸಕರು



ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ. ವೀರ ಬಸವಂತರೆಡ್ಡಿ ಮುದ್ನಾಳ ಅವರು ದಿನಾಂಕ:31.12.1952ರಂದು ಯಾದಗಿರಿಯಲ್ಲಿ ಜನಿಸಿದ್ದು, ಎಂ.ಬಿ.ಬಿ.ಎಸ್., ಎಂಎಸ್.ಪದವಿ ಪಡೆದಿದ್ದರು. ವೃತ್ತಿಯಲ್ಲಿ ಡಾಕ್ಟರ್ (ಸರ್ಜನ್)ಆಗಿದ್ದ ಅವರು, ಅಸೋಸಿಯೇಶನ್ ಆಫ್ ಸರ್ಜನ್ಸ್ ಆಫ್ ಇಂಡಿಯಾದ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಉಚಿತ ಚಿಕಿತ್ಸೆಗಳ ಮೂಲಕ 'ಬಡವರ ಪಾಲಿನ ದೇವರು' ಎಂದು ಖ್ಯಾತರಾಗಿದ್ದ ಡಾ. ವೀರ ಬಸವಂತರೆಡ್ಡಿ ಮುದ್ನಾಳ ಅವರು 2004ರಲ್ಲಿ ಪ್ರಥಮ ಬಾರಿಗೆ 12ನೇ ವಿಧಾನಸಭೆಗೆ ಸ್ವತಂತ್ರ್ಯ ಅಭ್ಯರ್ಥಿಯಾಗಿ ಆಯ್ಕೆಗೊಂಡಿದ್ದರು. ವೃತ್ತಿಯಲ್ಲಿ ವೈದ್ಯರಾಗಿದ್ದರೂ ಕೂಡ ಸಾಮಾಜಿಕ ನೆಲೆಯಲ್ಲಿ ತನ್ನ ಕೆಲಸ ಕಾರ್ಯ ಮಾಡಿ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದುದು ಭಾರತ ದೇಶದ ಪ್ರಜಾಪ್ರಭುತ್ವದಲ್ಲಿ ಎಲ್ಲ ವೃತ್ತಿ ವರ್ಗದವರಿಗೆ ಒಂದು ಪ್ರತೀತಿಯಾಗಿ ಬರುವುದಕ್ಕೆ ಅವಕಾಶವಿದೆಯೆಂದು ತೋರಿಸಿಕೊಡುವ ಸಂದೇಶವಾಗಿದೆ.

ಶ್ರೀಯುತ ಡಾ. ವೀರ ಬಸವಂತರೆಡ್ಡಿ ಮುದ್ನಾಳ ಅವರು ದಿನಾಂಕ:22.07.2024ರಂದು ನಿಧನ ಹೊಂದಿರುತ್ತಾರೆ.

## 2. ಎ.ಎಸ್.ಬಸವರಾಜು, ವಿಧಾನಸಭೆ ಮಾಜಿ ಶಾಸಕರು



ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಬಸವರಾಜು ಎ.ಎಸ್.ಅವರು ದಿನಾಂಕ:03.04.1943 ರಂದು ಅರಸೀಕೆರೆಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. 2004ರಲ್ಲಿ 12ನೇ ವಿಧಾನಸಭೆಗೆ ಅರಸೀಕೆರೆ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಶ್ರೀಯುತ ಎ.ಎಸ್.ಬಸವರಾಜುರವರು ದಿನಾಂಕ: 15.08.2024ರಂದು ನಿಧನ ಹೊಂದಿರುತ್ತಾರೆ.

## 3. ಕೆ.ಹೆಚ್.ಶ್ರೀನಿವಾಸ್, ವಿಧಾನಸಭೆ ಮಾಜಿ ಸಚಿವರು



ರಾಜ್ಯದ ಮಾಜಿ ಸಚಿವರಾಗಿದ್ದ ಕೆ.ಹೆಚ್.ಶ್ರೀನಿವಾಸ್ ಅವರು ದಿನಾಂಕ: 15.12.1938ರಂದು ಸಾಗರ ತಾಲ್ಲೂಕಿನ ಕಾಣಗೋಡು ಗ್ರಾಮದಲ್ಲಿ ಜನಿಸಿದ್ದರು. ಎಂ.ಎ.ಎಲ್.ಎಲ್.ಬಿ ಪದವೀಧರರಾಗಿದ್ದ ಶ್ರೀಯುತರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಬಹುಮುಖ ಪ್ರತಿಭೆಯಾಗಿದ್ದ ಶ್ರೀನಿವಾಸ್‌ರವರು ಕೃಷಿಕರಾಗಿ, ವಕೀಲರಾಗಿಯೂ ಸೇವೆ ಸಲ್ಲಿಸಿ, ಸಾಹಿತ್ಯ ರಚನೆಯ ಜೊತೆಗೆ ಸಿನಿಮಾದಲ್ಲೂ ಸಹ ಅಭಿನಯಿಸಿದ್ದರು. ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ, ಶಿವಮೊಗ್ಗದ ಸಹ್ಯಾದ್ರಿ ಶಿಕ್ಷಣ ಟ್ರಸ್ಟ್‌ನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು.

4ನೇ ವಿಧಾನಸಭೆಗೆ ಸಾಗರ ಕ್ಷೇತ್ರದಿಂದ ಮೊದಲ ಬಾರಿಗೆ ಚುನಾಯಿತರಾಗಿದ್ದ ಅವರು 6,8ನೇ ವಿಧಾನಸಭೆಗೆ ಪುನ: ಆಯ್ಕೆಗೊಂಡು ವಾರ್ತಾ ಪ್ರಸಾರ ಹಾಗೂ ಯುವಜನ ಸೇವೆಗಳ ರಾಜ್ಯಮಂತ್ರಿ, ಇಂಧನ ಖಾತೆ ಸಚಿವರಾಗಿಯೂ ಸಹ ಸೇವೆ ಸಲ್ಲಿಸಿದ್ದರು. ವಿಧಾನ ಪರಿಷತ್ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಶ್ರೀಯುತರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿಯೂ ಸೇವೆ ಸಲ್ಲಿಸಿದ್ದರು.

ಅಪ್ರತಿಮ ಸಂಸದೀಯ ಪಟುವಾಗಿ, ಜನಪರ ಚಿಂತಕ, ಹಿರಿಯ ರಾಜಕೀಯ ಧುರೀಣ ಕೆ.ಹೆಚ್.ಶ್ರೀನಿವಾಸ್ ರವರು ದಿನಾಂಕ: 30.08.2024ರಂದು ನಿಧನ ಹೊಂದಿರುತ್ತಾರೆ.

## 4. ವೆಂಕಟರೆಡ್ಡಿ ಮುದ್ನಾಳ್, ವಿಧಾನಸಭೆ ಮಾಜಿ ಶಾಸಕರು



ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ವೆಂಕಟರೆಡ್ಡಿ ಮುದ್ನಾಳ್ ಅವರು ದಿನಾಂಕ: 28.03.1954ರಂದು ಯಾದಗಿರಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ದಿವಂಗತರು 2018ರಲ್ಲಿ 15ನೇ ವಿಧಾನಸಭೆಗೆ ಯಾದಗಿರಿ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ನೇರನುಡಿ ಹಾಗೂ ಜನಾನುರಾಗಿಯಾಗಿದ್ದ ವೆಂಕಟರೆಡ್ಡಿ ಮುದ್ನಾಳ್ ಅವರು ದಿನಾಂಕ: 17.09.2024ರಂದು ನಿಧನಹೊಂದಿರುತ್ತಾರೆ.

## 5. ಶುಭಲತಾ ವಸಂತ ಅಸ್ನೋಟಿಕರ, ವಿಧಾನ ಪರಿಷತ್ ಸದಸ್ಯರು



ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಶುಭಲತಾ ವಸಂತ ಸ್ನೋಟಿಕರ ಅವರು 1957ರ ಜನವರಿ 06 ರಂದು ಉತ್ತರಕನ್ನಡ ಜಿಲ್ಲೆಯ ಅಂಕೋಲದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಪದವೀಧರರಾಗಿದ್ದು, ವೃತ್ತಿಯಲ್ಲಿ ವ್ಯಾಪಾರ ಮತ್ತು ಸಮಾಜ ಸೇವಕರಾಗಿದ್ದರು. 2004 ರಿಂದ 2010 ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಪೋರ್ಟ್ ಅಂಡ್ ಡಾಕ್ ಲೇಬರ್ ಕೋ–ಆಪರೇಟಿವ್ ಸೊಸೈಟಿ, ಕಾರವಾರ ಹಾಗೂ ನವೋದಯ ಪ್ರೌಢಶಾಲೆ ಕಿನ್ನೆರ ಕಾರವಾರ ಇವುಗಳ ಅಧ್ಯಕ್ಷರಾಗಿ ಕಾರವಾರ ತಾಲ್ಲೂಕ ಕೂಲಿಕಾರ್ಮಿಕರ ಖಜಾಂಚಿ ಹಾಗೂ ಸಲಹೆಗಾರರಾಗಿ ಸೇವೆ ಸಲ್ಲಿಸಿದರು.

ಶ್ರೀಮತಿ ಶುಭಲತಾ ವಸಂತ ಸ್ನೋಟಿಕರ ಅವರು ದಿನಾಂಕ: 25.09.2024 ರಂದು ನಿಧನ ಹೊಂದಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿ ಹಾಗೂ ಸಮಾಜ ಸೇವಕಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 6. ಕೆ.ಲಕ್ಷ್ಮೀನಾರಾಯಣ, ವಿಧಾನಸಭೆ ಮಾಜಿ ಶಾಸಕರು



ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಲಕ್ಷ್ಮೀನಾರಾಯಣ.ಕೆ. ಅವರು ದಿನಾಂಕ: 13.11.1939 ರಲ್ಲಿ ಜನಿಸಿದ್ದು ಮೂಲತ: ಕುಂದಾಪುರದವರು. ಎಂಜಿನಿಯರಿಂಗ್ ಸ್ನಾತಕೋತ್ತರ ಪದವೀಧರರಾಗಿದ್ದ ಅವರು ಬೆಂಗಳೂರಿನಲ್ಲಿ ಖ್ಯಾತ ಶ್ರೀ ಲಕ್ಷ್ಮೀಕನ್‌ಸ್ಟ್ರಕ್ಷನ್ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅಖಿಲ ಭಾರತ ಕೈಮಗ್ಗ ನಿಯಮಿತ ಸದಸ್ಯರಾಗಿದ್ದ ಅವರು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

2008ರಲ್ಲಿ 13ನೇ ವಿಧಾನಸಭೆಗೆ ಬೈಂದೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು. ರಾಜಕಾರಣಿ, ಉದ್ಯಮಿ ಲಕ್ಷ್ಮೀನಾರಾಯಣ.ಕೆ. ಅವರು ದಿನಾಂಕ: 27.09.2024ರಂದು ನಿಧನ ಹೊಂದಿರುತ್ತಾರೆ.

# ಭಾಗ–9
# ಪ್ರಮುಖ ಲೇಖನ ಸುದ್ದಿಗಳು

## 1. Lawful, Liberal

The three new criminal codes that kicked in BNS, BNSS and BSB-will eventually replace the trio of IPC CRPC and Indian Evidence Act, respectively, which have governed the criminal justice system. That'll happen only once all cases filed under the old codes are closed. Given India's caseload, this, in effect, means two sets of codes will be in application simultaneously across jurisdictions a tremendous challenge for those who man the criminal justice system. That the codes needed an overhaul is indisputable. But challenges remain aplenty.

The approach to the codes overhaul was discarding colonial baggage and to be reformative. Here, proportional penalty is key. This means penalties redesigned such that minor offences don't invite jail time. Old faults compounded by new offences that have crept in are unlikely to lessen the under trail burden. Its imperative that during training of the law enforcement machinery. It's drummed in that no matter the crime and prescribed sentence, there must be unwavering focus on presumption of innocence-the hallmark of a liberal reformative justice system.

Minimum age for criminal responsibility continues to be 7 years, lower than international convention Snatching is a criminal offence. It's still prison for those not looking after old parents. Sex on the pretext of marriage can be punished with up to 10 years jail A judge an award such convict 1 day jail, or 10 years. Such latitude can be problematic in interpretation- not all judges are judicious.

Archaic legal ideas continue to be in play Defermation remains on the statute, as do provisions for sedition if not in so many words. A rigorous weeding out of archaic laws is required, not least when it comes to marital rape. Onus is no legislatures to decriminalize petty behavior and junk harsh provisions to meet the agenda of reformative justice.

Due process is deeply linked with capacity. Poor forensics botches up many an investigation. And courts must not allow police free hand when it comes to seizing evidence. Due process ensures, for instance, forensics of digital devices don't impinge on privacy rights. It demands probes compartmentalize a phone's contents-what investigators can and cannot explore. And that this rule is spelt out.

Various police forces advertise they care for civilians, but collective experience is often otherwise. At the ore, liberal justice the long stated purpose for an overhaul of IPC, CrPC and IEA, firmly stands for individual; rights. The dharma of India's criminal justice delivery must be premised on protection of personal freedoms and civil liberties.

**Courtesy:** Times of India, Dated: 02.07.2024.

## 2. ಬಾಲಕಿಯರ ಶಿಕ್ಷಣ: ಸಾಧನೆ, ಸವಾಲು

ಸ್ವಾತಂತ್ರ್ಯಾನಂತರ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಭಾರತ ಗಮನಾರ್ಹ ಸಾಧನೆಯನ್ನು ತೋರಿದೆ. ಇದೇ ವೇಳೆ, ಬಾಲಕಿಯರ ಶಿಕ್ಷಣ ಅದರಲ್ಲೂ ವಿಶೇಷವಾಗಿ ಅವಕಾಶವಂಚಿತ ಸಮುದಾಯಗಳ ಮಕ್ಕಳನ್ನು ಮುಖ್ಯವಾಹಿನಿಯಲ್ಲಿ ಉಳಿಸಿಕೊಂಡು ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಹಲವು ಸವಾಲುಗಳು ನಮಗೆ ಎದುರಾಗಿವೆ. ಸಂವಿಧಾನದ ಆಶಯದಂತೆ ಧರ್ಮ, ಜನಾಂಗ, ಜಾತಿ, ಲಿಂಗದಂತಹವನ್ನು ಲೆಕ್ಕಿಸದೆ, ಪ್ರತಿ ಮಗುವೂ ಗುಣಮಟ್ಟದ ಶಿಕ್ಷಣ ಪಡೆಯುವುದನ್ನು ಖಾತರಿಪಡಿಸುವುದು ಈ ಹೊತ್ತಿನ ನಮ್ಮ ಆದ್ಯತೆಯಾಗಿದೆ.

ಹಲವು ಸಂಶೋಧನೆಗಳು ಹೇಳುವಂತೆ, ಶಿಕ್ಷಣವು ಹೆಣ್ಣುಮಕ್ಕಳನ್ನು ಹೆಚ್ಚು ಸಬಲೀಕರಿಸುವುದಲ್ಲದೆ ಲಿಂಗಸಮಾನತೆ ಮತ್ತು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಯುನೆಸ್ಕೊ ಅಧ್ಯಯನದ ಪ್ರಕಾರ, ಪ್ರತಿ ಬಾಲಕಿ ಒಂದೊಂದು ವರ್ಷವೂ ಪಡೆಯುವ ಶಾಲಾ ಶಿಕ್ಷಣವು ಯೌವನದಲ್ಲಿ ಅವಳ ಆದಾಯವನ್ನು ಶೇಕಡ 10ರಿಂದ 20ರಷ್ಟು ಹೆಚ್ಚಿಸುತ್ತದೆ.

ಯುಡೈಸ್ (U-DISE) ದತ್ತಾಂಶದ ಪ್ರಕಾರ, ದೇಶದಲ್ಲಿ ಒಂದು ದಶಕದ ಅವಧಿಯ (2012–22) ಬಾಲಕಿಯರ ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸಿದರೆ, ಶಾಲಾ ಶಿಕ್ಷಣದ ವಿವಿಧ ಹಂತಗಳಾದ ಪ್ರಾಥಮಿಕ, ಮಾಧ್ಯಮಿಕ ಮತ್ತು 11–12ನೇ ತರಗತಿ ಒಳಗೊಂಡಂತೆ ಪ್ರೌಢ ಶಿಕ್ಷಣದಲ್ಲಿ ಹಲವಾರು ಗಮನಾರ್ಹ ಸಾಧನೆಗಳ ಜೊತೆಗೆ ಕಾಳಜಿ ವಹಿಸಬೇಕಾದ ಸಂಗತಿಗಳೂ ನಮಗೆ ಮನವರಿಕೆಯಾಗುತ್ತವೆ.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಬಾಲಕಿಯರ ದಾಖಲಾತಿ ವಾರ್ಷಿಕವಾಗಿ ಸರಾಸರಿ ಶೇ 1.14ರಷ್ಟು ಹೆಚ್ಚಳದೊಂದಿಗೆ ಗಣನೀಯ ಪ್ರಮಾಣದ ಬೆಳವಣಿಗೆಯನ್ನು ಕಂಡಿದೆ. ಮಾಧ್ಯಮಿಕ ಹಂತದಲ್ಲಿ ದಾಖಲಾತಿ ತುಲನಾತ್ಮಕವಾಗಿ ಸ್ಥಿರವಾಗಿದ್ದು, ವಾರ್ಷಿಕ ಬೆಳವಣಿಗೆ ದರ ಸರಾಸರಿ ಶೇ 0.03ರಷ್ಟು ಇದೆ. ಪ್ರೌಢ ಶಿಕ್ಷಣದ ಹಂತದಲ್ಲಿ ದಾಖಲಾತಿಯು ಕುಸಿದಿದ್ದು, ವಾರ್ಷಿಕವಾಗಿ ಶೇ 0.56ರಷ್ಟು ಇಳಿಕೆಯಾಗಿದೆ. ಈ ಬೆಳವಣಿಗೆಯು ಪ್ರೌಢ ಶಿಕ್ಷಣದ ಹಂತದಲ್ಲಿ ಬಾಲಕಿಯರನ್ನು ಶಾಲೆಗೆ ಕರೆತರುವಲ್ಲಿ ಇರುವ ಸವಾಲುಗಳನ್ನು ಸೂಚಿಸುತ್ತದೆ.

ಇನ್ನು 11 ಮತ್ತು 12ನೇ ತರಗತಿಯ ಹಂತದ ಬೆಳವಣಿಗೆ ಅತ್ಯಂತ ಕಳವಳಕಾರಿಯಾಗಿದೆ. ಇಲ್ಲಿ ವಾರ್ಷಿಕವಾಗಿ ದಾಖಲಾತಿಯಲ್ಲಿ ಸರಾಸರಿ ಶೇ 3.4ರಷ್ಟು ಗಣನೀಯ ಪ್ರಮಾಣದ ಕುಸಿತ ಕಂಡುಬಂದಿದೆ. ಇದು, ಈ ಹಂತದಲ್ಲಿ ಬಾಲಕಿಯರ ದಾಖಲಾತಿಯಲ್ಲಿ ಕಂಡುಬರುವ ಸಮಸ್ಯೆಯ ತೀವ್ರತೆಯನ್ನು ಎತ್ತಿ ತೋರಿಸುತ್ತದೆ. ಒಟ್ಟಾರೆಯಾಗಿ, 1ರಿಂದ 12ನೇ ತರಗತಿಯವರೆಗಿನ ಎಲ್ಲಾ ಹಂತಗಳಲ್ಲಿ ಬಾಲಕಿಯರ ಒಟ್ಟು ಹಿಂದಿನ ಒಂದು ದಶಕದಲ್ಲಿ ವಾರ್ಷಿಕವಾಗಿ ಶೇ 0.14ರಷ್ಟು ಸರಾಸರಿ ಹೆಚ್ಚಳ ಕಂಡುಬಂದಿದ್ದರೂ ವಿವಿಧ ಹಂತಗಳ ಪ್ರಗತಿಯಲ್ಲಿ ಬಹಳಷ್ಟು ಸಮಸ್ಯೆಗಳಿರುವುದನ್ನು ಅಂಕಿಅಂಶಗಳು ನಿಖರವಾಗಿ ಸೂಚಿಸುತ್ತವೆ.

ಇಂತಹ ಅಂಕಿಅಂಶಗಳ ಆಧಾರದಲ್ಲಿ ಬಾಲಕಿಯರ ಶಿಕ್ಷಣದ ಗತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ದಾಖಲಾತಿಯು ಪ್ರೋತ್ಸಾಹದಾಯಕವಾಗಿದೆ. ಆದರೆ, ಮಾಧ್ಯಮಿಕ ಹಂತದಲ್ಲಿ ನಾವು ಅತ್ಯಲ್ಪ ಬೆಳವಣಿಗೆಯನ್ನು ಮಾತ್ರ ಕಂಡಿದ್ದೇವೆ. ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತಕ್ಕೆ ಬಾಲಕಿಯರು ಸುಗಮವಾಗಿ ದಾಟುವುದನ್ನು ಮಕ್ಕಳನ್ನು ಖಚಿತಪಡಿಸಿಕೊಂಡು, ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸಲು ಅಡ್ಡಿಯಾಗುವಂತಹ ಎಲ್ಲಾ ಅಡೆತಡೆಗಳನ್ನು ಗುರುತಿಸಿ, ಪರಿಹರಿಸುವತ್ತ ಅಗತ್ಯ

ಕ್ರಮಗಳನ್ನು ಕೈಗೊಳ್ಳಬೇಕಿದೆ. ಶಿಕ್ಷಣ ಹಕ್ಕು ಕಾಯ್ದೆಯ ಅನ್ವಯ ಇದು ತುರ್ತಾಗಿ ಆಗಬೇಕಾಗಿರುವ ಕೆಲಸವೂ ಹೌದು.

11 ಮತ್ತು 12ನೇ ತರಗತಿ ಒಳಗೊಂಡಂತೆ ಪ್ರೌಢ ಶಿಕ್ಷಣದ ಹಂತದಲ್ಲಿ ದಾಖಲಾತಿಯ ಪ್ರಮಾಣ ಶಿಕ್ಷಣವು ಗಣನೀಯವಾಗಿ ಕಡಿಮೆಯಾಗುತ್ತಿರುವುದು ಚಿಂತೆಗೆ ಈಡುಮಾಡುವಂತಹ ಸಂಗತಿ. ಬಾಲಕಿಯರು ಉನ್ನತ  ಪ್ರಾಥಮಿಕ ಶಿಕ್ಷಣದ ನಂತರ ಪ್ರೌಢ ಮತ್ತು ಉನ್ನತ ಪ್ರೌಢ ಶಿಕ್ಷಣವನ್ನು ಮುಂದುವರಿಸದಿದ್ದರೆ, ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಹಂತದಲ್ಲಿ ನಾವು ಸಾಧಿಸಿದ ಪ್ರಗತಿ ಕೆಲವೇ ಸಮಯದಲ್ಲಿ ಶೂನ್ಯವಾಗುತ್ತದೆ. ಕಾರಣ, ಮಕ್ಕಳು ಪ್ರಾಥಮಿಕ ಹಂತದಲ್ಲಿ ಕಲಿತದ್ದನ್ನು ಕ್ರಮೇಣ ಮರೆಯುವ ಸಾಧ್ಯತೆ ಇರುತ್ತದೆ. ಜೊತೆಗೆ, ಹೆಣ್ಣುಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರಿಸದಿದ್ದರೆ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಸಣ್ಣ ವಯಸ್ಸಿನಲ್ಲಿ ಮನೆಕೆಲಸ ಮತ್ತು ಮಕ್ಕಳ ಸಾಗಣೆಯಂಥ ಸಾಮಾಜಿಕ ಅನಿಷ್ಟಗಳಿಗೆ ತುತ್ತಾಗುವ ಸಾಧ್ಯತೆಗಳು ದಟ್ಟವಾಗಿರುತ್ತವೆ.

ಸಾಧಿಸಿರುವ ಪ್ರಗತಿಯ ಹೊರತಾಗಿಯೂ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಲಿಂಗ ಅಸಮಾನತೆ ಮುಂದುವರಿದಿದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಪ್ರಕಾರ, ದೇಶದಲ್ಲಿ ಏಳು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಹೆಣ್ಣುಮಕ್ಕಳ 65.46ರಷ್ಟಿದ್ದರೆ, ಗಂಡುಮಕ್ಕಳಲ್ಲಿ ಈ ಪ್ರಮಾಣ ಶೇ.80.88ರಷ್ಟಿದೆ. ಈ ಅಂತರವನ್ನು ಸರಿಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಎಲ್ಲರಿಗೂ ಕನಿಷ್ಠ ಶಾಲಾ ಶಿಕ್ಷಣವನ್ನು ಖಾತರಿಪಡಿಸುವಲ್ಲಿ ಬಾಲಕಿಯರ ಶಿಕ್ಷಣವನ್ನು ಉತ್ತೇಜಿಸುವುದು ನಿರ್ಣಾಯಕವಾಗುತ್ತದೆ.

ಬಾಲಕಿಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ಸವಾಲು ಮತ್ತು ತೀವ್ರತೆಯನ್ನು ಅರ್ಥಮಾಡಿಕೊಳ್ಳಲು, ಹೆಣ್ಣುಮಕ್ಕಳ ಜನಸಂಖ್ಯೆಯನ್ನು ಮುನ್ನೋಟದ ಮೂಲಕ ಅಂದಾಜಿಸುವುದು ಮತ್ತು ವಿಶ್ಲೇಷಿಸುವುದು ಅಗತ್ಯ. ಕೇಂದ್ರ ಸರ್ಕಾರದ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು 2021ರಿಂದ 2036ರವರೆಗಿನ ಹೆಣ್ಣುಮಕ್ಕಳ ಜನಸಂಖ್ಯೆಯನ್ನು ಇತ್ತೀಚೆಗೆ ಅಂದಾಜಿಸಿದೆ. ಅದರ ಪ್ರಕಾರ, ದೇಶದಲ್ಲಿ 6ರಿಂದ 18ರ ವಯೋಮಾನದ ಹೆಣ್ಣುಮಕ್ಕಳ ಜನಸಂಖ್ಯೆಯು 2021ಕ್ಕೆ ಹೋಲಿಸಿದರೆ 2036ರ ಹೊತ್ತಿಗೆ ಗಣನೀಯವಾಗಿ ಕಡಿಮೆಯಾಗಲಿದೆ.

ಬದಲಾಗುತ್ತಿರುವ ಇಂತಹ ಸನ್ನಿವೇಶದಲ್ಲಿ ಸೂಕ್ತ ಶೈಕ್ಷಣಿಕ ಬೆಂಬಲ ವ್ಯವಸ್ಥೆಯನ್ನು ಒದಗಿಸಲು ಹಾಗೂ ವಿವಿಧ ವಯೋಮಾನದ ಬಾಲಕಿಯರ ಅಗತ್ಯಗಳನ್ನು ಪೂರೈಸಲು ಬೇಕಾದ ಉಪಕ್ರಮಗಳ ಬಗ್ಗೆ ನೀತಿ ನಿರೂಪಕರು ಗಂಭೀರವಾಗಿ ಯೋಚಿಸಬೇಕಿದೆ. ಲಿಂಗಾನುಪಾತದಲ್ಲಿ ಆಗುತ್ತಿರುವ ಕುಸಿತವನ್ನು ತಡೆಯಲು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಜರೂರನ್ನು ಸಹ ಇದು ಸೂಚಿಸುತ್ತದೆ.

ಪ್ರಾಥಮಿಕ ಹಂತದಲ್ಲಿ ದಾಖಲಾದ ಮಕ್ಕಳನ್ನು ಉಳಿಸಿಕೊಂಡು, ಮುಂದಿನ ಹಂತಗಳಾದ ಹಿರಿಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಪ್ರೌಢ ಹಂತಕ್ಕೆ ಅವರು ಕಡ್ಡಾಯವಾಗಿ ದಾಖಲಾಗುವುದನ್ನು ಖಾತರಿಪಡಿಸಬೇಕಿದೆ. ಬಾಲಕಿಯರು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅನುವಾಗುವಂತೆ ಆರ್ಥಿಕ ಪ್ರೋತ್ಸಾಹ ಮತ್ತು ಉತ್ತೇಜಕಗಳನ್ನು ಸಕಾಲದಲ್ಲಿ ಒದಗಿಸುವುದು ಈ ಉದ್ದೇಶ ಸಾಧನೆಗೆ ಬಹಳ ಮುಖ್ಯವಾದುದು. ಎಲ್ಲಾ ಶಾಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮತ್ತು ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕನಿಷ್ಠ ಮೂಲಸೌಕರ್ಯಗಳನ್ನು ಒದಗಿಸುವುದು ನಿರ್ಣಾಯಕವಾಗುತ್ತದೆ. ಇದನ್ನು ಸಾಕಾರಗೊಳಿಸಲು ಶಿಕ್ಷಣಕ್ಕೆ ಅನುದಾನ ಹಂಚಿಕೆಯನ್ನು ಹೆಚ್ಚಿಸಬೇಕಿದೆ.

ಒಟ್ಟಾರೆ, ಹಿಂದಿನ ಒಂದು ದಶಕದ ಬೆಳವಣಿಗೆಗಳು ಬಾಲಕಿಯರ ಶಿಕ್ಷಣದಲ್ಲಿ ನಾವು ಸಾಧಿಸಿದ ಪ್ರಗತಿ ಮತ್ತು ಅಷ್ಟೇ ಪ್ರಮಾಣದ ಸವಾಲುಗಳನ್ನು ಎತ್ತಿ ತೋರಿಸುತ್ತವೆ. ಸಾಮಾಜಿಕ–ಆರ್ಥಿಕ ಅಸಮಾನತೆಗಳನ್ನು ನಿಭಾಯಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕಿರುವ ಅಡೆತಡೆಗಳನ್ನು ನಿವಾರಿಸುವಾಗ, ಮುಖ್ಯವಾಹಿನಿಯ ಹೊರಗೆ ಉಳಿದ ಮಕ್ಕಳನ್ನು ವ್ಯವಸ್ಥೆಯ ಒಳಗೆ ತರುವುದರ ಜೊತೆಗೆ ವ್ಯವಸ್ಥೆಯ ಒಳಗಿರುವ ಮಕ್ಕಳನ್ನು ಶಾಲೆಗಳಲ್ಲೇ ಉಳಿಸಿಕೊಳ್ಳುವುದು ಮತ್ತು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸರಾಗವಾಗಿ ಮುಂದಡಿ ಇಡಲು ಅಗತ್ಯವಾದ ಉಪಕ್ರಮಗಳನ್ನು ಕೈಗೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಜೊತೆಗೆ, ಎಲ್ಲಾ ಬಾಲಕಿಯರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವುದು ಸಮಾನ ಅವಕಾಶದ ಗುರಿಯನ್ನು ಸಾಧಿಸುವ ದಿಸೆಯಲ್ಲಿ ನಿರ್ಣಾಯಕವಾಗಲಿದೆ.

**ಲೇಖಕರು: ನಿರಂಜನಾರಾಧ್ಯ ವಿ.ಪಿ.**
**ಆಧಾರ:** ಪ್ರಜಾವಾಣಿ, ದಿನಾಂಕ: 26.08.2024

## 3. ರಾಜ್ಯಪಾಲರ ಹುದ್ದೆ ಸಾಂವಿಧಾನಿಕ ಸೇತುವೆ

ಕೇಂದ್ರ–ರಾಜ್ಯ ಸರಕಾರಗಳ ಸಂಬಂಧ ಬಲಪಡಿಸುವಲ್ಲಿ ರಾಜ್ಯಪಾಲರ ಪಾತ್ರ ಅದ್ವಿತೀಯ. ರಾಜ್ಯದ ಪ್ರಥಮ ಪ್ರಜೆಯಾಗಿ ರಾಜ್ಯದ ಹಿತಾಸಕ್ತಿ ಕಾಪಾಡುವ ಮೂಲಕ ಸಂವಿಧಾನದ ಆಶಯ ಹಾಗೂ ಗುರಿ ಉದ್ದೇಶಗಳನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಅವರು ಹೊಂದಿರುತ್ತಾರೆ. ರಾಜ್ಯಪಾಲರ ಪಾತ್ರ ಕೇವಲ ಸಾಂಕೇತಿಕ ಅಲ್ಲ. ಸಂವಿಧಾನ ರಾಜ್ಯಪಾಲರಿಗೆ ನೀಡಿರುವ ಶಾಸನೀಯ, ಆಡಳಿತಾತ್ಮಕ ಹಾಗೂ ನ್ಯಾಯಿಕ ಕರ್ತವ್ಯಗಳನ್ನು ನೈಸರ್ಗಿಕ ನ್ಯಾಯತತ್ವ ನಿಯಮಗಳ ಅನುಗುಣವಾಗಿ ತನ್ನ ವಿವೇಚನಾಧಿಕಾರ ಚಲಾಯಿಸುವಂತೆ ತಿಳಿಸುತ್ತದೆ. ವಿಶೇಷವಾಗಿ ರಾಜ್ಯ ಸರಕಾರವು ನಾಗರೀಕರ ಕಲ್ಯಾಣಕ್ಕಿಂತ ತನ್ನ ರಾಜಕೀಯ ಕಾರ್ಯಸೂಚಿಗೆ ಆದ್ಯತೆ ನೀಡಿದಾಗ ರಾಜ್ಯಪಾಲರು ರಾಜ್ಯದ ಮುಖ್ಯಸ್ಥರಾಗಿ ಪರಿಸ್ಥಿತಿಯನ್ನು ಸರಿಪಡಿಸಲು ಮುಂದಾಗಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರ ಹಾಗೂ ರಾಜ್ಯ ಸರಕಾರಗಳ ನಡುವೆ ಹೆಚ್ಚುಹೆಚ್ಚು ಭಿನ್ನಾಭಿಪ್ರಾಯಗಳು ಹಾಗೂ ವಿವಾದಗಳು ಉದ್ಭವಿಸುತ್ತಿದೆ. ಈ ಸಂಬಂಧವಾಗಿ ಸರ್ವೋಚ್ಚ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ಸಲಹೆ ಹಾಗೂ ತಿಳಿವಳಿಕೆ ನಿರ್ದೇಶನವನ್ನು ನೀಡುತ್ತಾ ಬಂದಿದೆ.

ಚುನಾಯಿತ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸಲು ಕೇಂದ್ರ ಸರಕಾರವು ರಾಜ್ಯಪಾಲರನ್ನು ಬಳಸಿಕೊಳ್ಳುವ ಆರೋಪಗಳು 1950ರ ದಶಕದಿಂದಲೂ ಕೇಳಿಬಂದಿವೆ. ಕೇಂದ್ರ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷವು ಆಡಳಿತದಲ್ಲಿದ್ದಾಗ, ಸಾಮಾನ್ಯವಾಗಿ ಯಾವುದೇ ಸಮಸ್ಯೆ ಉದ್ಭವವಾಗುವುದಿಲ್ಲ. 1967ರ ನಂತರ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸೇತರ ಸರಕಾರಗಳು ಅಧಿಕಾರಕ್ಕೆ ಬಂದ ಮೇಲೆ ಸಂಘರ್ಷ ಉಲ್ಬಣಿಸಿತು. ರಾಜ್ಯಪಾಲರ ಮೂಲಕ ರಾಷ್ಟ್ರಪತಿ ಆಳ್ವಿಕೆ ಕೇಂದ್ರ ಸರಕಾರದ ಪ್ರಮುಖ ಅಸ್ತ್ರ. 1953ರಲ್ಲಿ ಪಟಿಯಾಲ ಹಾಗೂ ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟವನ್ನು ಅಮಾನತುಗೊಳಿಸಲಾಯಿತು. 1959ರಲ್ಲಿ ರಾಜ್ಯಪಾಲರ ವರದಿ ಆಧರಿಸಿ ಕೇರಳದ ಇಎಂಎಸ್ ನಂಬೂದರಿಪಾದ್ ಸರ್ಕಾರವನ್ನು ವಜಾಗೊಳಿಸಲಾಯಿತು.

1971 ಮತ್ತು 1990ರ ನಡುವೆ ರಾಜ್ಯಪಾಲರು ಹೊರಡಿಸಿದ ರಾಷ್ಟ್ರಪತಿ ಆಳ್ವಿಕೆಯ ಆದೇಶಗಳ ಮೂಲಕ ಹಲವಾರು ರಾಜ್ಯ ಸರಕಾರಗಳನ್ನು ವಜಾ ಮಾಡಲಾಗಿತ್ತು. ಕರ್ನಾಟಕದಲ್ಲಿ ವೀರೇಂದ್ರ ಪಾಟೀಲರ ಸರಕಾರ(1971), ತಮಿಳುನಾಡಿನಲ್ಲಿ ಎಂ.ಕರುಣಾನಿಧಿ ಸರಕಾರ(1976), ರಾಜಸ್ಥಾನದಲ್ಲಿ ಬಿ.ಎಸ್.ಶೇಖಾವತ್ ಸರಕಾರ ಮತ್ತು ಪಂಜಾಬ್‌ನಲ್ಲಿ ಎಸ್‌ಎಡಿ ಸರಕಾರ(1980), ಉತ್ತರ ಪ್ರದೇಶ, ಒಡಿಶಾ, ಗುಜರಾತ್, ಬಿಹಾರದಲ್ಲಿ ಜನತಾ ಪಕ್ಷದ ಸರಕಾರಗಳು(1980), ಆಂಧ್ರದಲ್ಲಿ ಎನ್.ಟಿ.ರಾಮರಾವ್ ಸರಕಾರ(1984) ಮತ್ತು

ಯುಪಿಯಲ್ಲಿ ಕಲ್ಯಾಣ್ ಸಿಂಗ್ (1992) ರಾಜ್ಯ ಸರಕಾರಗಳನ್ನು ವಜಾಗೊಳಿಸಲಾಗಿತ್ತು. ಕರ್ನಾಟಕದಲ್ಲಿ 1989ರಲ್ಲಿ ಎಸ್.ಆರ್.ಬೊಮ್ಮಾಯಿ ಸರಕಾರವನ್ನು ವಜಾಗೊಳಿಸಿದ್ದ ಕ್ರಮವನ್ನು ಸರ್ವೋಚ್ಚ ನ್ಯಾಯಾಲಯವು ಅಸಂವಿಧಾನಿಕ ಎಂದು ಘೋಷಿಸಿ ಹಲವಾರು ಮಾರ್ಗಸೂಚಿಗಳನ್ನು ರೂಪಿಸಿತ್ತು.

ರಾಜ್ಯ ಶಾಸಕಾಂಗ ಸಿದ್ಧಪಡಿಸಿ ಕಳುಹಿಸಿದ ವಿಧೇಯಕಗಳನ್ನು ವಾಪಸ್ ಕಳುಹಿಸಿರುವುದು, ತಿರಸ್ಕರಿಸಿರುವುದು ಅಥವಾ ಅಂಕಿತಕ್ಕೆ ವಿಳಂಬ ಮಾಡಿರುವ ಎಷ್ಟೋ ದೃಷ್ಟಾಂತಗಳು ಇವೆ. ಈ ವಿಚಾರವಾಗಿ ಹಲವಾರು ಆಯೋಗಗಳು ರಚನೆಯಾದವು.

ಮೊದಲಿಗೆ 1969ರ ಆಡಳಿತ ಸುಧಾರಣಾ ಆಯೋಗವು ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಹಾಗೂ ಸಾರ್ವಜನಿಕ ಸೇವೆ ಮತ್ತು ಆಡಳಿತದಲ್ಲಿ ಹೊಂದಿರುವ ವ್ಯಕ್ತಿಗಳನ್ನು ರಾಜ್ಯಪಾಲರಾಗಿ ನೇಮಕ ಮಾಡುವಂತೆ ತನ್ನ ವರದಿಯಲ್ಲಿ ಪ್ರಸ್ತಾಪಿಸಿತು.

1983ರಲ್ಲಿ ಅಂದಿನ ಕಾಂಗ್ರೆಸ್ ಸರಕಾರವು ಕೇಂದ್ರ ರಾಜ್ಯ, ಸಂಬಂಧ ಬಲಪಡಿಸುವ ವಿಚಾರವಾಗಿ ನ್ಯಾಯಮೂರ್ತಿ ಆರ್.ಎಸ್.ಸರ್ಕಾರಿಯ ಆಯೋಗವನ್ನು ರಚಿಸಿತು. ಈ ಆಯೋಗವು 1988ರಲ್ಲಿ ಸುದೀರ್ಘ 1,600 ಪುಟಗಳ ವರದಿ ನೀಡಿತು. ರಾಜಕೀಯದಲ್ಲಿ ತಟಸ್ಥ ನಿಲುವು ಹೊಂದಿರುವವರು ಅಥವಾ ಇತ್ತೀಚಿನ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿರದವರನ್ನು ನೇಮಕ ಮಾಡುವುದು. ರಾಷ್ಟ್ರಪತಿಗಳು ರಾಜ್ಯಪಾಲರನ್ನು ನೇಮಕ ಮಾಡುವಾಗ ಸಂಬಂಧಪಟ್ಟ ಆಯಾ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಸಮಲೋಚಿಸಿ ನೇಮಕಮಾಡಬೇಕು. ರಾಜ್ಯಪಾಲರು ಸಾರ್ವಜನಿಕ ಜೀವನದ ಯಾವುದಾದರೂ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿರುವ ಶ್ರೇಷ್ಠವ್ಯಕ್ತಿಯಾಗಿರಬೇಕು. ಅವರು ನೇಮಕಗೊಂಡ ರಾಜ್ಯಕ್ಕೆ ಸೇರಿದವರಾಗಿರಬಾರದು. ಅಪರೂಪದ ಮತ್ತು ಬಲವಾದ ಸಂದರ್ಭಗಳನ್ನು ಹೊರತು ಪಡಿಸಿ ಅವರ ಅವಧಿ ಪೂರ್ಣಗೊಳ್ಳುವ ಮೊದಲೇ ರಾಜ್ಯಪಾಲರನ್ನು ತೆಗೆದುಹಾಕಬಾರದು. ರಾಜ್ಯಪಾಲರು ಕೇಂದ್ರ–ರಾಜ್ಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕೇ ಹೊರತು ಕೇಂದ್ರದ ಕೈಗೊಂಬೆಯಾಗಿರಬಾರದು. ರಾಜ್ಯಪಾಲರು ತಮ್ಮ ವಿವೇಚನಾ ಅಧಿಕಾರವನ್ನು ಮಿತವಾಗಿ ಹಾಗೂ ನ್ಯಾಯಯುತವಾಗಿ ಚಲಾಯಿಸಬೇಕೇ ಹೊರತು ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ದುರ್ಬಲಗೊಳಿಸುವಂತೆ ನಿರ್ವಹಿಸಬಾರದು ಎಂದು ವರದಿ ಕೊಟ್ಟಿತ್ತು. ಎನ್‌ಡಿಎ ಸರಕಾರವು 2000ನೇ ಇಸವಿಯಲ್ಲಿ ನ್ಯಾ.ಎಂ.ಎನ್.ವೆಂಕಟಾಚಲಯ್ಯರವರ ಅಧ್ಯಕ್ಷತೆಯಲ್ಲಿ ಸಂವಿಧಾನ ಪುನರ್ಶೀಲನ ರಾಷ್ಟ್ರೀಯ ಆಯೋಗ ರಚಿಸಿತ್ತು. ಈ ಆಯೋಗವು ರಾಜ್ಯಪಾಲರ ನೇಮಕ ಹಾಗೂ ನಡೆ ಹೇಗಿರಬೇಕೆಂದು ಶಿಫಾರಸು ಮಾಡಿತ್ತು. ರಾಜ್ಯಪಾಲರ ಪದಚ್ಯುತಿಗೆ ಯಾವುದೇ ಕ್ರಮ ಕೈಗೊಳ್ಳುವ ಮುನ್ನ ಕೇಂದ್ರ ಸರಕಾರವು ಮುಖ್ಯಮಂತ್ರಿ ಜತೆ ಸಮಾಲೋಚನೆ ನಡೆಸಬೇಕು. ರಾಜ್ಯದ ದೈನಂದಿನ ಆಡಳಿತದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡಬಾರದು. ರಾಜ್ಯ ಸರಕಾರಕ್ಕೆ ಉತ್ತಮ ಸಲಹೆಗಾರನಂತೆ ಕರ್ತವ್ಯ ನಿರ್ವಹಿಸಬೇಕು ಎಂದು ವರದಿ ನೀಡಿತ್ತು.

ರಾಜ್ಯಪಾಲರು ತಮ್ಮ ವಿವೇಚನಾಧಿಕಾರ ಚಲಾಯಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅಂತರ್ ರಾಜ್ಯ ಮಂಡಳಿ ಅಭಿವೃದ್ಧಿಪಡಿಸಬೇಕು ಎಂದು ಎರಡನೇ ಆಡಳಿತ ಸುಧಾರಣಾ ಆಯೋಗವು ಶಿಫಾರಸ್ಸು ಮಾಡಿದೆ.

ಈ ಎಲ್ಲಾ ಆಯೋಗಗಳಲ್ಲಿ ಕೇಂದ್ರ–ರಾಜ್ಯಗಳ ಸಂಬಂಧವನ್ನು ವ್ಯವಸ್ಥಿತವಾಗಿ ಬಲಪಡಿಸುವ ಹಾಗೂ ಸುಧಾರಿಸಲು ಉತ್ತಮ ಶಿಫಾರಸುಗಳನ್ನು ನೀಡಿದ್ದು ಸರ್ಕಾರಿಯ ಹಾಗೂ ಎಂ.ಎನ್. ವೆಂಕಟಾಚಲಯ್ಯ

ಆಯೋಗಗಳು. ಈ ಎರಡು ಪ್ರಮುಖ ಆಯೋಗಗಳನ್ನು ಯುಪಿಎ ಹಾಗೂ ಎನ್‌ಡಿಎ ಎರಡು ಸರಕಾರಗಳು ರಚಿಸಿದ್ದು, ಶಿಫಾರಸ್ಸುಗಳನ್ನು ಪಡೆದುಕೊಂಡು ಹಲವಾರು ಬಾರಿ ಅಧಿಕಾರಕ್ಕೆ ಬಂದರೂ ಅನುಷ್ಠಾನ ಮಾಡದಿರುವುದು ವಿಪರ್ಯಾಸವೇ ಹೌದು. ಈ ಸಂಬಂಧವಾಗಿ 2 ರಾಷ್ಟ್ರೀಯ ಪಕ್ಷಗಳು ತಾವು ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಮುಂದಿನ ದಿನಗಳಲ್ಲಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ತರುವುದರ ಮೂಲಕ ರಾಜಕೀಯ ಬದ್ಧತೆಯನ್ನು ಪ್ರದರ್ಶಿಸಬೇಕಾಗಿದೆ. ಸಂಯುಕ್ತ ಮಾದರಿ ವ್ಯವಸ್ಥೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳನ್ನು ಬಲಪಡಿಸುವಲ್ಲಿ ರಾಜ್ಯಪಾಲರ ಪಾತ್ರ ಮಹತ್ವವಾದ್ದು. ಇದನ್ನು ಅರಿತು ಅವರು ನಡೆಯುವ ಅಗತ್ಯ ಇದೆ.

**ಲೇಖಕರು: ಪ್ರೊ.ಡಾ.ಎನ್.ಸತೀಶ್ ಗೌಡ**

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 11.09.2024

## 4. ಹೈನುಗಾರಿಕೆಯನ್ನು ಕ್ಷೀರೋದ್ಯಮವನ್ನಾಗಿ ವಿಶ್ವಕ್ಕೆ ತೋರಿದ ಭಾರತ

ಅಮುಲ್‌ನ ಸಂಸ್ಥಾಪಕ ಅಧ್ಯಕ್ಷ ತ್ರಿಭುವನ್ ದಾಸ್‌ಪಟೇಲ್ ಮತ್ತು ಕ್ಷೀರಕ್ರಾಂತಿಯ ಪಿತಾಮಹ ಡಾ.ವರ್ಗೀಸ್ ಕುರಿಯನ್ ಅವರ ದೂರದೃಷ್ಟಿಯ ಫಲವಾಗಿ ಭಾರತವು ಇಂದು ವಿಶ್ವದಲ್ಲೇ ಅತ್ಯಂತ ದೊಡ್ಡ ಹಾಲು ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಗಿದೆ. ಕೈರಾ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಅಭಿವೃದ್ಧಿ ಮತ್ತು ಅದರ ಯಶಸ್ಸಿನಿಂದ ಉತ್ತೇಜಿತರಾದ ಭಾರತದ ಆಗಿನ ಪ್ರಧಾನಮಂತ್ರಿ ಲಾಲ್ ಬಹಾದುರ್ ಶಾಸ್ತ್ರಿಯವರು 1964ರಲ್ಲಿ ಗುಜರಾತಿನ ಆನಂದ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಆನಂದ್ ಮಾದರಿಯ ಡೈರಿ ಸಹಕಾರ ಸಂಘಗಳನ್ನು ಭಾರತದಾದ್ಯಂತ ಪುನರಾವರ್ತಿಸುವಂತೆ ಸೂಚಿಸಿದರು. ಹೀಗೆ, ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯನ್ನು ರಚಿಸಿ, ಅಮುಲ್ ಮಾದರಿಯ ಪುನರಾವರ್ತನೆಗೆ 'ಆಪರೇಷನ್ ಫ್ಲಡ್' ಆರಂಭಿಸಲಾಯಿತು.

ಇದರಿಂದ ಪ್ರೇರಿತಗೊಂಡು, ಕರ್ನಾಟಕದಲ್ಲಿಯೂ ಅಮುಲ್ ಮಾದರಿಯಲ್ಲಿ ಹಾಲು ತಯಾರಿಕಾ (ಡೈರಿ) ಸಹಕಾರಿ ಸಂಘಗಳನ್ನು ಸ್ಥಾಪಿಸಲು 1974–75ರಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಕ್ರಿಯಾಯೋಜನೆ ಪ್ರಾರಂಭಿಸಲಾಯಿತು. ಸಂಪೂರ್ಣವಾಗಿ ಅಮುಲ್ ಸಂಸ್ಥೆಯ ಮಾದರಿಯನ್ನು ಅನುಸರಿಸುತ್ತ ಮತ್ತು ಸ್ಥಳೀಯ ರೈತರ ಹಿತಕಾಯುವ ಉದ್ದೇಶಕ್ಕೆ ಹೆಚ್ಚು ಗಮನಕೊಡಲಾಯಿತು. ಇದಕ್ಕಾಗಿ ಜಿಲ್ಲಾಮಟ್ಟದಲ್ಲಿ ಮಧ್ಯವರ್ತಿ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಿ, ಒಕ್ಕೂಟವನ್ನು (ಕೆಎಂಎಫ್) ರಚಿಸಲಾಯಿತು.

ಪ್ರಸ್ತುತ, ಕರ್ನಾಟಕದಲ್ಲಿ ಪ್ರತಿದಿನ 98 ಲಕ್ಷ ಲೀಟರ್ ನಂದಿನಿ ಹಾಲು ಉತ್ಪಾದನೆ ಆಗುತ್ತಿದೆ. ಬೆಂಗಳೂರು ನಗರ ಪ್ರದೇಶವೊಂದೇ ದಿನಕ್ಕೆ 17 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಮೂಲಕ ರಾಜ್ಯದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುವ ಭಾಗವಾಗಿದೆ. ರಾಜ್ಯದಲ್ಲಿ ಸುಮಾರು 3 ಲಕ್ಷ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿವೆ (ಶೇ.60ರಷ್ಟು). ಅದರಲ್ಲಿ ಒಂದು ಲಕ್ಷ ಕುಟುಂಬಗಳು ಸ್ವಂತ ಹೈನುಗಾರಿಕೆ ಇಟ್ಟುಕೊಂಡಿವೆ. ಸುಮಾರು 24 ಸಾವಿರ ಹಳ್ಳಿಗಳಿಂದ ಕೆಎಂಎಫ್ ಹಾಲು ಸಂಗ್ರಹ ಮಾಡುತ್ತಿದ್ದು, ಪ್ರತಿನಿತ್ಯ 320 ಮೆಟ್ರಿಕ್ ಟನ್ ಹಾಲಿನಪುಡಿ ತಯಾರಿಸುವ ಹಂತಕ್ಕೆ ಬಂದು ನಿಂತಿದೆ.

ಹೀಗೆ ವ್ಯವಸ್ಥಿತ ಸಂಸ್ಥೆಯಾಗಿ ಬೆಳೆಯುತ್ತ ಬಂದ ಕರ್ನಾಟಕ ಹಾಲು ಮಹಾಮಂಡಳಿ, ಪ್ರವರ್ತಿತ ಒಕ್ಕೂಟವಾಗಿ 1986ರಲ್ಲಿ ತನ್ನ ವ್ಯಾಪ್ತಿಯನ್ನು ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ವಿಸ್ತರಿಸಿಕೊಂಡಿತು. ಒಕ್ಕೂಟವು ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ್ರಮವಾಗಿ ಪ್ರತಿದಿನಕ್ಕೆ 2.5 ಲಕ್ಷ ಲೀಟರ್ ಸಂಸ್ಕರಣಾ ಸಾಮರ್ಥ್ಯದ ಸುಸಜ್ಜಿತವಾದ ಡೇರಿಗಳನ್ನು ಒಳಗೊಂಡಿದೆ. ಪ್ರಸ್ತುತ 137 ಹಾಲು ಉತ್ಪಾದಕರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 200 ಮಹಿಳಾ ಸಂಘಗಳು ಸೇರಿವೆ. ಒಕ್ಕೂಟದ ವ್ಯಾಪ್ತಿಯಲ್ಲಿ ಅತ್ಯಧಿಕ

ದೇವಸ್ಥಾನಗಳು ಇದ್ದು, ಹೆಚ್ಚಿನ ದೇವಸ್ಥಾನಗಳಿಗೆ ಒಕ್ಕೂಟದಿಂದಲೇ ನಂದಿನಿ ತುಪ್ಪದ ಸರಬರಾಜನ್ನು ಕೈಗೊಳ್ಳುತ್ತಿರುವುದು ಗಮನಾರ್ಹ.

ರಾಜ್ಯದ 15 ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಡಿಯಲ್ಲಿ, ಗ್ರಾಮೀಣ ಮಟ್ಟದಲ್ಲಿ 13,770ಕ್ಕೂ ಹೆಚ್ಚಿನ ಹಾಲು ಉತ್ಪಾದಕರ ಸಂಘಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳಿಯು 26.89 ಲಕ್ಷ ಹಾಲು ಉತ್ಪಾದಕರನ್ನು ಹೊಂದಿದೆ. ಈ ಮೂಲಕ 'ಗೋವಿನಿಂದ ಗ್ರಾಹಕರವರೆಗೆ ಗುಣಮಟ್ಟದ ಶ್ರೇಷ್ಠತೆ' ಎಂಬ ಧ್ಯೇಯವಾಕ್ಯ ಹೊಂದಿ ಹಾಲು ಮತ್ತು 'ನಂದಿನಿ' ಬ್ರಾಂಡ್ ಹೆಸರಿನಲ್ಲಿ ಗ್ರಾಹಕರಿಗೆ ಒದಗಿಸುತ್ತಿದೆ.

ಇಷ್ಟೆಲ್ಲಾ ಉತ್ಪಾದನೆ, ಗಳಿಕೆಯಿದ್ದರೂ ರೈತರಿಗೆ ಹಾಲು ಉತ್ಪಾದಕರಿಗೆ ಸೂಕ್ತ ಬೆಂಬಲ ಬೆಲೆ ನೀಡದಿರುವುದು, ಸ್ಥಳೀಯ ಮಟ್ಟದಲ್ಲಿ ಹಣಪಾವತಿಸುವ ವಿಚಾರದಲ್ಲಿ ತಾರತಮ್ಯ ಇತ್ಯಾದಿ ಸಮಸ್ಯೆಗಳು ಅಲ್ಲಲ್ಲಿ ಗಂಭೀರವಾಗಿಯೇ ಇವೆ. ಸಾಲ ಮಾಡಿ ಹಸು-ಎಮ್ಮೆಗಳನ್ನು ಖರೀದಿಸಿದ ಎಷ್ಟೋ ರೈತರು ಕಾಯಿಲೆಗಳಿಂದ ಜಾನುವಾರುಗಳನ್ನು ಕಳೆದುಕೊಂಡು ಇತ್ತ ಗಳಿಕೆಯೂ ಇಲ್ಲದೇ ಅತ್ತ ಸಾಲ ತೀರಿಸಲಾಗದೆ ಅತಂತ್ರ ಸ್ಥಿತಿಗೆ ಸಿಲುದ್ದಾರೆ. ಇಂಥವರ ಬಗ್ಗೆಯೂ ಸರಕಾರ ಮತ್ತು ಸಂಸ್ಥೆ ಗಮನಹರಿಸಬೇಕಿದೆ.

ಹಾಗೆ ನೋಡಿದರೆ, ಭಾರತವು ವಿಶ್ವದ ಅತಿದೊಡ್ಡ ಹೈನು ಉತ್ಪಾದಕ ರಾಷ್ಟ್ರವಾಗಿದ್ದು, ವಿಶ್ವದ ಒಟ್ಟು ಹಾಲು ಉತಾದನೆಯಲ್ಲಿ ಶೇ.25ರಷ್ಟು ಕೊಡುಗೆ ನೀಡುತ್ತಿದೆ. ವಾರ್ಷಿಕವಾಗಿ ಅಮೆರಿಕ 9.8 ಕೋಟಿ ಟನ್ ಹಾಲು ಉತ್ಪಾದಿಸುವ ಮೂಲಕ ಎರಡನೇ ಸ್ಥಾನದಲ್ಲಿದ್ದರೆ, ಭಾರತವು 18.7 ಕೋಟಿ ಟನ್‌ಗಳಷ್ಟು ಹಾಲು ಉತ್ಪಾದನೆಯೊಂದಿಗೆ ಅಗ್ರಸ್ಥಾನದಲ್ಲಿದೆ. ಈ ಮೂಲಕ ಭಾರತವು ವಿಶ್ವದ 'ಹಾಲು ಉತ್ಪಾದನೆಯ ರಾಜಧಾನಿ' ಎಂದೇ ಖ್ಯಾತವಾಗಿದೆ.

ಭಾರತದಿಂದ ಯುಎಇ, ಅಮೆರಿಕ, ಸಿಂಗಾಪುರ ಮತ್ತು ಭೂತಾನ್ ಸೇರಿದಂತೆ ಹಲವು ದೇಶಗಳಿಗೆ 63,738,47 ಮೆಟ್ರಿಕ್ ಟನ್ ಮೌಲ್ಯದ ಡೈರಿ ಉತ್ಪನ್ನಗಳ ರಫ್ತು ಮಾಡಲಾಗುತ್ತಿದೆ. 2023-24ರ ಅವಧಿಯಲ್ಲಿ ಇದು ವಿಶ್ವದ ಒಟ್ಟು ಹಾಲು ಉತ್ಪಾದನೆಯಲ್ಲಿ 272.64 ಮಿಲಿಯನ್ ಡಾಲರ್ ಮೌಲ್ಯದ್ದಾಗಿದೆ ಎಂದರೆ, ಭಾರತದ ಹೈನುಗಾರಿಕೆ ಉದ್ಯಮದ ಅಗಾಧತೆಯನ್ನು ನಾವು ಅರ್ಥಮಾಡಿಕೊಳ್ಳಬಹುದು.

ಭಾರತದ ಒಟ್ಟು ಜಿಡಿಪಿ ಉತ್ಪನ್ನದಲ್ಲಿ ಅತ್ಯಂತ ಪ್ರಮುಖ ಉತ್ಪನ್ನ ಪಾಲುದಾರರೆಂದರೆ, ಸೇವಾ ವಲಯ, ಕೈಗಾರಿಕೆ ಮತ್ತು ಕೃಷಿ ಸಂಬಂಧಿತ ಉತ್ಪನ್ನಗಾರಿಕೆ ಇವುಗಳ ನಂತರ, ಅತಿ ಹೆಚ್ಚು ಸಂಘಟಿತ ವಲಯ ಹೊಂದಿದ್ದು, ಉತ್ಪಾದನೆಯಲ್ಲೂ ಹೆಸರು ಮಾಡುತ್ತಿರುವುದೆಂದರೆ ಅದು ಹೈನುಗಾರಿಕೆ ಉದ್ಯಮ.

Food and Agriculture Corporate Statistical Database (FAOSTAT) ಪ್ರಕಾರ, 2018ರಲ್ಲಿ 180 ಮಿಲಿಯನ್ ಟನ್‌ಗಳಿಗಿಂತ ಹೆಚ್ಚು ಹಾಲನ್ನು ಉತ್ಪಾದಿಸಿ, ವಿಶ್ವದ ಯಾವುದೇ ದೇಶ ಮಾಡದ ಅತಿದೊಡ್ಡ ಹೈನು ಉತ್ಪನ್ನದ ದಾಖಲೆಯನ್ನು ಭಾರತ ಬರೆಯಿತು. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ವಾರ್ಷಿಕ ಉತ್ಪಾದನೆಯ ಶೇ.22ರಷ್ಟು ಒಕ್ಕೂಟದ ಎಲ್ಲಾ ಸದಸ್ಯ ರಾಷ್ಟ್ರಗಳಿಗಿಂತ ಮೂಲಕ ಭಾರತದ ಡೈರಿ ಉದ್ಯಮವು ಜಾಗತಿಕ ಮಟ್ಟದ ಪ್ರಮುಖ ಉತ್ಪಾದಕರ ನಾಯಕನಂತೆ ವೇಗದಲ್ಲಿ ಬೆಳೆಯುತ್ತಿದೆ.

ಭಾರತೀಯ ಡೈರಿ ಮಾರುಕಟ್ಟೆಯು ಶತಕೋಟಿ ಡಾಲರ್ ಮೌಲ್ಯದ್ದಾಗಿದ್ದರೂ, ಐರೋಪ್ಯ ಒಕ್ಕೂಟ ಹಾಗೂ ಅಮೇರಿಕಾ ದೇಶಗಳು ತಮ್ಮ ಉತ್ಪನ್ನಗಳನ್ನು ರಫ್ತು ಮಾಡುತ್ತಿರುವಷ್ಟು ಭಾರತವು ಪ್ರಮುಖ ರಫ್ತುದಾರ ದೇಶವಲ್ಲ. ಇದಕ್ಕೆ ಕಾರಣ ಸ್ಥಳಿಯ ಬಳಕೆಗೆ ಹೆಚ್ಚು ಬೇಡಿಕೆ ಮತ್ತು ಅವಶ್ಯವಿರುವುದರಿಂದ ಸಹಜವಾಗಿಯೇ ರಫ್ತಿಗೆ ಆದ್ಯತೆ ಕಡಿಮೆ ಎನ್ನಬಹುದು.

ಭಾರತದಲ್ಲಿನ ರೈತನೊಬ್ಬ ಸರಾಸರಿ ಹತ್ತು ಹಸುಗಳನ್ನು ಸಾಕಿಕೊಂಡಿದ್ದರೆ, ಅವುಗಳ ಮೂಲಕ ತಿಂಗಳಿಗೆ 1ರಿಂದ 2 ಲಕ್ಷದವರೆಗೆ ದುಡಿಯುತ್ತಾನೆ. ಇದರಂತೆ ದಿನಿತ್ಯದ ಲಾಭಗಳಿಕೆಯು ರೂ.800 ಗಳಷ್ಟಿದ್ದರೆ ಮೇವು ಸಾರಿಗೆ ವೆಚ್ಚ ಇತ್ಯಾದಿ ಸೇರಿ 130 ರು.ಗಳಷ್ಟಾಗಬಹುದು ಎಂದು ಅಂದಾಜಿಸಲಾಗಿದೆ.

ದೇಶದ ಪ್ರಮುಖ ಹಾಲು ಉತ್ಪಾದಿಸುವ ರಾಜ್ಯಗಳಾದ ರಾಣೆ ಸ್ಥಾನ (ಶೇ.15.05) ಉತ್ತರಪ್ರದೇಶ (ಶೇ 14.23), ಮಧ್ಯ ಪ್ರದೇಶ (ಶೇ.8.0), ಗುಜರಾತ್ (ಶೇ.7.50), ಆಂಧ್ರಪ್ರದೇಶ (ಶೇ.6.97) ಮತ್ತು ಕರ್ನಾಟಕ ಶೇ.3.1)ಗಳೆಲ್ಲ ಸೇರಿಕೊಂಡು ದೇಶದ ಒಟ್ಟು ಹಾಲಿನ ಉತ್ಪಾದನೆಗೆ ರೂ.69.10ರಷ್ಟು ಕೊಡುಗೆ ನೀಡುತ್ತಿವೆ. ಭಾರತದ ಹಾಲಿನ ಉತ್ಪಾದನೆಯು ಕಳೆದ 9 ವರ್ಷಗಳಲ್ಲಿ ಶೇ.88ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಮತ್ತು 2022-23ರಲ್ಲಿ 230.50 ಮಿಲಿಯನ್ ಟನ್‌ಗಳಿಗೆ ಏರಿಕೆಯಾಗಿದೆ. ಕಳೆದ ದಶಕದಲ್ಲಿ ಹಾಲಿನ ಉತ್ಪಾದನೆಯು ಅಂಉಖ ಪ್ರಕಾರ ಶೇ.6ರಷ್ಟು ಹೆಚ್ಚಾಗಿದೆ. ಈ ಎಲ್ಲ ಸಾಧನೆ ಮತ್ತು ಬೃಹತ್ ಹೈನುಗಾರಿಕೆ ಉದ್ಯಮಕ್ಕೆ ಅಡಿಪಾಯವಾಗಿದ್ದು ಮಾತ್ರ ಅಮುಲ್ ಎಂಬ ಸಂಸ್ಥೆ. ಸಂಸ್ಕೃತದಲ್ಲಿ 'ಬೆಲೆ ಕಟ್ಟಲಾಗದ್ದು' ಎಂಬ ಅರ್ಥ ಹೊಂದಿರುವ ಈ ಸಂಸ್ಥೆ ಹುಟ್ಟಿಕೊಂಡ ರೀತಿ ಮಾತ್ರ ಆಶ್ಚರ್ಯಕರ.

ಸಹಕಾರಿ ತತ್ವದಡಿಯಲ್ಲಿ ಹುಟ್ಟಿ, ರಾಷ್ಟ್ರದಲ್ಲಿ ಸಹಕಾರ ಡೈರಿ ಅಭಿಯಾನಕ್ಕೆ ಉತ್ತೇಜನ ಒದಗಿಸುವ ಮೂಲಕ ಜನ್ಮತಳೆದ ಅಮುಲ್ ಪ್ರಾರಂಭದಲ್ಲಿ ಕೈರಾ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘವಾಗಿ ನೋಂದಣಿಯಾಯಿತು. ಸ್ಥಳೀಯ ವ್ಯಾಪಾರಿಗಳಿಂದಾಗುತ್ತಿದ್ದ ಶೋಷಣೆಗೆ ಪ್ರತಿಕ್ರಿಯೆಯಾಗಿ ಇದನ್ನು ಆನಂದ್ (ಗುಜರಾತಿನ ಕೈರಾ ಜಿಲ್ಲೆ) ಎಂಬ ಸಣ್ಣ ಪಟ್ಟಣದಲ್ಲಿ ಸ್ಥಾಪಿಸಲಾಯಿತು.

ಹಾಲು ಉತ್ಪಾದಕರು ಆನಂದ್ ನಲ್ಲಿದ್ದ ಏಕೈಕ ಡೈರಿಯಾಗಿದ್ದ ಪೋಲ್ಸೋನ್ ಡೈರಿಗೆ ಹಾಲನ್ನು ಪೂರೈಸಲು ಬಹುದೂರದವರಿಗೆ ಪ್ರಯಾಣಿಸಬೇಕಿತ್ತು. ಉತ್ಪಾದಕರು ಪಾತ್ರೆಗಳಲ್ಲಿ ಹಾಲನ್ನು ಒಯ್ಯುತ್ತಿದ್ದುದರಿಂದ ವಿಶೇಷವಾಗಿ ಬೇಸಿಗೆ ಋತುವಿನಲ್ಲಿ ಹಾಲು ಹುಳಿಯಾಗುತ್ತಿತ್ತು. ಈ ಏಜೆಂಟರು ಉತ್ಪಾದನೆ ಮತ್ತು ಋತುವನ್ನು ಅವಲಂಬಿಸಿ ಸ್ವೇಚ್ಛಾಚಾರದಿಂದ ಹಾಲಿನ ದರವನ್ನು ನಿರ್ಧರಿಸುತ್ತಿದ್ದರು. ಈ ರೀತಿಯ ತಾರತಮ್ಯದ ಸಮಸ್ಯೆ ಅಂದಿನ ನಾಯಕ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಗೊತ್ತಾಯಿತು. ರೈತರು ಸಹಕಾರ ಸಂಘವನ್ನು ಸ್ಥಾಪಿಕೊಂಡು ಪೋಲ್ಸೋನ್ ಹಾಲು ಮಾರಾಟ ಮಾಡುವ ಬದಲಿಗೆ ಮುಂಬಯಿ ಹಾಲು ಯೋಜನೆಗೆ ನೇರವಾಗಿ ಹಾಲನ್ನು ಸರಬರಾಜು ಮಾಡುವಂತೆ ಸರ್ದಾರ್ ಪಾಟೇಲ್ ರೈತರಿಗೆ ಸಲಹೆ ನೀಡಿದರು.

ಇದು ಭಾರತದ ಹಾಲು ಉದ್ಯಮಕ್ಕೆ ಬಹುದೊಡ್ಡ ತಿರುವು ನೀಡಿತು. 1946ರಲ್ಲಿ ಕೈರಾ ಜಿಲ್ಲೆಯಲ್ಲಿ ಹಾಲನ್ನು ಸಂಗ್ರಹಿಸುವ, ಸಂಸ್ಕರಿಸುವ ಕೈರಾ ಜಿಲ್ಲಾ ಸಹಕಾರ ಸಂಘವು ಸ್ಥಾಪಿತವಾಯಿತು. ಬಹುತೇಕ ಉತ್ಪಾದಕರು ಅತಿ ಸಣ್ಣ ರೈತರಾಗಿದ್ದು, ಪ್ರತಿದಿನ 1-2 ಲೀಟರ್ ಹಾಲನ್ನು ಪೂರೈಸಲು ಮಾತ್ರವೇ ಶಕ್ತರಾಗಿದ್ದರು. ಅತಿ ಸಣ್ಣ ಹಾಲು ಉತ್ಪಾದಕರನ್ನು ಸಂಘಟಿಸಲು ಪ್ರತಿ ಗ್ರಾಮದಲ್ಲಿ ಗ್ರಾಮ ಮಟ್ಟದ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು.

ಮುಂದೆ ಡಾ.ವಿ.ಕುರಿಯನ್ ಎಂಬ ವ್ಯಕ್ತಿಯು ಪರಿಶ್ರಮವನ್ನು ಹಾಕಿದ್ದರ ಫಲವಾಗಿ ಇಂದು ವಿಶ್ವ ಹೈನುಗಾರಿಕೆಯಲ್ಲಿ ಭಾರತ ಮುಂಚೂಣಿಯಲ್ಲಿರಲು ಸಾಧ್ಯವಾಗಿದೆ. ಇದರಲ್ಲಿ ಅಮುಲ್ ಬಹುದೊಡ್ಡ ಪಾತ್ರವಹಿಸಿದೆ. ಸಹಕಾರ ಸಂಘದಲ್ಲಿ ದೇಶೀಯ ತಂತ್ರಜ್ಞಾನದ ಮೂಲಕ ವಿಶ್ವದಲ್ಲೇ ಮೊದಲ ಬಾರಿಗೆ ಎಮ್ಮೆಯ ಹಾಲಿನಿಂದ ಕೆನೆತಗೆದು ಹಾಲಿನ ಪುಡಿಯ ಯಶಸ್ವಿ ಉತ್ಪಾದನೆ ಮಾಡಲಾಯಿತು. ಈ ಮೂಲಕ ಭಾರತದಲ್ಲಿ ಅಧುನಿಕ ಡೈರಿ ಉದ್ಯಮಕ್ಕೆ ಅಡಿಪಾಯ ಹಾಕಲಾಯಿತು. 1973 ರಲ್ಲಿ ಗುಜರಾತ್ ಸಹಕಾರ ಹಾಲು ಮಾರಾಟ ಒಕ್ಕೂಟವು ಸ್ಥಾಪನೆ ಯಾಗುವ ಮೂಲಕ, ಭಾರತದಲ್ಲಿ ಕ್ಷೀರಕ್ರಾಂತಿಗೆ ಬುನಾದಿ ಹಾಕಿದ ಅಮುಲ್ ಸಂಸ್ಥೆಯಿಂದ ಇಂದು ನೂರಾರು ಸಂಸ್ಥೆಗಳು ಜನ್ಮ ತಳೆದಿವೆ. ಇಂಥ ಹಿನ್ನೆಲೆಯಿರುವ ಕೃಷಿಗೆ ಪೂರಕವಾಗಿ ನಡೆಯುವ ಹೈನುಗಾರಿಕೆಯು ಭಾರತದಲ್ಲಿ ಅನಾದಿ ಕಾಲದಿಂದಲೂ ವ್ಯವಸ್ಥಿತ 'ಇಕೋ ಸಿಸ್ಟಂ' ಒಂದನ್ನು ರೂಪಿಸಿಕೊಂಡು ಬಂದಿದೆ. ಹಿಂದೆಲ್ಲ ದೇಸಿ ಹಸುಗಳು ಇದ್ದವು. ಹೈಬ್ರೀಡ್ ಹಸುಗಳ ಸಾಕಾಣಿಕೆ

ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಇವೆಲ್ಲವೂ ಭಾರತೀಯ ಅರ್ಥ ವ್ಯವಸ್ಥೆಗೆ ತನ್ನದೇ ಆದ ಕೊಡುಗೆ ನೀಡುತ್ತಿವೆ.

ಜಗತ್ತಿನಲ್ಲಿ ಏನೇ ಆಗುಹೋಗುಗಳು ಸಂಭವಿಸುತ್ತಿದ್ದರೂ ಹೈನುಗಾರರು ತಮ್ಮ ಕಾಯಕ್ಕೆ ವಿರಾಮ ನೀಡುವುದಿಲ್ಲ. ನಿತ್ಯ ಸೂರ್ಯೋದಯಕ್ಕೂ ಪೂರ್ವದಲ್ಲಿ ಅವರ ಕಾಯಕ ಆರಂಭವಾಗಿ ಬೆಳಗ್ಗೆ 8–9 ಗಂಟೆಯೊಳಗೆ ಡೈರಿಗೆ ಹಾಲು ಪೂರೈಕೆ ಮಾಡುವುದರೊಂದಿಗೆ ಒಂದು ಹಂತದ ಕಾರ್ಯ ಪೂರ್ಣವಾಗುತ್ತದೆ. ಮಧ್ಯಾಹ್ನ 3 ಗಂಟೆಯ ನಂತರ ಮತ್ತೆ ಅದೇ ಕಾಯಕ ಶುರುಮಾಡಿ, ಸಂಜೆ 6–7 ಗಂಟೆಯೊಳಗೆ ಪೂರ್ಣಗೊಳಿಸುತ್ತಾರೆ. ಇದರಲ್ಲಿ ಬಹುಮುಖ್ಯವಾಗಿ ಎರಡು ಅಂಶ ಅಡಗಿದೆ. ಒಂದು ಕೌಟುಂಬಿಕ ಆರ್ಥಿಕ ವೃದ್ಧಿ ಇನ್ನೊಂದು ಉದ್ಯೋಗಾವಕಾಶ, ಹೈನುಗಾರಿಕೆ ಒಂದು ರೀತಿಯ ಮೌನಯಾನ ಇದ್ದಂತೆ, ಇದನ್ನೇ ಉಪ ಕಸುಬಾಗಿಸಿಕೊಂಡು ಮುಖ್ಯವೃತ್ತಿ ನಿರ್ವಹಿಸುವವರು ಅದೆಷ್ಟೋ ಜನರಿದ್ದಾರೆ.

ಮನೆಯ ತಾಯಂದಿರು ಹೈನುಗಾರಿಕೆಯಲ್ಲಿ ಮಕ್ಕಳನ್ನು ಓದಿಸಿ, ಉನ್ನತ ವಿದ್ಯಾಭ್ಯಾಸ ನೀಡಿ ಉತ್ತಮ ವೇತನದ ಉದ್ಯೋಗ ಪಡೆಯುವಲ್ಲಿಯೂ ಸಹಕರಿಸಿದ್ದಾರೆ. ಹೀಗೆ ಭಾರತದಲ್ಲಿ ಹೈನುಗಾರಿಕೆಯು 'ಇಕೋ ಸಿಸ್ಟಂ' ಕೌಟುಂಬಿಕ ಆದಾಯ, ಸ್ಥಳೀಯ ಆದಾಯ ವೃದ್ಧಿಯಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದೆ. ಅದನ್ನೀಗ ಇನ್ನೊಂದು ಹಂತಕ್ಕೆ ಮೇಲೇರಿಸುವ ಕಾರ್ಯವಾಗಬೇಕು.

ಹೈನುಗಾರಿಕೆಗೆ ಯುವಪೀಳಿಗೆಯವರು ಬರುತ್ತಿದ್ದಾರೆ. ಅವರಿಗೆ ಅಗತ್ಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದರ ಜತೆಗೆ ಉತ್ತೇಜನವನ್ನೂ ನೀಡಬೇಕು. ಹೈನುಗಾರಿಕೆ ಮಾಡಲು ಬರುವ ಯುವಜನತೆಗೆ ನಿರಾಸೆಯಾಗದಂತೆ ನೋಡಿಕೊಳ್ಳುವ ಮಹತ್ತರ ಜವಾಬ್ದಾರಿ ಸರಕಾರ ಮತ್ತು ಸಾರ್ವಜನಿಕ ವ್ಯವಸ್ಥೆಯ ಮೇಲೂ ಇದೆ. ಹೈನುಗಾರಿಕೆಗೆ ಆಧುನಿಕತೆಯ ಸ್ಪರ್ಶ ಈಗಾಗಲೇ ಸಿಕ್ಕಿದೆ. ಈ ಮಧ್ಯೆ ದೇಸಿ ಹಸುಗಳ ಸಂರಕ್ಷಣೆ ಹಾಗೂ ಸಾಕಾಣಿಕೆಯೂ ಹೆಚ್ಚಬೇಕು. ಹೈನುಗಾರಿಕೆಯು ಉದ್ಯೋಗದ ಪ್ರಮುಖ ಮೂಲವಾಗಿಸಬೇಕು. ಈ ವಿಚಾರವಾಗಿ ಪಶುಸಂಗೋಪನಾ ಇಲಾಖೆ, ಸರಕಾರ ಒಂದಿಷ್ಟು ಹೊಸ ಯೋಜನೆಗಳನ್ನು ರೂಪಿಸಬೇಕು. ಹೈನುಗಾರಿಕೆಯ ಬಗ್ಗೆ ಕಾಲೇಜುಗಳಲ್ಲೀಯೂ ಅರಿವು ಮೂಡಿಸುವ ಕಾರ್ಯ ಆಗಬೇಕು. ಇದೇ ವಿಭಾಗದಲ್ಲಿ ಪದವಿ ಪಡೆದರೆ ಇನ್ನಷ್ಟು ಹೊಸ ಪ್ರಯೋಗಗಳನ್ನು ಮಾಡಬಹುದು. ಸರಕಾರ ಕೂಡ ಹಾಲಿಗೆ ನೀಡುವ ಪ್ರೋತ್ಸಾಹಧನ ಹೆಚ್ಚಳ ಮಾಡುವುದು. ಹಸು ಖರೀದಿಗೆ ಪ್ರೋತ್ಸಾಹಧನ ಅಥವಾ ಸಬ್ಸಿಡಿ ಯೋಜನೆಗಳನ್ನು ಸಮರ್ಪಕವಾಗಿ ಒದಗಿಸುವುದು. ಸ್ಥಳೀಯವಾಗಿ ಡೈರಿಗಳ ಮೂಲಕ ಅರಿವು ಕಾರ್ಯಕ್ರಮ ನಡೆಯಬೇಕು. ಆ ಮೂಲಕ ಭಾರತೀಯ ಹೈನುಗಾರಿಕೆ "ಇಕೋ ಸಿಸ್ಟಂ' ಅನ್ನು ಇನ್ನಷ್ಟು ಗಟ್ಟಿಗೊಳಿಸುವ ಜತೆಗೆ ಆದಾಯ ಮೂಲದ ವೃದ್ಧಿ ಹಾಗೂ ಉದ್ಯೋಗಾವಕಾಶಗಳನ್ನು ಕಲಿಸಲು ಸಾಧ್ಯ ತೀರ ಕಡಿಮೆ ಖರ್ಚು, ಸಮೃದ್ಧ ಬದುಕು ಸುಸಾಧ್ಯ.

**ಆಧಾರ:** ವಿಶ್ವವಾಣಿ, ದಿನಾಂಕ: 26.09.2024

## 5. ಒಂದು ದೇಶ ಒಂದು ಚುನಾವಣೆಯ ಆಚೆ ಈಚೆ...

ಸ್ವಾತಂತ್ರ್ಯಾ ನಂತರದಲ್ಲಿ 1967ರವರೆಗೆ ದೇಶದಲ್ಲಿ ಏಕಕಾಲಕ್ಕೆ ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಚುನಾವಣೆಗಳು ನಡೆಯುತ್ತಿದ್ದವು. ಆದರೆ 1968 ಮತ್ತು 1969ರ ಅವಧಿಯಲ್ಲಿ ಕೆಲ ರಾಜ್ಯಗಳ ವಿಧಾನಸಭೆಗಳು ಅವಧಿಪೂರ್ವ ವಿಸರ್ಜನೆ ಅದುದರಿಂದ ಈ ಸಂಪ್ರದಾಯ ಹಳಿತಪ್ಪಿತು.

ಈಗ ಏಕ ಚುನಾವಣೆ ಪರಿಕಲ್ಪನೆಗೆ ಹೊಸ ವೇಗ ಬಂದಿದೆ ಎಂದು ಹೇಳಬಹುದು. ಪ್ರಧಾನಿ ನರೇಂದ್ರ ಮೋದಿ ಅವರು ಈ ವಿಷಯದ ಬಲವಾದ ಪ್ರತಿಪಾದಕರು. ಹಿಂದೆಯೇ ಅವರು ದೇಶದ ಗಮನವನ್ನು ಅತ್ತ ಸೆಳೆದಿದ್ದರು. 2018ರಲ್ಲಿ ಭಾರತ ಕಾನೂನು ಆಯೋಗವು ಈ ಬಗ್ಗೆ ಒಂದು ಕರಡನ್ನು ಬಿಡುಗಡೆ ಮಾಡಿತು. ಒಂದು ವರ್ಷದ ಅವಧಿಯಲ್ಲಿ ಪಂಚಾಯತ್‌ದಿಂದ ಹಿಡಿದು ಲೋಕಸಭೆವರೆಗೆ ನಿರ್ದಿಷ್ಟ

ಕಾಲಾವಧಿಯಲ್ಲಿ ಚುನಾವಣಿಗಳನ್ನು ನಡೆಸಬೇಕು ಎಂಬ ಅಂಶ ಅದರಲ್ಲಿತ್ತು, ಏಕಕಾಲಕ್ಕೆ ಚುನಾವಣೆ ನಡೆಸುವುದರಿಂದ ಸಾರ್ವಜನಿಕ ಹಣ ಉಳಿಯುತ್ತದೆ; ಆಡಳಿತ ಯಂತ್ರ ಮತ್ತು ಭದ್ರತಾ ಪಡೆಗಳ ಮೇಲೆ ಬೀಳುವ ಹೊರೆ ಕಡಿಮೆಯಾಗುತ್ತದೆ; ಸರ್ಕಾರಗಳ ನೀತಿ ನಿರ್ಧಾರಗಳನ್ನು ಕ್ಲುಪ್ತ ಕಾಲಕ್ಕೆ ಅನುಷ್ಠಾನಕ್ಕೆ ತರಬಹುದು ಮತ್ತು ಸದಾ ಚುನಾವಣೆಗಳತ್ತಲೇ ತಲೆಬಿಸಿ ಮಾಡಿಕೊಳ್ಳುವ ಬದಲಿಗೆ ಅಭಿವೃದ್ಧಿಯತ್ತ ಚಿತ್ತ ಹರಿಸಬಹುದು ಎಂದು ಇದರ ಅನುಕೂಲಗಳ ಬಗ್ಗೆ ಕಾನೂನು ಆಯೋಗವು ವಿವರಿಸಿತ್ತು.

ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳನ್ನು ನಡೆಸಲು ಕೇಂದ್ರೀಯ ಚುನಾವಣಾ ಆಯೋಗಕ್ಕೆ 4500 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಸಂಸದೀಯ ಸಮಿತಿಯೊಂದು ಅಂದಾಜಿಸಿತ್ತು. ದೇಶಾದ್ಯಂತ ಎರಡು ಹಂತಗಳಲ್ಲಿ ಚುನಾವಣೆಗಳನ್ನು ನಡೆಸುವುದು ಹೆಚ್ಚು ಪ್ರಾಯೋಗಿಕವಾಗುತ್ತದೆ ಎಂದು ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಕಾನೂನು–ನ್ಯಾಯ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿಯು ತನ್ನ 79ನೇಯ ವರದಿಯಲ್ಲಿ ಹೇಳಿತ್ತು.

'ಒಂದು ದೇಶ ಒಂದು ಚುನಾವಣೆ' ವಿಷಯದ ಕುರಿತು ಪರಿಶೀಲನೆ ನಡೆಸಲು ಉನ್ನತ ಸಮಿತಿಯನ್ನು ನೇಮಿಸಿ ಕೇಂದ್ರ ಸರ್ಕಾರವು 2023ರ ಸೆಪ್ಟೆಂಬರ್ 2ರಂದು ಅಧಿಸೂಚನೆ ಹೊರಡಿಸಿತು. ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ ನೇತೃತ್ವದ ಈ ಸಮಿತಿಯು ಕೇಂದ್ರ ಗೃಹಸಚಿವ ಅಮಿತ್ ಷಾ, ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘಾಲ್, ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ, ಕೇಂದ್ರದ ಮಾಜಿ ಸಚಿವ ಗುಲಾಂ ನಬಿ ಆಜಾದ್, 15ನೆಯ ಹಣಕಾಸು ಆಯೋಗದ ಅಧ್ಯಕ್ಷ ಎನ್.ಕೆ.ಸಿಂಗ್. ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಹರೀಶ್ ಸಾಳ್ವೆ ಮುಂತಾದವರನ್ನು ಒಳಗೊಂಡಿತ್ತು. ಇದೇ ವರ್ಷದ ಮಾರ್ಚ್ 14ರಂದು ಸಮಿತಿಯು ತನ್ನ ಅಂತಿಮ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿತು. ಈ ವರದಿ 18000 ಪುಟಗಳನ್ನು ಹೊಂದಿದ್ದು, ಐದು ಸಂಪುಟಗಳಲ್ಲಿ ವಿಶದಪಡಿಸಿದೆ. ಸರ್ಕಾರಕ್ಕೆ ಹಲವು ಶಿಫಾರಸುಗಳನ್ನು ಮಾಡಿದೆ. ಹಾಲಿ ಲೋಕಸಭಾ (ಅಂದರೆ ಮೇ ತಿಂಗಳಲ್ಲಿ ನಡೆದದ್ದು) ಚುನಾವಣೆ ಮುಗಿದ ನಂತರ, 2029ರ ಸಾರ್ವತ್ರಿಕ ಚುನಾವಣೆಯಿಂದ ಹೊಸ ಚುನಾವಣಾ ಚಕ್ರ ಆರಂಭಿಸುವ ನಿಟ್ಟಿನಲ್ಲಿ ಒಂದು ಸಮಯವನ್ನು ಗೊತ್ತುಪಡಿಸಬೇಕು. ಈ ಸಮಯಕ್ಕೆ, ಐದು ವರ್ಷ ಪೂರೈಸದ ರಾಜ್ಯ ವಿಧಾನಸಭೆಗಳ ಅವಧಿಯನ್ನು ವಿಸ್ತರಿಸಲು ಮತ್ತು ಆ ಹೊತ್ತಿಗೆ ಐದು ವರ್ಷ ಅವಧಿಯನ್ನು ಪೂರ್ಣಗೊಳಿಸಿದ ವಿಧಾನಸಭೆಗಳನ್ನು ಅವಧಿಪೂರ್ವ ವಿಸರ್ಜನೆ ಮಾಡಲು ಕ್ರಮ ಕೈಗೊಳ್ಳಬೇಕು. ಏಕ ಚುನಾವಣೆ ಕಾರ್ಯಸಾಧ್ಯ ಆಗುವ ದಿಸೆಯಲ್ಲಿ ಒಟ್ಟು 18 ಸಂವಿಧಾನ ತಿದ್ದುಪಡಿಗಳು ಆಗಬೇಕು. ಅದರಲ್ಲಿ ಬಹು ಮುಖ್ಯವಾದುದು 83ನೆಯ ಪರಿಚ್ಛೇದ (ಸಂಸತ್ ಸದನಗಳ ಅವಧಿ) ಮತ್ತು 172ನೆಯ ಪರಿಚ್ಛೇದ ರಾಜ್ಯ ವಿಧಾನಸಭೆಗಳ ಅವಧಿ) ಇದರ ಜೊತೆಗೆ, ಕೇಂದ್ರವು ಅಂಗೀಕರಿಸುವ ಕೆಲ ತಿದ್ದುಪಡಿಗಳನ್ನು ರಾಜ್ಯಗಳು ಸ್ಥಿರೀಕರಿಸಬೇಕು. ಸರ್ವೋಚ್ಚ ನ್ಯಾಯಾಲಯದ ನಾಲ್ವರು ನಿವೃತ್ತ ಮುಖ್ಯ ನ್ಯಾಯಾಧೀಶರು, ಉಚ್ಚ ನ್ಯಾಯಾಲಯಗಳ ಮೂವರು ಮಾಜಿ ಮುಖ್ಯ ನ್ಯಾಯಾಧೀಶರು ಹಾಗೂ ಚುನಾವಣಾ ಆಯೋಗದ ಮಾಜಿ ಆಯುಕ್ತರ ಸಲಹೆಗಳನ್ನು ಆಯೋಗವು ಪಡೆದಿತ್ತು. ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ), ಇಂಡಿಯನ್ ಚೆಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅನಿಸಿಕೆಗಳನ್ನು ಕೇಳಲಾಗಿತ್ತು. ಒಟ್ಟು 47 ರಾಜಕೀಯ ಪಕ್ಷಗಳ ಅಭಿಪ್ರಾಯ ಕೇಳಿದ್ದು, ಈ ಪೈಕಿ 32 ಪಕ್ಷಗಳು ಏಕ ಚುನಾವಣೆಯನ್ನು ಬೆಂಬಲಿಸಿವೆ. ಇದರಿಂದ ದೇಶದ ಸಂಪನ್ಮೂಲ ಉಳಿಯುವುದಲ್ಲದೆ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಎಂದು ಹೇಳಿರುವುದಾಗಿ ಆಯೋಗವು ತನ್ನ ವರದಿಯಲ್ಲಿ ದಾಖಲಿಸಿದೆ.

ಈ ಚಿಂತನೆಯು ಪ್ರಜಾಪ್ರಭುತ್ವವಿರೋಧಿ ಹಾಗೂ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು. ಇದರಿಂದ ಪ್ರಾದೇಶಿಕ ಪಕ್ಷಗಳು ಮೂಲೆಗೆ ಸರಿದು ರಾಷ್ಟ್ರೀಯ ಪಕ್ಷಗಳ ಮೇಲುಗೈ ಆಗುತ್ತದೆ' ಎಂದು ಈ ಪ್ರಸ್ತಾಪ ವಿರೋಧಿಸುವ ಪಕ್ಷಗಳು ಹೇಳಿವೆ ಎಂದು ಉನ್ನತಾಧಿಕಾರ ಸಮಿತಿ ವಿವರಿಸಿದೆ. ಇದರ ಜೊತೆಗೆ 21,554 ಸಾರ್ವಜನಿಕ ಅಭಿಪ್ರಾಯಗಳನ್ನು ದಾಖಲಿಸಲಾಗಿದ್ದು ಈ ಪೈಕಿ ಶೇ.81ರಷ್ಟು ಜನರು ಏಕ ಚುನಾವಣೆ ಪರವಾಗಿ ಒಲವು ತೋರಿದ್ದಾರೆ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ. ಸಮಿತಿಯು ಒಟ್ಟು 191 ದಿನಗಳ ಕಾಲ ಕಾರ್ಯನಿರ್ವಹಿಸಿತ್ತು. ಇದೇ ಸೆಪ್ಟೆಂಬರ್ 18ರಂದು ಕೇಂದ್ರ ಸಚಿವ ಸಂಪುಟವು 'ಒಂದು ದೇಶ ಒಂದು ಚುನಾವಣೆ'ಗೆ ಅನುಮೋದನೆ ನೀಡಿದೆ. ಸಮಿತಿ ಶಿಫಾರಸ್ಸಿನ ಅನ್ವಯ, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಒಟ್ಟಿಗೆ ನಡೆಯಬೇಕು. ಅದಾದ 100 ದಿನಗಳಲ್ಲಿ ವ್ಯವಸ್ಥೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬೇಕು. ಈ ಸಮಿತಿ ವರದಿ ತರುವಾಯದಲ್ಲಿ ಪರ–ವಿರೋಧ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಈ ಪರಿಕಲ್ಪನೆ ಸಾಕಾರವಾಗಬೇಕು ಎಂದಾದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಅನಿವಾರ್ಯ. ಅಂದರೆ, ತಿದ್ದುಪಡಿ ಪ್ರಸ್ತಾವನೆಗೆ ಸಂಸತ್‌ನಲ್ಲಿ ಮೂರನೇ ಎರಡರಷ್ಟು ಸಂಸದರ ಬೆಂಬಲ ಅಗತ್ಯ. ಅಂದರೆ ಲೋಕಸಭೆಯಲ್ಲಿ 362 ಮತ್ತು ರಾಜ್ಯಸಭೆಯಲ್ಲಿ 167 ಸದಸ್ಯರು ತಿದ್ದುಪಡಿ ಪರವಾಗಿ ಮತ ಚಲಾಯಿಸಬೇಕು. ಆದರೆ, ಬದಲಾದ ರಾಜಕೀಯ ಸಮೀಕರಣದಲ್ಲಿ ಅದು ಅಸಾಧ್ಯ ಎಂಬುದು ಸ್ಪಷ್ಟ ಲೋಕಸಭೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಒಟ್ಟು ಬಲ 293. ಇನ್ನೊಂದೆಡೆ, ಈ ಪ್ರಸ್ತಾಪವನ್ನು ಪ್ರಬಲವಾಗಿ ವಿರೋಧಿಸುವ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ಬಲ 233. ಹೀಗಾಗಿ ಸಂವಿಧಾನ ತಿದ್ದುಪಡಿಗೆ ಅಗತ್ಯವಾದ ಮತ ಸಿಗುವುದು ಕಷ್ಟಸಾಧ್ಯ. ಇದಲ್ಲದೆ, ಏಕ ಚುನಾವಣೆ ವಾಸ್ತವಕ್ಕೆ ಬರಲು ರಾಜ್ಯ ಸರ್ಕಾರಗಳ ಸಹಕಾರವೂ ಬೇಕಾಗುತ್ತದೆ. ಐಎನ್‌ಡಿಐಎ ಮೈತ್ರಿಕೂಟದ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಸಹಕಾರ ಸಿಗುವುದು ಕನಸು. ಹೀಗಿರುವಾಗ ಪ್ರಧಾನಿ ಮೋದಿ ಯಾವ ಲೆಕ್ಕಾಚಾರದ ಮೇಲೆ ಈ ದಾಳ ಉರುಳಿಸಿದ್ದಾರೆ ಎಂದು ಬಿಜೆಪಿಯೇತರ ಪಕ್ಷಗಳ ನಾಯಕರು ಕುತೂಹಲಗೊಂಡಿದ್ದಾರೆ.

ಈ ಸಲದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400 ಸ್ಥಾನಗಳ ಕನಸನ್ನು ಬಿತ್ತಿ ಅದೇ ಪ್ರಕಾರ ಪ್ರಚಾರ ನಡೆಸಿತ್ತು. ಮೋದಿ ನಾಮಬಲ ಇದ್ದರೂ ಬಿಜೆಪಿ ಯಾಕೆ ಕಡಿಮೆ ಸೀಟು ಪಡೆಯಿತು? ಕಾಂಗ್ರೆಸ್, ಸಮಾಜವಾದಿ ಪಕ್ಷ ಮುಂತಾದವು ಯಾಕೆ ಹೆಚ್ಚು ಸ್ಥಾನಗಳಿಸಿದವು ಎಂಬ ಕುರಿತಂತೆ ಈಗಾಗಲೇ ಸಾಕಷ್ಟು ಚರ್ಚೆ–ವಿಶ್ಲೇಷಣೆಗಳು ನಡೆದಿವೆ. ಹಿಂದಿನ ಎರಡು ಅವಧಿಗಳ ಹಾಗೆ ಸಂಸತ್‌ನಲ್ಲಿ ಮಜಬೂತ ಬಹುಮತ ಇಲ್ಲದ ಕಾರಣಕ್ಕೆ ಧಾಡಸಿ ನಿರ್ಣಯಗಳನ್ನು ತೆಗೆದುಕೊಳ್ಳಲು ಪ್ರಧಾನಿ ಮೋದಿ ಅವರಿಗೆ ಸಾಧ್ಯವಾಗುತ್ತಿಲ್ಲ ಎಂಬುದು ನಿಜ. ಇಂಥ ಪರಿಸ್ಥಿತಿ ಇದ್ದಲ್ಲಿ ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿ, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದತಿಯಂಥ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಈಗ ಸಾಧ್ಯವೇ ಇಲ್ಲ. ಬಿಜೆಪಿಗೆ ಈಗ ಕಡಿಮೆ ಸೀಟು ಬಂದಿರುವುದು ಹೌದಾದರೂ, ಸದ್ಯದ ಸ್ಥಿತಿಯಲ್ಲಿ ರಾಹುಲ್ ಗಾಂಧಿ ಆಗಲಿ ಅಥವಾ ಬೇರೆ ಯಾರೇ ವಿಪಕ್ಷ ನಾಯಕರು ಜನಪ್ರಿಯತೆಯಲ್ಲಿ ಮೋದಿ ಸನಿಹಕ್ಕೆ ಬರುವುದು ಸುಲಭವಲ್ಲ. ಇವತ್ತಿಗೂ ಮೋದಿಯನ್ನು ಅಭಿಮಾನದಿಂದ ನೋಡುವ ಆರಾಧಿಸುವ, ಅವರ ನೀತಿ ನಿರ್ಧಾರಗಳನ್ನು ಸಮರ್ಥಿಸುವ ದೊಡ್ಡ ವರ್ಗವೇ ಇದೆ. ಹೀಗಾಗಿ ಹಾಲಿ ಸನ್ನಿವೇಶದಲ್ಲಿ 'ಒಂದು ದೇಶ ಒಂದು ಚುನಾವಣೆ' ಜಾರಿಗೆ ಬಂದಲ್ಲಿ, ಚುನಾವಣೆ ಸಂದರ್ಭದಲ್ಲಿ ಮೋದಿ ಮೋಡಿ ಅವರಿಸಿ ಬಿಜೆಪಿಗೆ ದೊಡ್ಡ ಲಾಭ ಆಗಬಹುದು ಎಂಬ ಕಾರಣಕ್ಕಾಗಿ ಸಹ ವಿರೋಧ ಪಕ್ಷಗಳ ನಾಯಕರು ಈ ಚಿಂತನೆಯನ್ನು ವಿರೋಧಿಸುತ್ತಿದ್ದಾರೆ ಎಂದು ಕೆಲವು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಇನ್ನು, 'ಒಂದು ದೇಶ ಒಂದು ಚುನಾವಣೆ'ಗೆ ವಿರೋಧ ಮಾಡುವವರು ಕೂಡ ತಮ್ಮದೇ ಆದ ವಾದಸರಣಿಯನ್ನು ಮುಂದಿಡುತ್ತಾರೆ. ಏಕ ಚುನಾವಣೆಯು ಭಾರತದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು; ಲೋಕಸಭೆ ಚುನಾವಣೆಯ ಸಮಯಕ್ಕೆ ನಡೆಯಬೇಕು ಎಂಬ ಉದ್ದೇಶದಿಂದ ರಾಜ್ಯವೊಂದರ ವಿಧಾನಸಭಾ ಅವಧಿಯನ್ನು ತಗ್ಗಿಸುವುದು ರಾಜ್ಯಗಳ ಸಂವಿಧಾನದತ್ತ ಅಧಿಕಾರದ ಮೇಲೆ ಪ್ರಹಾರ ಮಾಡಿದ ಹಾಗೆ; ಭಾರತದಂಥ ದೇಶಕ್ಕೆ ಚುನಾವಣೆಗಳನ್ನು ನಡೆಸುವುದು ಹೇಳುವಷ್ಟು ದೊಡ್ಡ ಖರ್ಚಿನ ಬಾಬತ್ತೇನಲ್ಲ. ಅಲ್ಲದೆ ಚುನಾವಣಾ ಖರ್ಚಿನಲ್ಲಿ ರಾಜ್ಯಗಳು ಸಹ ಭರಿಸಬೇಕಾಗುತ್ತದೆ. ಐದು ವರ್ಷಕ್ಕೆ ಒಮ್ಮೆ ಚುನಾವಣೆ ಎಂದಾದಲ್ಲಿ ಜನಪ್ರತಿನಿಧಿಗಳು ಹಾಗೂ ರಾಜಕೀಯ ಪಕ್ಷಗಳು ಸೋಮಾರಿತನ ಬೆಳೆಸಿಕೊಂಡು ಜನರ ಒಡನಾಟ ಕಡಿಮೆ ಮಾಡುವ ಅಪಾಯವೂ ಇರುತ್ತದೆ. ಅದೇ ಆಗೀಗ ಒಂದಲ್ಲ ಒಂದು ಚುನಾವಣೆ ನಡೆಯುತ್ತಿದ್ದರೆ ಜನರ ಎದುರು ಬರಬೇಕು ಎಂಬ ಕಾರಣಕ್ಕಾಗಿ ನಾಯಕರು ಮತ್ತು ಪಕ್ಷಗಳು ಅಲರ್ಟ್ ಆಗಿರುತ್ತಾರೆ ಎಂಬ ವಾದ ಮುಂದಿಡುವವರೂ ಇದ್ದಾರೆ.

ಯಾವುದೇ ಚುನಾವಣೆ ಘೋಷಣೆ ಆದ ಕೂಡಲೇ ನೀತಿ ಸಂಹಿತೆ ಜಾರಿಗೆ ಬರಬೇಕು ಎಂಬುದು ನಿಯಮ. ಇದರಿಂದ ಅಭಿವೃದ್ಧಿ ಚಟುವಟಿಕೆಗಳು ನಡೆಯದೆ ತೊಂದರೆ ಅನುಭವಿಸಬೇಕಾಗುತ್ತದೆ ಎಂಬುದು ಜನಸಾಮಾನ್ಯರ ಆಕ್ಷೇಪ ಕೂಡ ಹೌದು. ಒಂದು ರಸ್ತೆ ರಿಪೇರಿ ಕೂಡ ಮಾಡಿಸಲು ಆಗದ ಸ್ಥಿತಿ ಜನಪ್ರತಿನಿಧಿಗಳದ್ದು. ಇದನ್ನು ತಪ್ಪಿಸಲು ಏಕ ಚುನಾವಣೆಯೇ ಮದ್ದು ಎಂಬುದು ಬಿಜೆಪಿ ಪ್ರತಿಪಾದನೆ. ಅಂದಹಾಗೆ ಈ ವಿಷಯ ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಸಹ ಪ್ರಮುಖ ಸ್ಥಾನ ಪಡೆದಿದೆ. 'ರೀ ಸ್ವಾಮಿ! ನಿಮ್ದು ಒಳ್ಳೇ ಕಥೆ ಆಯ್ತು. ನೀತಿ ಸಂಹಿತೆ ಜಾರಿಯಲ್ಲಿ ಇದೆ ಎಂಬ ಕಾರಣಕ್ಕೆ ಅಭಿವೃದ್ಧಿ ಚಟುವಟಿಕೆ ನಡೆಯಲ್ಲ ಅಂತಾದರೆ, ನಮ್ಮ ದೇಶದಲ್ಲಿ ಇಷ್ಟು ವರ್ಷದಿಂದ ಚುನಾವಣೆಗಳು ನಡೆಯುತ್ತ ಬಂದಿವೆ. ಹಾಗಾದರೆ ಅಭಿವೃದ್ಧಿ ಆಗೇ ಇಲ್ಲ ಅಂತೀರಾ?' ಅಂತ ಕೇಳುತ್ತಾರೆ ಏಕಚುನಾವಣೆ ವಿರೋಧಿಗಳು. ಅದೂ ಅಲ್ಲದೆ ಇಷ್ಟು ದೊಡ್ಡ ಕಸರತ್ತು ನಡೆಸುವುದು ಆಡಳಿತ ಯಂತ್ರದಿಂದ ಸಾಧ್ಯವೇ ಎಂಬ ಅನುಮಾನವನ್ನು ಸಹ ಇವರು ವ್ಯಕ್ತಪಡಿಸುತ್ತಾರೆ.

ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಅಂದಾಕ್ಷಣ ಏಕ ಚುನಾವಣೆ ಜಾರಿಯಾಗೇ ಹೋಯಿತು ಎಂದಲ್ಲ. ಆ ಹಾದಿ ಬಲು ದೂರವಿದೆ. ರಾಜಕೀಯ ಪಕ್ಷಗಳ ಜೊತೆಗೆ ಜನರನ್ನೂ ಒಳಗೊಂಡಂತೆ ರಾಷ್ಟ್ರವ್ಯಾಪಿ ಚರ್ಚೆ ನಡೆದಲ್ಲಿ ಈ ನಿಟ್ಟಿನಲ್ಲಿ ಒಂದು ನಿರ್ಣಯಕ್ಕೆ ಬರಲು ಅನುವಾದೀತು.

ಬೆಲ್ಜಿಯಂ, ಸ್ವೀಡನ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಏಕ ಚುನಾವಣೆ ರೂಢಿ ಇದೆ. ನೇಪಾಳದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಚುನಾವಣೆಗಳನ್ನು ಒಂದೇ ಕಾಲಕ್ಕೆ ನಡೆಸಲು ಅಲ್ಲಿನ ಸರ್ಕಾರವು 2017ರ ಆಗಸ್ಟ್ 21ರಂದು ಆದೇಶ ಹೊರಡಿಸಿತ್ತು. ಆದರೆ ಇದರಿಂದ ಅನೇಕ ಸಮಸ್ಯೆಗಳು ಉಂಟಾಗುತ್ತದೆ ಎಂದು ಚುನಾವಣಾ ಆಯೋಗ ಹೇಳಿದ್ದರಿಂದ ಸರ್ಕಾರ ತನ್ನ ನಿಲುವು ಬದಲಿಸಿ, 2017ರ ನವೆಂಬರ್ 17 ಮತ್ತು ಡಿಸೆಂಬರ್ 7ರಂದು ಎರಡು ಹಂತದಲ್ಲಿ ಚುನಾವಣೆ ನಡೆಸಲು ಒಪ್ಪಿತು.

ಕೊನೇ ಮಾತು: ಭಾರತದಲ್ಲಿ ಚುನಾವಣೆ ಎಂದರೆ ಕೇವಲ ಜನಪ್ರತಿನಿಧಿಗಳ ಆಯ್ಕೆ ಪ್ರಕ್ರಿಯೆ ಮಾತ್ರ ಅಲ್ಲ, ಎಲೆಕ್ಷನ್ ಎಂದರೆ ಪ್ರಜಾಪ್ರಭುತ್ವದ ಉತ್ಸವ. ಹಬ್ಬದ ಎಲ್ಲ ರಂಗು-ಲಕ್ಷಣ ಇಲ್ಲಿ ಹರಡುತ್ತದೆ. ಈಗ ಚುನಾವಣಾ ಪ್ರಚಾರದ ನಿಯಮ ಬದಲಾವಣೆ ಆಗಿರುವುದರಿಂದ ಮೊದಲಿನ ಅಬ್ಬರಾರ್ಭಟ ಕಾಣಿಸದು ಎಂಬುದನ್ನು ಬಿಟ್ಟರೆ ಚುನಾವಣೆ ಖದರ್ ಏನೂ ಕಮ್ಮಿ ಆಗಿಲ್ಲ. ಓಡಾಟ-ಹೋರಾಟ-ಮೇಲಾಟ (ಕೆಲವೊಮ್ಮೆ

ಹೊಡೆದಾಟ!) ಇವೆಲ್ಲ ಚುನಾವಣೆಯ ಅವಿಭಾಜ್ಯ ಅಂಗಗಳು. ಹೀಗಿರುವಾಗ ಐದು ವರ್ಷಕ್ಕೆ ಒಮ್ಮೆ ಮಾತ್ರ ಚುನಾವಣೆ ಎಂಬ ಕಲ್ಪನೆಯೇ ಕೆಲವರಿಗೆ ಅಪಥ್ಯವಾದೀತು!

**ಲೇಖಕರು: ನಾಗರಾಜ ಇಳೆಗಂಡಿ**
**ಆಧಾರ**:ವಿಜಯವಾಣಿ, ದಿನಾಂಕ:28.09.2024

## 6. ಭಾರತ ಭಾಗ್ಯ ವಿಧಾತ ಭುವನದ ಭಾಗ್ಯ

ಸತ್ಯವೆಂಬ ಹಾಲಿಗೆ ಸತ್ವವೆಂಬ ಜೇನನ್ನು ಬೆರೆಸಿದರೆ ಸೃಷ್ಟಿಯಾಗುವುದು ಮೈಮನಗಳಿಗೆ ಮಧುರವಾದ ಪೇಯ; ಇದು ಹಿತಕರವೂ ಹೌದು ಆರೋಗ್ಯಕರವೂ ಹೌದು. ಇದೊಂದು ನೈಸರ್ಗಿಕ ಸೃಷ್ಟಿ. ಇದಲ್ಲದೆ ಇಂತಹ ಮಧುರವಾದ ಪೇಯಕ್ಕೆ ವಿಚಾರವೆಂಬ ನೇಮ ಹಾಗೂ ಆಚಾರವೆಂಬ ನಿಷ್ಠೆ ಜೊತೆಗೂಡಿದರೆ ಅದೊಂದು ನಿಜಕ್ಕೂ ಭುವನದ ಭಾಗ್ಯ ಎನಿಸುವಂತಹ ವ್ಯಕ್ತಿತ್ವ. ನಿರ್ದಾಕ್ಷಿಣ್ಯವಾಗಿ ಹಾಗೂ ಹೆಮ್ಮೆಯಿಂದ ಹೇಳಬಹುದಾದರೆ ಭಾರತದ ರಾಷ್ಟ್ರಪಿತ ಮಹಾತ್ಮಗಾಂಧಿ ಇಂತಹ ಭುವನದ ಭಾಗ್ಯದಂತಹ ವ್ಯಕ್ತಿತ್ವ.

ಗುಜರಾತಿನ ಪೋರಬಂದರಿನಲ್ಲಿ ಮೋಹನದಾಸ ಕರಮಚಂದ್ ಗಾಂಧಿಯಾಗಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಓದಿ ಬೆಳೆದ ನಂತರ ಬದುಕುವ ದಾರಿಯನ್ನು ಅರಸಿ ದಕ್ಷಿಣ ಆಫ್ರಿಕಾದಲ್ಲಿ ನೆಲೆಯೂರಲು ಹೊರಟಾಗ ಸ್ವಾಭಿಮಾನ, ಸ್ವಾತಂತ್ರ್ಯ ಹಾಗೂ ಸಮಾನತೆಯ ಅಂಶಗಳು ಮನುಷ್ಯನಿಗೆ ನಿರ್ಣಾಯಕ ಎಂಬುದು ಅನುಭವ ವೇದ್ಯವಾದ ಮೇಲೆ ಕಠೋರ ತಪಸ್ಸಿನ ರೀತಿಯಲ್ಲಿ ಕೈಗೊಂಡ ಹೋರಾಟ ಹಾಗೂ ಸತ್ಯಾಗ್ರಹಗಳ ಪರಿಣಾಮವಾಗಿ ಭಾರತ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೆ ರಾಷ್ಟ್ರಪಿತ ಎಂಬ ಗೌರವಕ್ಕೂ ಪಾತ್ರವಾದದ್ದು ಅಖಂಡ ಭಾರತ ವಿಭಜನೆಯಾಗಿ ನಂತರ ನರಳಿ ಹಂತ ಹಂತವಾಗಿ ಅರಳಿದ ರೋಚಕ ಕಥೆ. ಗಾಂಧಿ ಮಹಾತ್ಮ ಎಂಬುದು ಈಗಿನ ಮಟ್ಟಿಗೆ ಭಾರತ ಮೂಲದ ಒಂದು ಜಾಗತಿಕ ಹೆಗ್ಗುರುತು. ಸತ್ಯ ಧರ್ಮಗಳ ಮೂಲಕ ಮನುಷ್ಯತ್ವವನ್ನು ಸಾಕ್ಷಾತ್ಕಾರ ಮಾಡಿಕೊಂಡು ಕೂಡಿಬಾಳಿದರೆ ಸ್ವರ್ಗ ಸುಖ ಎಂಬ ಅನುಭವವೇದ್ಯ ದಿವ್ಯ ಮಂತ್ರವನ್ನು ಭಾರತೀಯರಿಗೆ ಕೊಡುಗೆಯಾಗಿ ನೀಡಿರುವುದು ಬತ್ತಲಾರದ ಹೃದಯ ಶ್ರೀಮಂತಿಕೆಯ ಬತ್ತಳಿಕೆ.

ಗಾಂಧಿ ಮಹಾತ್ಮ ಎಂಬ ವ್ಯಕ್ತಿಯೇ ಇಲ್ಲದಿದ್ದರೆ ಭಾರತೀಯ ಉಪ ಖಂಡ ಹೇಗಿರುತ್ತಿತ್ತು ಎಂಬುದನ್ನು ಊಹಿಸಿಕೊಳ್ಳುವುದೇ ಕಷ್ಟ. ಅಖಂಡ ಭಾರತ ಬ್ರಿಟಿಷರ ಭಾರತದ ದಾಸ್ಯ ಸಂಕೋಲೆಯಿಂದ ಬಿಡುಗಡೆಯಾಗುವ ಹೊತ್ತಿಗೆ ವಿಭಜನೆಯಾದ ನಂತರವೂ ಈ ಪ್ರದೇಶದಲ್ಲಿ ಸತ್ತ ಮಹಾತ್ಮರ ನೆರಳಿನಂತೆ ವೈಚಾರಿಕವಾಗಿ ತಂಪೆರೆಯುತ್ತಿರುವ ಅನುಭವವಾಗಲು ಬೇಕಾದದ್ದು ಜನತಂತ್ರದ ಎಲ್ಲರನ್ನೂ ಒಳಗೊಳ್ಳುತ್ತಲೇ ವಿಶಿಷ್ಟವಾದದ್ದನ್ನು ಸಾಧಿಸುವ ಗುಣ.

ನಿಜ ಕಾಲದ ಬದಲಾವಣೆಗೆ ಅನುಗುಣವಾಗಿ ಗಾಂಧಿ ಮಹಾತ್ಮರ ಧ್ಯೇಯೋದ್ದೇಶಗಳು ಕೂಡಾ ಬದಲಾಗಬೇಕು. ಹಾಗೆಂದಾಕ್ಷಣ ಗಾಂಧಿ ತತ್ವಗಳು ವಾದ ಬದಲಾಗಬೇಕು ಎಂದಲ್ಲ. ಆಚರಣೆಯ ವಿಚಾರದಲ್ಲಿ ಬದುಕಿನ ಪರಿಪಾಠಗಳು ಕಾಲಾನುಕ್ರಮದಲ್ಲಿ ಪಡಿಪಾಟಲಿನ ರೂಪ ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲಿ ತಲೆಮಾರಿನ ದೃಷ್ಟಿಕೋನಕ್ಕೆ ಹೊಂದುವ ರೀತಿಯಲ್ಲಿ ಸುಧಾರಣೆ ಆಗಬೇಕು ಎಂಬುದಷ್ಟೆ ಇದರ ವಿವರಣೆ. ಸಾಮಾನ್ಯರಲ್ಲಿ ಸಾಮಾನ್ಯನನ್ನು ಕೇಂದ್ರಬಿಂದುವಾಗಿಸಿದರೆ ಆಗ ಸಾಮಾಜಿಕ ಸುಧಾರಣೆ ಹೊಸ ದಾರಿ ಕಂಡುಕೊಂಡು ಸತ್ಯ ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಆತ್ಮವಿಶ್ವಾಸದ ಕಳೆ ಉಕ್ಕಿದಾಗ ದೇಶದಲ್ಲಿ ಹೊಸ ಆಸೆ ಹೊಸ ಭಾಷೆಗಳ ಕಾಲ ಆರಂಭವಾಗುವುದು ನಿಶ್ಚಿತ ಎಂಬ ಭವಿಷ್ಯವಾಣಿಯನ್ನು ನಾನಾ ರೂಪದಲ್ಲಿ ಪ್ರತಿಪಾದಿಸಿದ್ದ ಗಾಂಧೀಜಿ ಈಗ ಸದ್ದು ಗದ್ದಲಗಳ ನಡುವೆಯೂ ಪ್ರಸ್ತುತವಾಗಿರಲು ಕಾರಣ ಅವರ

ದೂರದೃಷ್ಟಿಯ ಚಿಂತನಾಕ್ರಮ. ದೇಶ ಮೊದಲು ಉಳಿದದ್ದು ನಂತರ ಎಂಬುದನ್ನು ಮೊದಲು ಮನವರಿಕೆ ಮಾಡಿಕೊಟ್ಟ ಮಹಾತ್ಮ ಅವರು.

ಇಂತಹ ಮಹಾತ್ಮ ಉದಿಸಿದ ದಿನ ಅಕ್ಟೋಬರ್ 2 ಜಾಗತಿಕವಾಗಿ ಒಂದು ಮಹತ್ವದ ದಿನ. ನೆಲ್ಸನ್ ಮಂಡೆಲಾ, ಮಾರ್ಟಿನ್ ಲೂಥರ್ ಕಿಂಗ್ ಮೊದಲಾದ ಕ್ರಾಂತಿಕಾರಿ ನಾಯಕರು ರೂಪುಗೊಳ್ಳಲು ಪ್ರೇರಣೆಯಾಗಿದ್ದು ಗಾಂಧೀಜಿ. ಇನ್ನು ಭಾರತದಲ್ಲಿ ಗಾಂಧಿ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ದೇಶದ ರಥವನ್ನು ಎಳೆದವರು ಲೆಕ್ಕಕ್ಕೆ ಸಿಗದಷ್ಟು ಗಣ್ಯರು. ಇಷ್ಟೆಲ್ಲಾ ಮೆಚ್ಚುಗೆ ಅಭಿಮಾನಗಳ ನಡುವೆಯೂ ಕೂಡಾ ಟೀಕಾಕಾರರ ಕೂರಂಬಗಳು ಗಾಂಧಿ ಮಹಾತ್ಮನ ಕಡೆ ಗುರಿ ಇಡುವುದು ಇನ್ನೂ ನಿಂತಿಲ್ಲ. ಕೆಲವರಿಗೆ ವೈಚಾರಿಕ ದೃಷ್ಟಿಕೋನದಿಂದ ಗಾಂಧಿ ಅಪಥ್ಯ ಎನಿಸಿದರೆ ಇನ್ನು ಕೆಲವರಿಗೆ ಆಚಾರದ ದೃಷ್ಟಿಯಿಂದ ಅಪಥ್ಯ. ಆದರೆ, ಈ ಎರಡೂ ಬಣಗಳನ್ನು ನಿವಾಳಿಸುವ ರೀತಿಯಲ್ಲಿ ಅಭಿಮಾನಿಗಳ ಸಂಘ ಗಾಂಧಿ ಮಹಾತ್ಮನ ಆರಾಧಕರಾಗಿರುವ ಹಿಂದಿರುವುದು ನುಡಿದಂತೆ ನಡೆದು ದೇಶಕ್ಕೆ–ಜಗತ್ತಿಗೆ ಮಾದರಿಯಾಗಿರುವ ಮಹತ್ವದ ಬೆಳವಣಿಗೆ.

ಸ್ವಾತಂತ್ರ್ಯವೆಂಬುದು ಸಮಸ್ತ ಹೋರಾಟಗಾರ ಗುರಿಯಾಗಿದ್ದ ಸಂದರ್ಭ. ಆದರೆ, ಗುರಿ ಮುಟ್ಟುವ ಮಾರ್ಗಗಳು ಮಾತ್ರ ಬೇರೆ ಬೇರೆ. ಇಂತಹ ದಿಕ್ಕೆಡುವ ಸಂದರ್ಭದಲ್ಲಿ ಎಲ್ಲಾ ಹೋರಾಟಗಾರರನ್ನು ಅಹಿಂಸಾತ್ಮಕ ಮಾರ್ಗದಲ್ಲಿ ಒಂದೇ ಮನಸ್ಸಿನಿಂದ ಹೋರಾಡಲು ಮನವರಿಕೆ ಮಾಡಿಕೊಟ್ಟದ್ದು ಸಾಮಾನ್ಯ ಸಾಧನೆಯಾಗದು. ಬೆಂಕಿಯ ಚೆಂಡಿನಂತಹ ನೇತಾಜಿ ಸುಭಾಷ್ ಚಂದ್ರಬೋಸ್, ಭಗತ್ ಸಿಂಗ್, ಖುದಿರಾಂ ಬೋಸ್, ಚಂದ್ರಶೇಖರ ಆಜಾದ್, ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂದ ಬಾಲಗಂಗಾಧರ ತಿಲಕ್, ಲಾಲಾ ಲಜಪತರಾಯ್, ವೈಚಾರಿಕ ಪ್ರಖರತೆಯ ಬಿ.ಆರ್.ಅಂಬೇಡ್ಕರ್, ಗೋಪಾಲಕೃಷ್ಣ ಗೋಖಲೆ, ಸರೋಜಿನಿ ನಾಯ್ಡು ಅಬ್ದುಲ್ ಕಲಾಂ ಆಜಾದ್, ದಾದಾಬಾಯಿ ನವರೋಜಿ, ಜವಹರಲಾಲ್ ನೆಹರೂ, ವಲ್ಲಭಬಾಯಿ ಪಟೇಲ್ ಮೊದಲಾದ ಧೀಮಂತ ಚೈತನ್ಯಗಳನ್ನು ಒಂದೇ ದಾರಿಗೆ ಬರುವಂತೆ ಮಾಡಿ ಸ್ವಾತಂತ್ರ್ಯ ಪ್ರಾಪ್ತವಾಗುವಂತೆ ಮಾಡಿದ ಸೂತ್ರಧಾರತ್ವ ವಹಿಸಿದ ಗಾಂಧಿಯವರಿಗೆ ಮಹಾತ್ಮ ಗೌರವ ಸಿಕ್ಕಿದ್ದು ಎಲ್ಲಾ ದೃಷ್ಟಿಕೋನದಿಂದಲೂ ಸಮರ್ಥನೀಯ. ಗಾಂಧೀಜಿಯವರ ವ್ಯಕ್ತಿತ್ವವನ್ನು ಅರಿಯಬೇಕಾದರೆ ಅವರೇ ರಚಿಸಿರುವ 'ಮೈ ಲೈಫ್ ಇಸ್ ಮೈ ಮೇಸೇಜ್' ಹಾಗೂ 'ಮೈ ಎಕ್ಸಪೆರಿಮೆಂಟ್ಸ್ ವಿತ್ ಟ್ರೂಥ್' ಕೃತಿಗಳ ಅಧ್ಯಯನ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ.

ಈ ಬಾರಿಯ ಗಾಂಧಿ ಜಯಂತಿ ಕರ್ನಾಟಕದ ಮಟ್ಟಿಗೆ ವಿಶೇಷ ಸಂಭ್ರಮಕ್ಕೆ ಕಾರಣವಾಗಬಲ್ಲದು. ಏಕೆಂದರೆ, ಬೆಳಗಾವಿಯಲ್ಲಿ 1924ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದು ಗಾಂಧೀಜಿ ಎಂಬುದು ಮಹತ್ವದ ಸಂಗತಿ. ಶತಮಾನದ ನೆನಪನ್ನು ಅರಳಿಸುವ ಬೆಳಗಾವಿ ಅಧಿವೇಶನ ಕರ್ನಾಟಕಕ್ಕೆ ಶತಮಾನದ ಮೆರುಗನ್ನು ತಂದು ಕೊಟ್ಟಿದೆ.

**ಲೇಖಕರು: ಯು.ಬಿ. ವೆಂಕಟೇಶ್ ವಿಧಾನಪರಿಷತ್ ಸದಸ್ಯರು**

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 30.09.2024